ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

ಶುಕ್ರವಾರ, ಡಿಸೆಂಬರ್ 29, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 226 RNI : 27369/75

janathavani@mac.com
www.janathavani.com
08192 254736 91642 99999

ಭರಮಸಾಗರದಲ್ಲಿ ಕೆರೆ ವೀಕ್ಷಿಸಿದ ತರಳಬಾಳು ಶ್ರೀ



ಸಿರಿಗೆರೆಯ ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರು ಗುರುವಾರ ಭರಮಸಾಗರ ಏತ ನೀರಾವರಿ ಯೋಜನೆಯ ಭರಮಣ್ಣನಾಯಕನ ಕೆರೆ ವೀಕ್ಷಿಸಿದರು. ಮಾಜಿ ಸಚಿವ ಹೆಚ್.ಆಂಜನೇಯ, ಜಗಳೂರು ಶಾಸಕ ದೇವೇಂದ್ರಪ್ಪ ಹಾಗು ಇತರರು ಶ್ರೀಗಳೊಂದಿಗೆ ಹೆಜ್ಜೆ ಹಾಕುತ್ತಿರುವುದು.

# ಕನ್ನಡ ಫಲಕ ಕಡ್ಡಾಯಕ್ಕಾಗಿ ಸುಗ್ರೀವಾಜ್ಞೆ

## ಕನ್ನಡಪರ ಸಂಘಟನೆಗಳ ಹೋರಾಟದ ಬೆನ್ನಲ್ಲೇ ಮುಖ್ಯಮಂತ್ರಿಗಳಿಂದ ಮಹತ್ವದ ತೀರ್ಮಾನ

ಬೆಂಗಳೂರು, ಡಿ. 28 - ಅಂಗಡಿ-ಮುಂಗಟ್ಟು ಹಾಗೂ ವಾಣಿಜ್ಯ ಸಂಸ್ಥೆಗಳು 2024ರ ಫೆಬ್ರವರಿ ಅಂತ್ಯದೊಳಗೆ ಕನ್ನಡ ನಾಮಫಲಕಗಳನ್ನು ಕಡ್ಡಾಯವಾಗಿ ಅಳವಡಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಕನ್ನಡ ನಾಮಫಲಕ ಹಾಕುವಂತೆ ಒತ್ತಾಯಿಸಿ ರಾಜ್ಯಾದ್ಯಂತ ಕನ್ನಡ ಪರ ಸಂಘಟನೆಗಳು ಬೀದಿಗಿಳಿದು ಹೋರಾಟ ನಡೆಸುತ್ತಿರುವ ಬೆನ್ನಲ್ಲೇ ಮುಖ್ಯಮಂತ್ರಿ ಅವರಿಂದು ಗೃಹ ಕಚೇರಿ ಕೃಷ್ಣಾದಲ್ಲಿ ಉನ್ನತ ಮಟ್ಟದ ಸಭೆ ನಡೆಸಿ ಈ ಮಹತ್ವದ ತೀರ್ಮಾನ ಕೈಗೊಂಡಿದ್ದಾರೆ.

ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಭಾಷೆ, ಇದರಲ್ಲಿ ಯಾವುದೇ ರಾಜೀ ಇಲ್ಲ. ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ 2022ರ ಸೆಕ್ಷನ್ 17 (6)ಕ್ಕೆ ಸುಗ್ರೀವಾಜ್ಞೆ ಮೂಲಕ ತಿದ್ದುಪಡಿ ತಂದು ಕನ್ನಡ ನಾಮಫಲಕ ಹಾಕುವುದನ್ನು ಕಡ್ಡಾಯಗೊಳಿಸಲಾಗುವುದು ಎಂದಿದ್ದಾರೆ.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಗ್ರೀವಾಜ್ಞೆ ಜಾರಿ ನಂತರ ಅಂಗಡಿ-ಮುಂಗಟ್ಟುಗಳಿಗೆ



ಕನ್ನಡ ನಾಮಫಲಕ ಅಳವಡಿಕೆಗೆ ಗಡುವು ನೀಡಲಾಗುವುದು ಎಂದರು.

ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮದ ಪ್ರಕಾರ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಅನುಮೋದನೆ ಯೊಂದಿಗೆ ನಡೆಸುತ್ತಿರುವ ವಾಣಿಜ್ಯ ಕೈಗಾರಿಕೆ, ವ್ಯಾಪಾರ ಸಂಸ್ಥೆ, ನ್ಯಾಸಗಳು, ಸಮಾಲೋಚನಾ ಕೇಂದ್ರಗಳು, ಆಸ್ಪತ್ರೆಗಳು, ಪ್ರಯೋಗಾಲಯಗಳು, ಮನೋರಂಜನಾ ಕೇಂದ್ರಗಳು ಮತ್ತು ಹೋಟೆಲ್ ಮುಂತಾದವುಗಳ ಹೆಸರನ್ನು ಪ್ರದರ್ಶಿಸುವ ಫಲಕಗಳ ಮೇಲಿನ ಅರ್ಧ ಭಾಗವು ಕನ್ನಡದಲ್ಲಿ ಇರತಕ್ಕದ್ದು ಎಂದು ತಿಳಿಸಲಾಗಿದೆ.

ಇದಕ್ಕೂ ಮೊದಲು 2018ರಲ್ಲಿ ಹೊರಡಿಸಿದ ಸುತ್ತೋಲೆಯಲ್ಲಿ ನಾಮ ಫಲಕದಲ್ಲಿ ಶೇ.60 ಕನ್ನಡ ಭಾಷೆ ಹಾಗೂ ಶೇ.40ರಷ್ಟು ಇತರೆ ಭಾಷೆಯಲ್ಲಿರಬಹುದು ಎಂದು ತಿಳಿಸಲಾಗಿದೆ.

ಇದರಂತೆಯೇ ಸುಗ್ರೀವಾಜ್ಞೆ ಹೊರಡಿಸಿ, ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ 2022ರ ಸೆಕ್ಷನ್ 17 (6)ಕ್ಕೆ ತಿದ್ದುಪಡಿ ತಂದು 2024ರ ಫೆಬ್ರವರಿ 28 ರೊಳಗೆ ವಾಣಿಜ್ಯ ಮಳಿಗೆಗಳು ಅನುಷ್ಠಾನಗೊಳಿಸಲು ಗಡುವು ನೀಡಲಾಗುವುದು.

ಈ ಕಾಯ್ದೆಯ ನಿಯಮ 17(8) ರಲ್ಲಿ ರಾಜ್ಯದಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾದ ಜಾಹೀರಾತು ಮತ್ತು ಸೂಚನೆಗಳನ್ನು ಪ್ರದರ್ಶಿಸುವ ಎಲ್ಲ ಫಲಕಗಳಲ್ಲಿ ವಿಷಯಗಳ ನಿಗದಿತ ಶೇಕಡಾವಾರು ಪ್ರಮಾಣವು ಕನ್ನಡ ಭಾಷೆಯಲ್ಲಿರತಕ್ಕದ್ದು.

ಜಾಹೀರಾತುಗಳ (2ನೇ ಪುಟಕ್ಕೆ)

### ಕಾನೂನಿಗೆ ವಿರುದ್ಧವಾಗಿ ನಡೆಯೋದು ಸಹಿಸೋಲ್ಲ

ಸಾರ್ವಜನಿಕರು ಹಾಗೂ ಸಂಘಟನೆಗಳು ಕಾನೂನಿಗೆ ಅನುಗುಣವಾಗಿ ನಡೆದುಕೊಳ್ಳಬೇಕು. ಇಲ್ಲವಾದರೆ ಸರ್ಕಾರ ಸಹಿಸುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಸಿದ್ದಾರೆ.

ಕನ್ನಡಪರ ಸಂಘಟನೆಗಳು ಬೆಂಗಳೂರಿನಲ್ಲಿ ಹೋರಾಟ ನಡೆಸಿ ಇಂಗ್ಲಿಷ್ ಫಲಕಗಳನ್ನು ಧ್ವಂಸಗೊಳಿಸಿದ ಹಿನ್ನೆಲೆಯಲ್ಲಿ ಅವರು ಈ ಹೇಳಿಕೆ ನೀಡಿದರು.

ಶಾಂತಿಯುತ ಹೋರಾಟವನ್ನು ನಾವು ತಡೆಯುವುದಿಲ್ಲ. ಆದರೆ, ಪ್ರತಿಭಟನಾಕಾರರು ಕಾನೂನು ಕೈಗೆತ್ತಿಕೊಳ್ಳಬಾರದು ಎಂದು ಹೇಳಿದರು.

ಪ್ರತಿಭಟನೆಗಳನ್ನು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಮಾತ್ರ ನಡೆಸಬೇಕು, ರಾಜ್ಯ ಸರ್ಕಾರ ಇದನ್ನು ಖಾತರಿಪಡಿಸಬೇಕು ಎಂದು ಕರ್ನಾಟಕ ಹೈಕೋರ್ಟ್ ಸ್ಪಷ್ಟವಾದ ಆದೇಶ ಹೊರಡಿಸಿದೆ ಎಂದೂ ಸಿದ್ದರಾಮಯ್ಯ ಹೇಳಿದರು.

ರಾಜ್ಯದ ಹಿತದೃಷ್ಟಿಯಿಂದ ಶಾಂತಿಯುತ ಪ್ರತಿಭಟನೆ ಮಾಡಿದರೆ, ವಿರೋಧಿಸುವುದಿಲ್ಲ, ಕಾನೂನು ಕೈಗೆತೆಗೆದುಕೊಂಡರೆ ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದು ಎಚ್ಚರಿಸಿದರು. ಸಂಘಟನೆಯಿರಲೀ, (2ನೇ ಪುಟಕ್ಕೆ)

### ಬರಗಾಲ: ತರಳಬಾಳು ಹುಣ್ಣಿಮೆ ಮುಂದೂಡಿಕೆ



ಭರಮಸಾಗರ, ಡಿ.28- ಫೆಬ್ರವರಿ 16 ರಿಂದ 24 ರ ವರೆಗೆ ಭರಮಸಾಗರದಲ್ಲಿ ನಡೆಯಬೇಕಾಗಿದ್ದ ತರಳ ಬಾಳು ಹುಣ್ಣಿಮೆ ಮಹೋತ್ಸ ವವನ್ನು ಮುಂದೂಡಲಾಗಿದೆ. ಮುಂದಿನ ವರ್ಷ ಮಹೋತ್ಸವವನ್ನು ಭರಮಸಾಗರದಲ್ಲೇ ನಡೆಸಲಾಗುವುದು ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಭರಮಸಾಗರ ಏತ ನೀರಾವರಿ ಯೋಜನೆಯ ಭರಮಣ್ಣನಾಯಕನ ಕೆರೆ ವೀಕ್ಷಣೆ ಮಾಡಿದ ನಂತರ ಏರ್ಪಡಿಸಲಾಗಿದ್ದ ಸಾರ್ವಜನಿಕ ಸಭೆಯಲ್ಲಿ ಆಶೀರ್ವಚನ ನೀಡಿದ ಶ್ರೀಗಳು, ರಾಜ್ಯದಲ್ಲಿ ಭೀಕರ ಬರಗಾಲದ ಬವಣೆ ಇದೆ. ಜನರು ಸಂಕಷ್ಟದಲ್ಲಿದ್ದಾರೆ. ಜನರು ಕಷ್ಟದಲ್ಲಿರುವಾಗ ವಿಜೃಂಭಣೆಯ ಮಹೋತ್ಸವ ಮಾಡುವುದು ಸರಿಯಲ್ಲ ಎಂದರು.

ಭರಮಸಾಗರದಲ್ಲಿ ನಡೆಯಬೇಕಾಗಿದ್ದ ಅದ್ಧೂರಿ ಆಚರಣೆಯನ್ನು ಮುಂದೂಡಿ, ಈ ಬಾರಿ ಸಿರಿಗೆರೆಯ ಮಠದಲ್ಲಿಯೇ ಸರಳವಾಗಿ, ಸಾಂಪ್ರದಾಯಿಕವಾಗಿ ಆಚರಿಸಲಾಗುವುದೆಂದು ಪ್ರಕಟಿಸಿದರು.

### ವಿದ್ಯಾರ್ಥಿಗಳಿಂದ ಶೌಚಾಲಯ ಸ್ವಚ್ಛತೆ : ಮುಖ್ಯೋಪಾಧ್ಯಾಯ ಸಸ್ಪೆಂಡ್

ಬೆಂಗಳೂರು, ಡಿ. 28 – ಶಾಲಾ ಮಕ್ಕಳು ಶೌಚಾಲಯ ಸ್ವಚ್ಛಗೊಳಿಸುವ ವಿಡಿಯೋ ಬೆಳಕಿಗೆ ಬಂದ ನಂತರ ಶಿವಮೊಗ್ಗ ಜಿಲ್ಲೆಯ ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯರನ್ನು ಅಮಾನತ್ತುಗೊಳಿಸಲಾಗಿದೆ.

ಭದ್ರಾವತಿ ತಾಲ್ಲೂಕಿನ ಗುಡ್ಡದ ನೇರಲಗೆರೆಯ ಸರ್ಕಾರಿ ಶಾಲೆಯಲ್ಲಿ ಶನಿವಾರ ಈ ಘಟನೆ ನಡೆದಿದೆ. ಆರನೇ ತರಗತಿಯ ವಿದ್ಯಾರ್ಥಿಗಳಿಗೆ (4ನೇ ಪುಟಕ್ಕೆ)

# ಕೆ.ಎಸ್.ಆರ್.ಟಿ.ಸಿ. ಹಳೆ ಬಸ್‌ಗಳನ್ನು ಸ್ಕ್ರಾಪ್‌ಗೆ ಹಾಕಲು ಹೈಕೋರ್ಟ್ ಆದೇಶ

ಬೆಂಗಳೂರು, ಡಿ. 28 - ಪ್ರಯಾಣಿಕರು ಹಾಗೂ ಸಂಚಾರಿಗಳ ಸುರಕ್ಷತೆ ದೃಷ್ಟಿಯಿಂದ ನಿಗದಿಗಿಂತ ಹೆಚ್ಚು ಪ್ರಯಾಣಿಸಿರುವ ಬಸ್‌ಗಳನ್ನು ಸ್ಕ್ರಾಪ್‌ಗೆ ಹಾಕುವಂತೆ ಕರ್ನಾಟಕ ಹೈಕೋರ್ಟ್ ಆದೇಶಿಸಿದೆ.

ಇಬ್ಬರು ಶಾಲಾ ಮಕ್ಕಳ ಸಾವಿಗೆ ಕಾರಣವಾದ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗಿದ್ದ ಬಸ್ ಚಾಲಕರೊಬ್ಬರು ದಾಖಲಿಸಿದ ಅರ್ಜಿಯ ವಿಚಾರಣೆ ನಡೆಸುವಾಗ ಹೈಕೋರ್ಟ್ ಈ ಆದೇಶ ಹೊರಡಿಸಿದೆ.

ಈ ಅಪಘಾತಕ್ಕೆ ಕಾರಣವಾದ ಬಸ್ 10 ಲಕ್ಷ ಕಿ.ಮೀ.ಗೂ ಹೆಚ್ಚು ದೂರ ಸಂಚರಿಸಿತ್ತು ಹಾಗೂ ಉತ್ತಮ ಪರಿಸ್ಥಿತಿಯಲ್ಲಿ ಇರಲಿಲ್ಲ. ಈ ಹಿನ್ನೆಲೆಯಲ್ಲಿ



ಬಸ್ ಅನ್ನು ಸ್ಕ್ರಾಪ್‌ಗೆ ಹಾಕಬೇಕಿತ್ತು ಎಂದು ಹೈಕೋರ್ಟ್ ಹೇಳಿದೆ.

ಕೆ.ಎಸ್.ಆರ್.ಟಿ.ಸಿ.ಯ ಬಸ್ ಅಂಕೋಲದ ಕೆ.ಸಿ. ರಸ್ತೆಯಲ್ಲಿ ಅಪಘಾತಕ್ಕೆ ಕಾರಣವಾಗಿತ್ತು. ಅಪಘಾತದಲ್ಲಿ ಧನಂಜಯ (13) ಹಾಗೂ ಅಭಿಲಾಷ್ ಮಾರುತಿ (12) ಅವರು ಸಾವನ್ನಪ್ಪಿದ್ದರು.

ಈ ಘಟನೆಯ ಬಗ್ಗೆ ಚಾಲಕ ಸತೀಶ್ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು. ಸಾವಿಗೆ ಕಾರಣವಾದ ಹಿನ್ನೆಲೆಯಲ್ಲಿ ಕೆಳ ನ್ಯಾಯಾಲಯ ಒಂದು ವರ್ಷದ ಜೈಲು ಶಿಕ್ಷೆ ವಿಧಿಸಿತ್ತು. ನಿರ್ಲಕ್ಷ್ಯದ ಚಾಲನೆಗಾಗಿ 2 ತಿಂಗಳು ಶಿಕ್ಷೆ ವಿಧಿಸಲಾಗಿತ್ತು.

ಈ ಆದೇಶದ ವಿರುದ್ಧ ಸತೀಶ್ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.

ವಿಚಾರಣೆ ನಡೆಸಿದ ಹೈಕೋರ್ಟ್, ಬಸ್ ದುಸ್ಥಿತಿಯಲ್ಲಿದ್ದ ಬಗ್ಗೆ ಚಾಲಕನಿಗೆ ತಿಳಿದಿತ್ತು. ಇಂತಹ ಬಸ್ ಚಲಾಯಿಸಲು ಚಾಲಕ ನಿರಾಕರಿಸಬೇಕಿತ್ತು ಎಂದು ತಿಳಿಸಿದೆ. ಒಂದು ವರ್ಷದ ಜೈಲು ಶಿಕ್ಷೆಯನ್ನು ಹೈಕೋರ್ಟ್ ಆರು ತಿಂಗಳಿಗೆ ಕಡಿಮೆ ಮಾಡಿತ್ತು.

ಹತ್ತು ಲಕ್ಷ ಕಿ. (4ನೇ ಪುಟಕ್ಕೆ)

### ಇ.ಡಿ. ಆರೋಪ ಪಟ್ಟಿಯಲ್ಲಿ ಪ್ರಿಯಾಂಕ ವಾದ್ರಾ ಹೆಸರು



ನವದೆಹಲಿ, ಡಿ. 29 - ಜಾರಿ ನಿರ್ದೇಶನಾಲಯ ದಾಖಲಿಸಿರುವ ಅಕ್ರಮ ಹಣ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕಿ ಪ್ರಿಯಾಂಕ ಗಾಂಧಿ ವಾದ್ರಾ ಹೆಸರು ಸೇರಿಕೊಂಡಿದೆ.

ಪ್ರಿಯಾಂಕ ಪತಿ ರಾಬರ್ಟ್ ವಾದ್ರಾ ಅವರು 2005-06ರಲ್ಲಿ ಹರಿಯಾಣದಲ್ಲಿ ಮೂರು ಜಮೀನು ಖರೀದಿಸಿದ್ದರು. ಈ ಬಗ್ಗೆ ಜಾರಿ ನಿರ್ದೇಶನಾಲಯ ತನಿಖೆ ನಡೆಸುತ್ತಿದೆ. ಈ ಪ್ರಕರಣದಲ್ಲಿ ಪ್ರಿಯಾಂಕ ವಾದ್ರಾ ವಿರುದ್ಧವೂ ತನಿಖೆ ನಡೆಸಲಾಗುತ್ತಿದೆ ಎಂದು ಜಾರಿ ನಿರ್ದೇಶನಾಲಯದ ಆರೋಪ ಪಟ್ಟಿಯಲ್ಲಿ ಹೇಳಲಾಗಿದೆ.

ಕಳೆದ ನವೆಂಬರ್ ತಿಂಗಳಲ್ಲಿ ಅನಿವಾಸಿ ಉದ್ಯಮಿ ಸಿ.ಸಿ. ಥಂಪಿ ವಿರುದ್ಧ ಜಾರಿ ನಿರ್ದೇಶನಾಲಯ ಆರೋಪ ಪಟ್ಟಿ ದಾಖಲಿಸಿತ್ತು. ಥಂಪಿಗೂ ರಾಬರ್ಟ್ ವಾದ್ರಾ ಮತ್ತು ಸುಮಿತ್ (2ನೇ ಪುಟಕ್ಕೆ)

### ಐ.ಎನ್.ಡಿ.ಐ.ಎ. ಗೆದ್ದರೆ 6 ಸಾವಿರ ರೂ., ಜಾತಿ ಗಣತಿ

ನಾಗಪುರ ಸಮಾವೇಶದಲ್ಲಿ ಕಾಂಗ್ರೆಸ್ ಘೋಷಣೆ

ನಾಗಪುರ, ಡಿ. 28 – ಹಲವಾರು ವಲಯಗಳಲ್ಲಿ ಒ.ಬಿ.ಸಿ., ದಲಿತರು ಹಾಗೂ ಬುಡಕಟ್ಟು ಜನರಿಗೆ ಪ್ರಾತಿನಿಧ್ಯ ಇಲ್ಲ ಎಂದು ಹೇಳಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಪ್ರತಿಪಕ್ಷಗಳ ಒಕ್ಕೂಟವಾದ ಐ.ಎನ್.ಡಿ.ಐ.ಎ. ಅಧಿಕಾರಕ್ಕೆ ಬಂದರೆ ಜಾತಿ ಗಣತಿ ನಡೆಸಲಿದೆ ಎಂದು ಘೋಷಿಸಿದ್ದಾರೆ.

ಕಾಂಗ್ರೆಸ್ ಪಕ್ಷದ 139ನೇ ಸ್ಥಾಪನಾ ದಿನಾಚರಣೆ ಅಂಗವಾಗಿ ಆಯೋಜಿಸಲಾಗಿದ್ದ 'ಹೈ ತಯ್ಯಾರ್ ಹಮ್' (ನಾವು ಸಿದ್ಧರಾಗಿದ್ದೇವೆ) ಎಂಬ ಸಮಾವೇಶದಲ್ಲಿ ಮಾತನಾಡಿದ ರಾಹುಲ್ ಗಾಂಧಿ, ಬಿಜೆಪಿ ಹಾಗೂ ಆರ್.ಎಸ್.ಎಸ್.ಗಳು ದೇಶವನ್ನು (4ನೇ ಪುಟಕ್ಕೆ)

# ಕೆಲಸದ ಸ್ಥಳದಲ್ಲಿ ಮಹಿಳೆಯರಿಗೆ ಗೌರವಯುತ ವಾತಾವರಣ ಕಲ್ಪಿಸಿ



ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್

ದಾವಣಗೆರೆ, ಡಿ. 28 - ಮಹಿಳೆಯರು ಕೆಲಸ ಮಾಡುವ ಸ್ಥಳಗಳಲ್ಲಿ ಸುರಕ್ಷಿತ , ಭಯ ಮುಕ್ತ ಮತ್ತು ಗೌರವಯುತ ವಾತಾವರಣ ಕಲ್ಪಿಸಬೇಕೆಂದು ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದೊಂದಿಗೆ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಜರುಗಿದ ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ತಡೆ ಕಾಯ್ದೆ-2013 ಕುರಿತ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಉದ್ಯೋಗ ಸ್ಥಳಗಳಲ್ಲಿ ಮಹಿಳೆಯರ ಮೇಲಾಗುತ್ತಿರುವ ಲೈಂಗಿಕ ಕಿರುಕುಳ ತಡೆಯಲು ಈ ಕಾಯ್ದೆಯನ್ನು ಜಾರಿಗೊಳಿಸಲಾಗಿದೆ. ಸರ್ಕಾರಿ, ಅರೆ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲಾ-ಕಾಲೇಜು, ಸಂಸ್ಥೆಗಳಲ್ಲಿ ಆಂತರಿಕ ಕಿರುಕುಳ ಸಮಿತಿ ರಚಿಸಲಾಗಿದೆ. ಮಹಿಳೆಯರು ತಮ್ಮ ಮೇಲಾಗುವ ದೌರ್ಜನ್ಯ ಹಾಗೂ ಕಿರುಕುಳವನ್ನು ಗೌಪ್ಯವಾಗಿಡದೆ ಮುಕ್ತವಾಗಿ ಆಂತರಿಕ ಕಿರುಕುಳ ಸಮಿತಿಗೆ ದೂರ ನೀಡಬಹುದು. ಇಲಾಖೆಗಳು ನೊಂದ ಮಹಿಳೆಯರ ಹೆಸರನ್ನು ಬಹಿರಂಗಪಡಿಸದೇ ತಪ್ಪಿತಸ್ಥರನ್ನು ವಿಚಾರಣೆಗೆ ಒಳಪಡಿಸಬೇಕು ಎಂದರು.


ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರನ್ನು ಗುರಿಯಾಗಿಸಿಕೊಂಡು ದೌರ್ಜನ್ಯವೆಸಗುತ್ತಿರುವುದು ಈಗಲೂ ಕಂಡು ಬರುತ್ತಿದೆ. ಈ ಕಾಯ್ದೆಗನುಸಾರವಾಗಿ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಕರೆಣ್ಣವರ ಮಾತನಾಡಿ, ಕೆಲಸದ ಸ್ಥಳಗಳಲ್ಲಿ ಮಹಿಳೆಯರನ್ನು ಗೌರವದಿಂದ ಕಾಣಬೇಕು. ಸಹ ಉದ್ಯೋಗಿಗಳು ಯಾವುದೇ ಕಿರುಕುಳ ನೀಡಿದರೆ, ಆಂತರಿಕ ಸಮಿತಿಯ ಮೂಲಕ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುತ್ತದೆ ಎಂದರು.

ಅಪರ ಜಿಲ್ಲಾಧಿಕಾರಿ ಪಿ.ಎನ್ ಲೋಕೇಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ವಾಸಂತಿ ಉಪ್ಪಾರ್, ತಾಲ್ಲೂಕು ಆರೋಗ್ಯಾಧಿಕಾರಿ ಡಾ. ದೇವರಾಜ್ ಅನಿತಾ ಮತ್ತಿತರರು ಉಪಸ್ಥಿತರಿದ್ದರು.

# ಕಥೆ ಜೀವಂತವಾಗಿರಬೇಕಾದರೆ ಕಥೆಗಾರ ಕಥೆಯನ್ನು ಸರಳವಾಗಿಸಬೇಕು

## ಸಿರಿಗೆರೆ ಬೃಹನ್ಮಠದ ಕಾರ್ಯಕ್ರಮದಲ್ಲಿ ವಿಮರ್ಷಕ ಹೆಚ್.ಎಸ್.ಸತ್ಯನಾರಾಯಣ



ಸಿರಿಗೆರೆ, ಡಿ.28- ದೀರ್ಘವಾದ ಕಥೆ, ಸಣ್ಣಕಥೆ, ಲಲಿತ ಪ್ರಬಂಧ, ಕಾದಂಬರಿಗಳು ಹೇಗೆ ಕನ್ನಡ ಸಾಹಿತ್ಯದ ಪ್ರಮುಖ ಪ್ರಕಾರಗಳಾಗಿವೆಯೋ ಹಾಗೆ ಪೂರ್ಣಚಂದ್ರ ತೇಜಸ್ವಿಯವರ ಕಥೆ ವಿಚಾರಗೋಷ್ಠಿಪಠ್ಯವಾಗಿರದೇ ಮಹಾನ್ ಲೇಖಕರ ಕೃತಿಯನ್ನು ಅರ್ಥೈಸಿಕೊಳ್ಳುವ ಕಾರ್ಯಕ್ರಮವಾಗಿದೆ ಎಂದು ವಿಮರ್ಶಕ, ಅಂಕಣಕಾರ ಮತ್ತು ಕನ್ನಡ ಪ್ರಾಧ್ಯಾಪಕ ಹೆಚ್.ಎಸ್. ಸತ್ಯನಾರಾಯಣ ಅಭಿಪ್ರಾಯಪಟ್ಟರು.

ಇಲ್ಲಿನ ಗುರುಶಾಂತೇಶ್ವರ ಭವನದಲ್ಲಿ ಗುರುವಾರ ಏರ್ಪಡಿಸಿದ್ದ ದ್ವಿತೀಯ ಪಿಯುಸಿ ಭಾಷಾ ವಿಷಯದ ಪಠ್ಯವಾಗಿರುವ ಕೃಷ್ಣೇಗೌಡರ ಆನೆ ನೀಳ್ಗತೆಯ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಥೆ ತೇಜಸ್ವಿಯವರ ಆಲೋಚನೆ, ವಿಚಾರದೃಷ್ಟಿ, ಗ್ರಾಮ ಭಾರತದ ಚಿತ್ರಣ, ಸಾಮಾನ್ಯ ಜನರ ಮಾನವೀಯತೆ, ಸುತ್ತಮುತ್ತಲಿನ ವಾತಾವರಣ ಅರ್ಥೈಸಿಕೊಳ್ಳುವ ಹಾಗೆ ಜೀವತುಂಬಿದೆ. ಇಲ್ಲಿ ಸನ್ನಿವೇಶ, ದೃಶ್ಯ, ಸಂಭಾಷಣೆ, ವಿಚಾರ ಪ್ರಚೋದನೆಗಳು, ವಿಮರ್ಶೆ ಹಾಗೂ ಚಿಂತನೆಗೆ ಇಂತಹ ವೇದಿಕೆಗಳು ಅವಶ್ಯಕವಾಗಿವೆ. ಅರಣ್ಯ ಸಂಸ್ಕೃತಿ, ನಗರ ಸಂಸ್ಕೃತಿಯನ್ನು ಬಿಂಬಿಸಿದೆ.

ಸಮಾಜದಲ್ಲಿನ ಕೆಳವರ್ಗದವರ ಕಾರ್ಯಗಳನ್ನು ಎತ್ತಿಹಿಡಿದಿದೆ. ವೈರುಧ್ಯ ಹಾಗೂ ದುರಂತಗಳಿಗೆ ಇಲ್ಲಿನ ಪ್ರಾಣಿ (ಆನೆ) ಯೇ ಅಪರಾಧಿಯಾಗಿ ಕಾಣುತ್ತದೆ ಎಂಬುದು ನೋಡುಗರ, ಮಾನವೀಯರ ಮನುಷ್ಯರ ಕಥನ ಇಲ್ಲಿದೆ. ಪ್ರಸ್ತುತ ವಿವಿಧ ಇಲಾಖೆಗಳಲ್ಲಿರುವ ಅವ್ಯವಸ್ಥೆ, ಭ್ರಷ್ಟಾಚಾರ ವ್ಯವಸ್ಥೆ, ಸಂಕುಚಿತ ಮನುಷ್ಯನ ಮನಸ್ಥಿಯನ್ನು ಹೊಂದಿದ್ದು ಮತ್ತೊಬ್ಬರನ್ನು ಆರೋಪಿಸುವಂತದ್ದು ಕಥೆಯಲ್ಲಿದೆ ಎಂದರು.

ಬೆಂಗಳೂರಿನ ರಂಗಕರ್ಮಿ, ಪತ್ರಕರ್ತ ಶಶಿಕಾಂತ ಯಡಹಳ್ಳಿ ಮಾತನಾಡಿ, ಪೂರ್ಣಚಂದ್ರ ತೇಜಸ್ವಿಯವರು ಸರಳ ಭಾಷೆ, ಹಾಸ್ಯಮಯವಾಗಿ ಕಥೆಯನ್ನು ಮಾನವ ಧರ್ಮ, ವಿಶ್ವ ಧರ್ಮದ ದೃಷ್ಟಿಕೋನದಲ್ಲಿ ಈ ಕಥೆಯನ್ನು ತಂದಿದ್ದಾರೆ. ಕೆಳವರ್ಗದ ನೌಕರರ ಬಗೆಗೆ ವ್ಯವಸ್ಥೆಯಲ್ಲಿನ ನ್ಯೂನತೆ ಹಾಗೂ ದೌರ್ಬಲ್ಯಗಳನ್ನು ವಿಶ್ಲೇಷಿಸಿದೆ. ಕೇಳಿದ, ನೋಡಿದ, ಸಂಗತಿಯನ್ನು, ಇತ್ತೀಚಿನ ಘಟನೆಗಳನ್ನು ಆಧರಿಸಿ (4ನೇ ಪುಟಕ್ಕೆ)

# ತರೀಕೆರೆ-ಕಡೂರಿಗೆ ನೀರು ಹರಿಸುವ ಆದೇಶ ರದ್ದು ಮಾಡಿ

## ನೀರಾವರಿ ಇಲಾಖೆ ಇಇ ಕಚೇರಿ ಮುಂದೆ ರೈತರ ಪ್ರತಿಭಟನೆ

ದಾವಣಗೆರೆ, ಡಿ. 28- ನಾಳೆಯಿಂದ ತರೀಕೆರೆ ಮತ್ತು ಕಡೂರಿಗೆ ನೀರು ಹರಿಸುವ ಆದೇಶ ರದ್ದು ಮಾಡುವಂತೆ ಒತ್ತಾಯಿಸಿ ಗುರುವಾರ ನಗರದ ನೀರಾವರಿ ಇಲಾಖೆ ಕಾರ್ಯಪಾಲಕ ಅಭಿಯಂತರರ ಕಚೇರಿ ಎದುರು ರೈತ ಮುಖಂಡರು ಪ್ರತಿಭಟನೆ ನಡೆಸಿದರು.

ಭದ್ರಾ ಮೇಲ್ದಂಡೆ ಯೋಜನೆಯಡಿ ತರೀಕೆರೆ ಏತ ನೀರಾವರಿ ಯೋಜನೆ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸಲು ಅನುವಾಗುವಂತೆ ಮತ್ತು ಭದ್ರಾ ಮೇಲ್ದಂಡೆ ಯೋಜನೆ ಮುಖ್ಯ ಕಾಲುವೆಯ ಮೂಲಕ ವಾಣಿ ವಿಲಾಸ ಸಾಗರಕ್ಕೆ ನೀರನ್ನು ಹರಿಸಲು ಅನುವಾಗುವಂತೆ ಭದ್ರಾ ಜಲಾಶಯದ ನೀರನ್ನು ಒಳಹರಿವಿನ ಪ್ರಮಾಣ ಹೆಚ್ಚಾದ ನಂತರ ಮತ್ತು ನೀರಿನ ಲಭ್ಯತೆ ನೋಡಿಕೊಂಡು ನೀರು ಹರಿಸಬೇಕು ಎಂದು ಸರ್ಕಾರದ ಜಲಸಂಪನ್ಮೂಲ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಆದೇಶ ನೀಡಿದ್ದಾರೆ.

ಆದರೆ ಭದ್ರಾ ಸೂಪರಿಂಟೆಂಡೆಂಟ್ ಇಂಜಿನಿಯರ್ ಅವರು ತರೀಕೆರೆ ಮತ್ತು ಕಡೂರು ಭಾಗದ ರೈತರ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ಬವಣೆಯನ್ನು ನೀಗಿಸುವ ಸಲುವಾಗಿ ಎಂದು ಕಾರಣ ನೀಡಿ ಡಿ.29 ರಿಂದ ಪ್ರತಿ ದಿನ 700 ಕ್ಯೂಸೆಕ್ಸ್ ನಂತೆ 4 ದಿನ ನೀರು ಬಿಡುವುದಾಗಿ ಘೋಷಿಸಿದ್ದಾರೆ.

ಈ ಕ್ರಮದಿಂದಾಗಿ ಭದ್ರಾ ಅಚ್ಚುಕಟ್ಟು ಪ್ರದೇಶದ ರೈತರಿಗೆ ಬಹಳ ಅನ್ಯಾಯವಾಗುತ್ತದೆ ಎಂದು ರೈತ ಮುಖಂಡರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಭದ್ರಾ ನೀರಾವರಿ ಸಲಹಾ ಸಮಿತಿ ಸಭೆ ಕರೆದು ನಿರ್ಣಯಿಸದೇ ನೀರು ಬಿಡುವ ತೀರ್ಮಾನ ಕೈಗೊಳ್ಳಬಾರದು. ತಕ್ಷಣ ಭದ್ರಾ ನೀರಾವರಿ ಸಲಹಾ ಸಮಿತಿ ಕರೆದು ಬೇಸಿಗೆ ಹಂಗಾಮಿಗೆ ನೀರು ಹರಿಸುವ ವೇಳಾಪಟ್ಟಿ ಪ್ರಕಟಣೆ ಮಾಡಬೇಕು. ತುಂಗಾದಿಂದ ಭದ್ರಾಕ್ಕೆ ಹರಿಸಬೇಕಾದ ನೀರನ್ನು ಲಿಫ್ಟ್ ಮಾಡುವ ತೀರ್ಮಾನ ಕೈಗೊಳ್ಳಬೇಕು. ಭದ್ರಾ ಮೇಲ್ದಂಡೆ (2ನೇ ಪುಟಕ್ಕೆ)


### ಅಯೋಧ್ಯೆಯ ವಿಮಾನ ನಿಲ್ದಾಣಕ್ಕೆ ಮಹರ್ಷಿ ವಾಲ್ಮೀಕಿ ಹೆಸರು

ನವದೆಹಲಿ, ಡಿ. 28 – ಅಯೋಧ್ಯೆ ವಿಮಾನ ನಿಲ್ದಾಣಕ್ಕೆ ಮಹರ್ಷಿ ವಾಲ್ಮೀಕಿ ಹೆಸರಿಡಲು ಉತ್ತರ ಪ್ರದೇಶ ಸರ್ಕಾರ ಯೋಜಿಸುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಡಿ. 30ರಂದು ಈ ವಿಮಾನ ನಿಲ್ದಾಣ ಉದ್ಘಾಟಿಸಲಿದ್ದಾರೆ.

1,450 ಕೋಟಿ ರೂ. ವೆಚ್ಚದಲ್ಲಿ ವಿಮಾನ ನಿಲ್ದಾಣ ನಿರ್ಮಿಸಲಾಗಿದೆ. ಪ್ರತಿ ವರ್ಷ 10 ಲಕ್ಷ ಜನರು ಈ ವಿಮಾನ ನಿಲ್ದಾಣ ಬಳಸಿಕೊಳ್ಳಲು ಅವಕಾಶವಿದೆ.

### ಬ್ಯಾಂಕುಗಳ ಎನ್.ಪಿ.ಎ. ಪ್ರಮಾಣ ಇಳಿಕೆ

ಮುಂಬೈ, ಡಿ. 28- ಕಳೆದ ಸೆಪ್ಟೆಂಬರ್‌ನಲ್ಲಿ ಬ್ಯಾಂಕು ಗಳಲ್ಲಿನ ನಿಷ್ಕ್ರಿಯ ಆಸ್ತಿ ಪ್ರಮಾಣ ಹಲವು ವರ್ಷಗಳಲ್ಲೇ ಅತಿ ಕಡಿಮೆ ಶೇ.0.8ರ ಹಂತಕ್ಕೆ ಬಂದಿದೆ ಎಂದು ರಿಸರ್ವ್ ಬ್ಯಾಂಕ್ ಹೇಳಿದೆ. ಬ್ಯಾಂಕೇತರ ಹಣಕಾಸು ಸಂಸ್ಥೆಗಳ (ಎನ್.ಬಿ.ಎಫ್.ಸಿ.)ಗಳಲ್ಲಿ ಸಿ.ಆರ್.ಎ.ಆರ್. ಶೇ.27.6 ಹಾಗೂ (4ನೇ ಪುಟಕ್ಕೆ)



ಶ್ಯಾಬನೂರಿನಲ್ಲಿ ನಾಳೆ ಶ್ರೀ ಆಂಜನೇಯ ಸ್ವಾಮಿ ಕಾರ್ತಿಕೋತ್ಸವ
ದಿನಾಂಕ 30.12.2023ರಂದು ಶನಿವಾರ ಸಂಜೆ
ಸರ್ವ ಭಕ್ತಾದಿಗಳಿಗೆ ಆದರದ ಸುಸ್ವಾಗತ...
ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಕಮಿಟಿ, ಶ್ಯಾಬನೂರು.

# ಭದ್ರಾ ಕಾಡಾ ಸಭೆ ಕರೆಯದೇ ಮೇಲ್ದಂಡೆಗೆ ನೀರು ಹರಿಸುವ ತೀರ್ಮಾನ



**ಮಲೇಬೆನ್ನೂರಿನಲ್ಲಿ ರೈತರ ಸಭೆ : ತತ್‌ಕ್ಷಣ ಕಾಡಾ ಸಭೆ ಕರೆಯುವಂತೆ ಒತ್ತಾಯ**

ಮಲೇಬೆನ್ನೂರು, ಡಿ. 28 - ಭದ್ರಾ ಕಾಡಾ ಸಭೆ ಕರೆಯದೇ ಭದ್ರಾ ಮೇಲ್ದಂಡೆ ಕಾಲುವೆಗೆ ನಾಳೆ ದಿನಾಂಕ 29ರಿಂದ ನೀರು ಹರಿಸುವ ಏಕಪಕ್ಷೀಯ ನಿರ್ಧಾರವನ್ನು ಖಂಡಿಸುವುದಾಗಿ ಭದ್ರಾ ಯೋಜನಾ ವ್ಯಾಪ್ತಿಯ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷ ವೈ. ದ್ಯಾವಪ್ಪರೆಡ್ಡಿ ಹೇಳಿದರು.

ಅವರು ಗುರುವಾರ ಮಲೇಬೆನ್ನೂರಿನಲ್ಲಿರುವ ಭದ್ರಾ ನಾಲಾ ನಂ.3 ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಕಛೇರಿ ಆವರಣದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಭದ್ರಾ ಅಚ್ಚುಕಟ್ಟಿನ ತೋಟದ ಬೆಳೆಗಳಿಗೆ ನೀರು ಹರಿಸುವ ಸಂಬಂಧ ಚರ್ಚಿಸಲು ಜನವರಿ ಮೊದಲ ವಾರದಲ್ಲಿ ಭದ್ರಾ ಕಾಡಾ ಸಭೆ ಕರೆಯಬೇಕೆಂದು ಒತ್ತಾಯಿಸಿದ ದ್ಯಾವಪ್ಪ ರೆಡ್ಡಿ ಅವರು, ಜನವರಿ 10ರಿಂದ ಸತತವಾಗಿ 20 ದಿವಸ ನಾಲೆಯಲ್ಲಿ ನೀರು ಹರಿಸಬೇಕು.

ಆನ್ ಪದ್ಧತಿಯಲ್ಲಿ 20 ದಿವಸ ನೀರು ಹರಿಸಿ, 20 ದಿವಸ ಬಂದ್ ಮಾಡಿ, ಮತ್ತೆ 20 ದಿವಸ ನೀರು ಹರಿಸಬೇಕೆಂಬ ಇಚ್ಛೆಯನ್ನು ಅಚ್ಚುಕಟ್ಟಿನ ರೈತರು ವ್ಯಕ್ತಪಡಿಸಿದ್ದಾರೆಂದು ದ್ಯಾವಪ್ಪರೆಡ್ಡಿ ಹೇಳಿದರು.

ರೈತ ಮುಖಂಡ ತೇಜಸ್ವಿ ಪಟೇಲ್ ಮಾತನಾಡಿ, ಭದ್ರಾ ನೀರಾವರಿ ಸಲಹಾ ಸಮಿತಿ ಸಭೆ ಕರೆಯದೇ ನಾಲೆಗೆ ನೀರು ಹರಿಸುವ ತೀರ್ಮಾನ ಕೆಟ್ಟ ಸಂಪ್ರದಾಯವಾಗಿದೆ.

ಭದ್ರಾ ಮೇಲ್ದಂಡೆ ಕಾಲುವೆಗೆ ಕುಡಿಯುವ ನೀರು ಹರಿಸುಲು ನಮ್ಮ ವಿರೋಧವಿಲ್ಲ. ಆದರೆ ಭದ್ರಾ ಕಾಡಾ ಸಭೆ ಕರೆಯದೇ ನೀರು ಹರಿಸಲು ಮುಂದಾಗಿರುವುದಕ್ಕೆ ನಮ್ಮ ವಿರೋಧವಿದೆ. ತುಂಗಾ ಜಲಾಶಯದಿಂದ ನೀರು ಲಿಫ್ಟ್ ಮಾಡಿದ ನಂತರವೇ ಭದ್ರಾ ಮೇಲ್ದಂಡೆ ಕಾಲುವೆಗೆ ನೀರು ಹರಿಸಬೇಕೆಂಬ ನಿಯಮವಿದ್ದರೂ ರಾಜಕೀಯ ಒತ್ತಡದಿಂದಾಗಿ ಈ ರೀತಿ ಏಕಾಏಕಿ ನೀರು ಹರಿಸುವುದು ಸರಿಯಲ್ಲ ಎಂದು ತೇಜಸ್ವಿ ಪಟೇಲ್ ಅವರು ತತ್‌ಕ್ಷಣ ಕಾಡಾ ಸಭೆಕರೆಯುವಂತೆ ಒತ್ತಾಯಸಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ರೈತ ಮುಖಂಡರಾದ ನಂದಿತಾವರೆ ಶಂಭುಲಿಂಗಪ್ಪ ಕುಂಬಳೂರಿನ ಕೆ.ಆಂಜನೇಯ, ದೊಡ್ಡಬಾತಿ ವಿಶ್ವಾಂಬರ, ಕೆಂಗಲಹಳ್ಳಿ ದೇವೇಂದ್ರಪ್ಪ, ಕುಕ್ಕುವಾಡದ ಡಿ.ಬಿ. ಶಂಕರ್, ಕಾರಿಗನೂರಿನ ಭ್ರಮಾನಂದ, ನಂದಿತಾವರೆಯ ಎನ್.ಪಿ. ರವಿರಾಜ್, ಡಿ.ಬಿ. ನಂದೀಶ್, ಜಿ.ಕೆ. ರಾಘವೇಂದ್ರ, ಚಂದ್ರಪ್ಪ, ಜನತಾ ಬಜಾರ್ ನಿರ್ದೇಶಕ ಪಿ.ಹೆಚ್. ಶಿವಕುಮಾರ್ ಈ ವೇಳೆ ಹಾಜರಿದ್ದರು.

# ಹರಿಹರ ನಗರಸಭೆ ಬಜೆಟ್ ಪೂರ್ವಭಾವಿ ಸಭೆ : ಚರ್ಚೆ



ಹರಿಹರ, ಡಿ.28- ನಗರದಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ತೊಂದರೆಯಾಗದಂತೆ ತಡೆಯಲು ಮುಂಜಾಗ್ರತಾ ಕ್ರಮ ವಹಿಸುವಂತೆ ಮತ್ತು ಕೊರೊನಾ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿರುವುದರಿಂದ ನಗರದಲ್ಲಿ ಸ್ವಚ್ಛತೆ ಕಾರ್ಯಕ್ಕೆ ಮೊದಲ ಆದ್ಯತೆ ನೀಡಬೇಕು ಮತ್ತು ರಂಗ ಮಂದಿರ ನಿರ್ಮಾಣ, ಹಲವಾರು ಬಡಾವಣೆಗಳ ರಸ್ತೆಗಳು ಹಾಳಾಗಿರುವುದರಿಂದ ಆದಷ್ಟು ಬೇಗನೇ ದುರಸ್ತಿ ಪಡಿಸುವುದೂ ಸೇರಿದಂತೆ ಹಲವಾರು ವಿಚಾರಗಳ ಬಗ್ಗೆ ನಗರಸಭೆಯ ಸಭಾಂಗಣದಲ್ಲಿ ನಿನ್ನೆ ನಡೆದ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಚರ್ಚಿಸಲಾಯಿತು.

ನಗರಸಭೆ ಸಭಾಂಗಣದಲ್ಲಿ ಪೌರಾಯುಕ್ತ ಐಗೂರು ಬಸವರಾಜ್ ಅವರ ಅಧ್ಯಕ್ಷತೆಯಲ್ಲಿ ನಡೆದ ಬಜೆಟ್ ಪೂರ್ವಭಾವಿ ಎರಡನೇ ಸಭೆಯಲ್ಲಿ ನಗರಸಭೆ ಸದಸ್ಯರಾದ ನಾಗರತ್ನ ಮಾತನಾಡಿ, ನಗರಸಭೆಯ ಹಲವಾರು ಬಜೆಟ್ ಸಭೆಗಳಲ್ಲಿ ಚರ್ಚೆ ಆಗಿರುವ ವಿಚಾರಗಳಿಗೆ ಮನ್ನಣೆ ಸಿಗದೇ ಇರುವುದರಿಂದ ಇಂದಿನ ಬಜೆಟ್ ಪೂರ್ವಭಾವಿ ಸಭೆಗೆ ಬಹಳಷ್ಟು ನಗರಸಭೆ ಸದಸ್ಯರು ಗೈರಾಗಿದ್ದರು.

ಜೆಡಿಎಸ್ ಮುಖಂಡ ಮಾರುತಿ ಬೇಡರ್ ಮಾತನಾಡಿ, ಇಂದ್ರಾ ನಗರದ ಪಾರ್ಕ್ ಆವರಣದಲ್ಲಿ ಇರುವಂತಹ ನೀರಿನ ಟ್ಯಾಂಕ್ ಶಿಥಿಲವಾಗಿದ್ದು, ಅದು ಬಿದ್ದು ಅವಘಡ ಸಂಭವಿಸುವ ಸಾಧ್ಯತೆ ಹೆಚ್ಚಾಗಿದೆ. ಸಾರ್ವಜನಿಕ ಆಸ್ಪತ್ರೆಗೆ ಹೋಗುವ ರಸ್ತೆ ಹದಗೆಟ್ಟು ಗುಂಡಿಗಳು ಬಿದ್ದಿರುವುದರಿಂದ ಗರ್ಭಿಣಿಯರು ರಸ್ತೆಯಲ್ಲಿ ಹೋಗುವಾಗಲೇ ಮಗುವಿಗೆ ಜನನವಾಗುವಂತಹ ಪರಿಸ್ಥಿತಿ ಹೆಚ್ಚಾಗಿದ್ದು, ಆದಷ್ಟು ಬೇಗ ರಸ್ತೆ ದುರಸ್ತಿ ಪಡಿಸುವಂತೆ ಒತ್ತಾಯಿಸಿದರು.

ಕಾಂಗ್ರೆಸ್ ಮುಖಂಡ ದಾದಾಪೀರ್ ಭಾನುವಳ್ಳಿ ಮಾತನಾಡಿ, ನಗರದಲ್ಲಿ ಸ್ವಚ್ಛತೆ ಇಲ್ಲದೇ ಗಬ್ಬೆದ್ದು ನಾರುವಂತಾಗಿದೆ. ನಗರಸಭೆಗೆ ಸಿಬ್ಬಂದಿಗಳನ್ನು ನೇಮಕಾತಿ ಮಾಡಿ ಎಂದು ಹೇಳಿದರು.

ಪತ್ರಕರ್ತ ಎಂ.ಚಿದಾನಂದ ಕಂಚಿಕೇರಿ ಮಾತನಾಡಿ, ಈಗಾಗಲೇ ಕೊರೊನಾ ಹಾವಳಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುವ ಲಕ್ಷಣಗಳು ಇರುವುದರಿಂದ ಸ್ವಚ್ಛತೆ ಕಡೆಗೆ ಗಮನ ಹರಿಸಬೇಕು. ಬೇಸಿಗೆಯಲ್ಲಿ ಕುಡಿಯುವ ನೀರಿನ ಸರಬರಾಜು ಸಮಸ್ಯೆಗಳು ಹೆಚ್ಚಾಗುವ ಸಾಧ್ಯತೆ ಇರುವ ಕಡೆಯಲ್ಲಿ ಕುಡಿಯುವ ನೀರಿಗಾಗಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕೆಂದರು.

ಬಜೆಟ್ ಮಂಡನೆ ಸಂದರ್ಭದಲ್ಲಿ ಸಾಂಸ್ಕೃತಿಕ ಭವನ ನಿರ್ಮಾಣಕ್ಕೆ ಹಣ ಮೀಸಲಿಡಬೇಕು. ಸಾಕಷ್ಟು ರಸ್ತೆಗಳು ಹಾಳಾಗಿವೆ. ದುರಸ್ತಿಪಡಿಸಲು ಕಳೆದ ಕೆಲವು ತಿಂಗಳ ಹಿಂದೆ ಗುದ್ದಲಿ ಪೂಜೆ ಆಗಿದ್ದರೂ ಸಹಿತ ಇದುವರೆಗೂ ಕಾಮಗಾರಿ ಆರಂಭಿಸಿಲ್ಲ, ಹಾಗಾಗಿ ಕಾಮಗಾರಿಯನ್ನು ಆದಷ್ಟು ಬೇಗನೆ ಪ್ರಾರಂಭಿಸುವಂತೆ ಸಭೆಯಲ್ಲಿ ಒತ್ತಾಯಿಸಿದರು.


ಈ ಸಂದರ್ಭದಲ್ಲಿ ನಗರಸಭೆ ಸದಸ್ಯರಾದ ವಿರೂಪಾಕ್ಷಪ್ಪ, ಉಷಾ ಮಂಜುನಾಥ್, ಸುಮಿತ್ರಾ, ನಗರಸಭೆ ಲೆಕ್ಕಾಧಿಕಾರಿ ನಾಗರಾಜ್, ಆರೋಗ್ಯ ಅಧಿಕಾರಿ ರವಿಪ್ರಕಾಶ್, ಸಂತೋಷ್, ಪತ್ರಕರ್ತ ಶೇಖರಗೌಡ ಪಾಟೀಲ್, ಇಂಜಿನಿಯರ್ ಮಂಜುಳಾ, ಮ್ಯಾನೇಜರ್ ಶಿವಕುಮಾರ್, ನಗರಸಭೆ ಅಧಿಕಾರಿಗಳು, ಸಿಬ್ಬಂದಿಗಳು ಹಾಜರಿದ್ದರು.

## ಹರಪನಹಳ್ಳಿ ಇಂದು-ನಾಳೆ ಪರ್ಲ್ ಉತ್ಸವ

ಪ್ರಕೃತಿ ವಿದ್ಯಾ ಸಂಸ್ಥೆಯ ಪರ್ಲ್ ಪಬ್ಲಿಕ್ ಶಾಲೆಯಲ್ಲಿ ಇಂದು ಮತ್ತು ನಾಳೆ ಪರ್ಲ್ ಉತ್ಸವ ನಡೆಯಲಿದೆ. ಪರ್ಲ್ ಉತ್ಸವದಲ್ಲಿ ಥೀಮ್ ಆಧಾರಿತ ವಸ್ತು ಪ್ರದರ್ಶನ ನಡೆಯಲಿದ್ದು, ಈ ವಸ್ತು ಪ್ರದರ್ಶನದಲ್ಲಿ ವಿವಿಧ ವಿಷಯಗಳ ಮಾಹಿತಿಯನ್ನು ಮಕ್ಕಳು ಹಾಗೂ ಪೋಷಕರು ಪಡೆದುಕೊಳ್ಳಲಿದ್ದಾರೆ. ಈ ವಸ್ತು ಪ್ರದರ್ಶನದಲ್ಲಿ ವಿಶೇಷವಾಗಿ ಇತಿಹಾಸ, ವಿಜ್ಞಾನ, ಗಣಿತ, ಕನ್ನಡ, ಸಂಗೀತ, ಮತ್ತು ಕಲಾ ಕ್ಷೇತ್ರದ ವಿಷಯಗಳು ಆಧಾರಿತಗೊಂಡಿವೆ.

## ನಗರದ ಲಲಿತ ಕಾಲೇಜಿನಲ್ಲಿಂದು ವಾರ್ಷಿಕ ಕೂಟ

ಲಲಿತ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್, ಲಲಿತ ಪ್ರಿ ಯುನಿವರ್ಸಿಟಿ ಕಾಲೇಜಿನ 'ಲಲಿತ ಉತ್ಸವ' ವಾರ್ಷಿಕ ಕೂಟವನ್ನು ಇಂದು ಸಂಜೆ 5 ಗಂಟೆಗೆ ಶಾಲಾ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಮತ್ತು ಮಕ್ಕಳ ತಜ್ಞರಾದ ಡಾ. ಕಾಳಪ್ಪನವರ್ ಆಗಮಿಸುವರು. ಶ್ರೀಮತಿ ಶಶಿಕಲಾ ಇ.ಆರ್. ಅಧ್ಯಕ್ಷತೆ ವಹಿಸುವರು. ಗೌರವಾನ್ವಿತ ಅತಿಥಿಗಳಾಗಿ ಡಾ. ರವಿರಾಜ ಎಂ.ಇ. ಆಗಮಿಸುವರು. ಅತಿಥಿಗಳಾಗಿ ಮಣಿಕಾನಂದನ್ ಕೆ.ವಿ.ಎನ್. ಆಗಮಿಸುವರು.



## ನಾಳೆ ಕೊಕ್ಕನೂರು ಹನುಮಪ್ಪನ ಕಾರ್ತಿಕೋತ್ಸವ

ಮಲೇಬೆನ್ನೂರು, ಡಿ.28- ಶ್ರೀಕ್ಷೇತ್ರ ಕೊಕ್ಕನೂರು ಗ್ರಾಮದ ಆರಾಧ್ಯ ದೈವ ಶ್ರೀ ಆಂಜನೇಯ ಸ್ವಾಮಿಯ ಕಡೇ ಕಾರ್ತಿಕೋತ್ಸವ ಮತ್ತು ಅಶ್ವೋತ್ಸವವು ನಾಡಿದ್ದು ದಿನಾಂಕ 30 ರ ಶನಿವಾರ ಸಂಜೆ ಜರುಗಲಿದೆ.

# ಜಿಲ್ಲೆಯ ಅತಿಥಿ ಉಪನ್ಯಾಸಕರಿಂದ ವಿನೂತನ ಪ್ರತಿಭಟನೆ



ದಾವಣಗೆರೆ, ಡಿ. 28 -ಸೇವೆ ಕಾಯಂ ಮಾಡುವಂತೆ ಆಗ್ರಹಿಸಿ ಹೋರಾಟ ನಡೆಸುತ್ತಿರುವ ಜಿಲ್ಲೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರು ಕೈಗೆ ಹಗ್ಗ ಕಟ್ಟಿಕೊಂಡು, ಕಿವಿಯ ಮೇಲೆ ಹೂವು ಇಟ್ಟುಕೊಂಡು ವಿನೂತನ ರೀತಿಯಲ್ಲಿ ನಿನ್ನೆ ಪ್ರತಿಭಟನೆ ನಡೆಸಿದರು.

ಜಿಲ್ಲಾಡಳಿತ ಭವನದ ಬಳಿ ನಡೆಯುತ್ತಿರುವ 35ನೇ ದಿನದ ಹೋರಾಟದಲ್ಲಿ ಪಾಲ್ಗೊಂಡ ಉಪನ್ಯಾಸಕರು ಕೈಗೆ ಹಗ್ಗ ಕಟ್ಟಿಕೊಳ್ಳುವ ಮೂಲಕ, ಸರ್ಕಾರ ನಮ್ಮ ಭವಿಷ್ಯವನ್ನು ಅತಂತ್ರ ಸ್ಥಿತಿಯಲ್ಲಿ ಬಿಟ್ಟು ಕೈಕಟ್ಟಿ ಹಾಕಿದೆ ಎಂದು ಸಾಂಕೇತಿಕವಾಗಿ ತಿಳಿಸುವ ಪ್ರಯತ್ನ ಮಾಡಿದರು.

ಸರ್ಕಾರ ಹಸಿ ಸುಳ್ಳು ಹೇಳುತ್ತಾ ಕಿವಿಗೆ ಹೂವು ಇಟ್ಟಿದೆ. ಈಗಲಾದರೂ ನಮ್ಮ ಕೈಗೆ ಹಾಕಿರುವ ಕಗ್ಗಂಟನ್ನು ಬಿಡಿಸಿ ನಮ್ಮ ಭವಿಷ್ಯ ರೂಪಿಸಬೇಕು ಎಂದು ಒತ್ತಾಯಿಸಿದರು.

ಮಾನವ ಬಂಧುತ್ವ ವೇದಿಕೆಯ ಪ್ರೊ. ಎ.ಬಿ. ರಾಮಚಂದ್ರಪ್ಪ ಅವರು ಬೆಂಬಲ ಸೂಚಿಸಿ ಮಾತನಾಡಿ, ಅತಿಥಿ ಉಪನ್ಯಾಸಕರನ್ನು ಖಾಯಂ ಮಾಡಬೇಕೆಂಬ ಬೇಡಿಕೆ ಬಹಳ ವರ್ಷಗಳಿಂದ ನನೆಗುದಿಗೆ ಬಿದ್ದಿದೆ. ಈ ಹಿಂದೆ ಅನೇಕರನ್ನು ಕಾಯಂಗೊಳಿಸಿದ ಉದಾಹರಣೆಗಳಿವೆ. 15–20 ವರ್ಷಗಳಿಂದ ಕೆಲಸ ಮಾಡುತ್ತಿರುವ ಅತಿಥಿ ಉಪನ್ಯಾಸಕರನ್ನು ಶೈಕ್ಷಣಿಕ ಜೀತದಂತೆ ದುಡಿಸಿ ಕೊಳ್ಳುತ್ತಿರುವುದು ಪ್ರಜಾಪ್ರಭುತ್ವ ವಿರೋಧಿ ನಡೆ. ಮಾನವೀಯತೆ ಇರುವ ಸರ್ಕಾರ ನಡೆಸಿಕೊಳ್ಳುವ ರೀತಿ ಇದಲ್ಲ. ಗುಣಾತ್ಮಕ ಶಿಕ್ಷಣ ವ್ಯವಸ್ಥೆ ಜಾರಿಗೊಳಿಸಬೇಕಾದರೆ ಶಿಕ್ಷಕರ ಬದುಕನ್ನು ಹಸನುಗೊಳಿಸಬೇಕು ಎಂದು ಹೇಳಿದರು.

ಚುನಾವಣೆಗೆ ಶಿಕ್ಷಕರ ಬೇಡಿಕೆ ಈಡೇರಿಸುವಲ್ಲಿ ಸರ್ಕಾರ ವಿಫಲವಾಗಿದ್ದು, ಸರ್ಕಾರ ಅಧಿಕಾರಕ್ಕೆ ಬರಲು ಶಿಕ್ಷಕರೂ ಶ್ರಮಿಸಿದ್ದಾರೆ. ಕೂಡಲೇ ಖಾಯಂಗೊಳಿಸಬೇಕು ಎಂದು ಅಖಿಲ ಭಾರತೀಯ ಯುವ ಫೆಡರೇಷನ್ ಸಂಘಟನೆಯ ರಾಜ್ಯ ಉಪಾಧ್ಯಕ್ಷ ಆವರಗೆರೆ ವಾಸು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಅತಿಥಿ ಉಪನ್ಯಾಸಕರಾದ ಶ್ಯಾಮ್ ಪ್ರಸಾದ್, ಸಿದ್ದೇಶ್, ಕಳಕಪ್ಪ ಚೌರಿ, ಮೋಹನ್, ಜಗದೀಶ್, ಹನುಮಂತಪ್ಪ, ಪ್ರವೀಣ್ ಕುಮಾರ್, ಶುಭಾ, ರೇಖಾ, ಲಕ್ಷ್ಮಿ, ಚಂದ್ರಿಕಾ, ಪ್ರತಿಭಾ, ವೀಣಾ, ಹಸೀನಾ ಬೇಗಮ್ ಇದ್ದರು.

# ಪ್ರಜಾಪ್ರಭುತ್ವದ ಆಶಯ ಎತ್ತಿ ಹಿಡಿಯುವ ಸಂಭ್ರಮ



**ಜಿಲ್ಲಾ ಕಾಂಗ್ರೆಸ್‌ನಿಂದ ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆ**

ದಾವಣಗೆರೆ, ಡಿ.28- ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ತನ್ನ ಭವ್ಯ ಇತಿಹಾಸದ 138 ವರ್ಷಗಳನ್ನು ಡಿಸೆಂಬರ್ 28ಕ್ಕೆ ಪೂರ್ಣಗೊಳಿಸಿ, 139ನೇ ವರ್ಷಕ್ಕೆ ಕಾಲಿಟ್ಟ ಹಿನ್ನೆಲೆಯಲ್ಲಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿ ಎಸ್ಸೆಸ್ - ಕಾಂಗ್ರೆಸ್ ಭವನದಲ್ಲಿ ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆಯನ್ನು ಆಚರಿಸಲಾಯಿತು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ಪ್ರಜಾಪ್ರಭುತ್ವದ ಆಶಯವನ್ನು ಎತ್ತಿಹಿಡಿಯುವ ಕೆಲಸವನ್ನು ಕಾಂಗ್ರೆಸ್ ಪಕ್ಷ ಮಾಡಿದ್ದು, ಇಂದು ಈ ಸಂಭ್ರಮವನ್ನು ಕೇವಲ ಕಾಂಗ್ರೆಸ್ ಪಕ್ಷ ಮಾತ್ರ ಆಚರಿಸುವುದಲ್ಲ, ಇಡೀ ದೇಶದ ಜನರು ಮಾಡಬೇಕಿದೆ ಎಂದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಎಸ್. ಮಲ್ಲಿಕಾರ್ಜುನ್, ಮಾಜಿ ಸಚಿವ ಶಿವಮೂರ್ತಿ ನಾಯ್ಕ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ.ಶಿವಕುಮಾರ್, ಡೋಲಿ ಚಂದ್ರು, ಕೊಡಪಾನ ದಾದಾಪೀರ್, ಅಲಿ ರೆಹಮತ್, ಅಬ್ದುಲ್ ಜಬ್ಬಾರ್, ಹರೀಶ್, ಲಿಯಾಖತ್, ಜರೀಕಟ್ಟೆ ಉಮಾದೇವಿ, ಕವಿತಾ ಚಂದ್ರಶೇಖರ್ ಮತ್ತಿತರರಿದ್ದರು.

# ಮತಯಂತ್ರ ಸರಿಪಡಿಸದೇ ಇದ್ದರೆ ಬಿಜೆಪಿಗೆ 400 ಸ್ಥಾನ : ಪಿತ್ರೋಡಾ

ನವದೆಹಲಿ, ಡಿ. 28 - ಮತ ಯಂತ್ರಗಳನ್ನು ಸರಿಪಡಿಸದೇ ಇದ್ದರೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ 400ಕ್ಕೂ ಹೆಚ್ಚು ಸ್ಥಾನ ಗಳಿಸಲಿದೆ ಎಂದು ಕಾಂಗ್ರೆಸ್ ನಾಯಕ ಸ್ಯಾಮ್ ಪಿತ್ರೊಡಾ ಹೇಳಿದ್ದಾರೆ.

ಮತ ಯಂತ್ರಗಳ ಬಗ್ಗೆ ಇರುವ ಅನುಮಾನಗಳನ್ನು ನಿವಾರಿಸುವ ಸಲುವಾಗಿ, ಮತ ಯಂತ್ರಗಳನ್ನು ಹ್ಯಾಕ್ ಮಾಡಲೂ ಸಹ ಆಯೋಗ ಆಹ್ವಾನ ನೀಡಿತ್ತು. ಆದರೂ, ಕಾಂಗ್ರೆಸ್ ಹಾಗೂ ಹಲವು ಪಕ್ಷಗಳು ಪದೇ ಪದೇ ಮತ ಯಂತ್ರಗಳ ಬಗ್ಗೆ ಅನುಮಾನ ವ್ಯಕ್ತಪಡಿಸುತ್ತಿವೆ.

ಈ ಬಗ್ಗೆ ಮಾತನಾಡಿರುವ ಪಿತ್ರೋಡಾ, ವಿ.ವಿ.ಪ್ಯಾಟ್ ವ್ಯವಸ್ಥೆಯನ್ನು ಬದಲಿಸುವಂತೆ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಮದನ್ ಬಿ. ಲೊಕುರ್ ಅವರ ಅಧ್ಯಕ್ಷತೆಯ ಸರ್ಕಾರೇತರ ಸಂಸ್ಥೆಯೊಂದು ಶಿಫಾರಸ್ಸು ಮಾಡಿತ್ತು ಎಂದಿದ್ದಾರೆ.

ಈ ಬಗ್ಗೆ ಚುನಾವಣಾ ಆಯೋಗ ಪ್ರತಿಕ್ರಿಯಿಸಲಿ ಎಂದು ನಾನು ಕಾಯುತ್ತಿದ್ದೆ. ಚುನಾವಣಾ ಆಯೋಗ ಪ್ರತಿಕ್ರಿಯಿಸದ ಕಾರಣ ನಾನು ಬಹಿರಂಗವಾಗಿ ಮಾತನಾಡುತ್ತಿದ್ದೇನೆ ಎಂದು ಹೇಳಿದ್ದಾರೆ.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ 400ಕ್ಕೂ ಹೆಚ್ಚು ಸ್ಥಾನಗಳಲ್ಲಿ ಗೆಲ್ಲುವುದಾಗಿ ಬಿಜೆಪಿ ಹೇಳಿಕೆ ನೀಡುತ್ತಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಪಿತ್ರೋಡಾ, ಮುಂದಿನ ಚುನಾವಣೆಯ ಒಳಗೆ ಮತ ಯಂತ್ರಗಳನ್ನು ಸರಿಪಡಿಸಬೇಕು. ಮತ ಯಂತ್ರಗಳನ್ನು ಸರಿಪಡಿಸಿದರೆ 400 ಸ್ಥಾನ ದೊರೆಯುವುದಿಲ್ಲ, ಸರಿಪಡಿಸದೇ ಇದ್ದರೆ 400 ಸ್ಥಾನ ಸಿಗಬಹುದು ಎಂದು ಹೇಳಿದರು.

# ಕನ್ನಡ ಫಲಕ ಕಡ್ಡಾಯಕ್ಕಾಗಿ ಸುಗ್ರೀವಾಜ್ಞೆ

**(1ನೇ ಪುಟದಿಂದ)** ವರ್ಗೀಕರಣ ಮತ್ತು ಕನ್ನಡದಲ್ಲಿ ಪ್ರದರ್ಶಿಸಬೇಕಾದ ಜಾಹೀರಾತು ವಿಷಯಗಳ ಶೇಕಡಾವಾರು ಪ್ರಮಾಣವು ರಾಜ್ಯ ಸರ್ಕಾರದಿಂದ ನಿಯಮಿಸಲಾದಂತೆ ಇರತಕ್ಕದ್ದು ಎಂದು ತಿಳಿಸಲಾಗಿದೆ. ಇದನ್ನು ಸಹ ಅನುಷ್ಠಾನಗೊಳಿಸಲಾಗುವುದು ಎಂದರು.

ಈ ಕಾಯ್ದೆಯ ಅಧಿಸೂಚನೆ ಹೊರಡಿಸಲು ಹಾಗೂ ನಿಯಮಗಳನ್ನು ರೂಪಿಸಲು ಕೂಡಲೇ ಕ್ರಮ ಕೈಗೊಳ್ಳಲಾಗುವುದು. ಶಾಂತಿಯುತ ಪ್ರತಿಭಟನೆ ಮಾಡಲು ಸರ್ಕಾರದ ವಿರೋಧ ಇಲ್ಲ, ನಮಗೆ ಪ್ರಜಾಪ್ರಭುತ್ವದಲ್ಲಿ, ಸಂವಿಧಾನದಲ್ಲಿ ನಂಬಿಕೆ ಇದೆ. ಯಾರೇ ಆಗಲೀ ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡರೆ, ಸರ್ಕಾರ ಸಹಿಸುವುದಿಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳ ಬಯಸುತ್ತೇನೆ ಎಂದರು.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಗೃಹ ಸಚಿವ ಡಾ. ಜಿ. ಪರಮೇಶ್ವರ್, ಕನ್ನಡ ಪರ ಹೋರಾಟದ ಹೆಸರಿನಲ್ಲಿ ಪ್ರತಿಭಟನೆ ವೇಳೆ ಕಾನೂನು ಕೈಗೆತ್ತಿಕೊಳ್ಳುವುದನ್ನು ಸಹಿಸುವುದಿಲ್ಲ ಎಂದರು. ಸರ್ಕಾರ ಕನ್ನಡದ ಪರವಾಗಿ ಎಲ್ಲ ಬಗೆಯ ತೀರ್ಮಾನಗಳನ್ನು ತೆಗೆದುಕೊಳ್ಳುವ ಕೆಲಸವನ್ನು ಹಿಂದೆಯೂ ಮಾಡಿದೆ, ಈಗಲೂ ಬದ್ಧವಾಗಿದೆ. ಯಾವುದೇ ಸಮಸ್ಯೆಗಳಿದ್ದರೆ ಕನ್ನಡ ಪರ ಹೋರಾಟಗಾರರು ಸರ್ಕಾರವನ್ನು ಒತ್ತಾಯಿಸಲಿ ಎಂದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದಕ್ಕೆ ಅವಕಾಶವಿದೆ, ಪ್ರತಿಭಟನೆ ಹೆಸರಲ್ಲಿ ಅಂಗಡಿ, ಶಾಪಿಂಗ್ ಮಾಲ್‌ಗಳ ಮೇಲೆ ದಾಳಿ ಮಾಡಿ, ಸಾರ್ವಜನಿಕ ಆಸ್ತಿಗೆ ಹಾನಿ ಮಾಡುವುದು ಸರಿಯಲ್ಲ ಎಂದರು.

## ವಿರುದ್ಧವಾಗಿ ನಡೆಯೋದು ಸಹಿಸೋಲ್ಲ

**(1ನೇ ಪುಟದಿಂದ)** ವ್ಯಕ್ತಿಗಳಿರಲೀ, ಖಾಸಗಿ ಸಂಸ್ಥೆಗಳಿರಲೀ ಯಾರಾದರೂ ಸಂವಿಧಾನಕ್ಕೆ ಅನುಗುಣವಾಗಿ ನಡೆದುಕೊಳ್ಳಬೇಕು, ಯಾರೂ ಕಾನೂನು ಕೈಗೆ ತೆಗೆದುಕೊಳ್ಳಬೇಡಿ ಎಂದು ಮನವಿ ಮಾಡುತ್ತೇನೆ ಎಂದರು.


|| ಶ್ರೀ ಹಂಪಿ ವಿರೂಪಾಕ್ಷೇಶ್ವರ ಪ್ರಸನ್ನ ||

**ಆರನೇ ಪುಣ್ಯಸ್ಮರಣೆ**



**ದಿ|| ಶ್ರೀಮತಿ ಗಿರಿಜ ಎಂ. ಜವಳಿ**

ನೀವು ನಮ್ಮನ್ನಗಲಿ ಇಂದಿಗೆ (29.12.2023) ಆರು ವರ್ಷಗಳಾದವು. ಸದಾ ನಿಮ್ಮ ನೆನಪಿನಲ್ಲಿರುವ.

**ಪತಿ : ಮಂಜುನಾಥ ಎ. ಜವಳಿ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು, ದಾವಣಗೆರೆ. ಮೊ: 98445 73023**

**ಪುಣ್ಯಸ್ಮರಣೆ**



**ದಿ|| ಶ್ರೀಮತಿ ಅಲಗೂರು ಶಾಂತಮ್ಮನವರು**

(ದಿ|| ಶ್ರೀ ವೀರಭದ್ರಪ್ಪ ಅಲಗೂರು ಇವರ ಧರ್ಮಪತ್ನಿ)

ನಿಧನ : 29.12.2022

ನೀವು ಶಿವೈಕ್ಯರಾಗಿ ಇಂದಿಗೆ ವರ್ಷವಾಯಿತು. ನಿಮ್ಮ ಪ್ರೀತಿ, ವಾತ್ಸಲ್ಯ, ಆದರ್ಶ, ಶಿಸ್ತು, ಪ್ರಾಮಾಣಿಕತೆ ನಮಗೆಲ್ಲಾ ದಾರಿದೀಪವಾಗಿದೆ. ಪರಮಾತ್ಮನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ...

**ಪ್ರಕಾಶ್ ವಿ. ಅಲಗೂರು, ಶ್ರೀ ಸಂತೋಷ್ .ಎಸ್.ವಿ ಮತ್ತು ಸಹೋದರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಅಲಗೂರು ವಂಶಸ್ಥರು**

✦ ಅಲಗೂರು ಪೇಂಟ್ಸ್ ✦ ಎಸ್.ವಿ ಟೂರ್ಸ್ ಅಂಡ್ ಟ್ರಾವೆಲ್ಸ್, ✦ ಎಸ್.ವಿ.ಟಿ ಟ್ರೇಡರ್ಸ್ ✦ ಗುಡ್ಡಿ ಬೀಡಾ ಸ್ಟಾಲ್,
ಹದಡಿ ರಸ್ತೆ, ದಾವಣಗೆರೆ.
ಮೊ : 94481 14919, 98441 58970, 74119 13202


# ಇ.ಡಿ. ಆರೋಪ ಪಟ್ಟಿಯಲ್ಲಿ ಪ್ರಿಯಾಂಕ ವಾದ್ರಾ ಹೆಸರು

**(1ನೇ ಪುಟದಿಂದ)** ಚಡ್ಡಾಗೂ ಸಂಪರ್ಕ ಇದೆ ಎಂದು ತಿಳಿಸಲಾಗಿತ್ತು. ಸುಮಿತ ಚಡ್ಡಾ ಮಧ್ಯವರ್ತಿ ಸಂಜಯ್ ಭಂಡಾರಿಯ ಸಂಬಂಧಿ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿರುವ ಪ್ರಿಯಾಂಕ ಗಾಂಧಿ ವಾದ್ರಾ ಹಾಗೂ ರಾಬರ್ಟ್ ವಾದ್ರಾ ಅವರ ಹೆಸರು ಆರೋಪ ಪಟ್ಟಿಯಲ್ಲಿ ಇದೆ. ಆದರೆ, ಅವರು ಆರೋಪಿಗಳಲ್ಲ. ಇವರ ಹೆಸರುಗಳನ್ನು ಮೊದಲ ಬಾರಿಗೆ ಉಲ್ಲೇಖಿಸಲಾಗಿದೆ.

ಜಾರಿ ನಿರ್ದೇಶನಾಲಯ ದಾಖಲಿಸಿರುವ ಪ್ರಕರಣವನ್ನು ದೆಹಲಿಯ ಅಕ್ರಮ ಹಣ ತಡೆ ಕಾಯ್ದೆಯ ವಿಶೇಷ ನ್ಯಾಯಾಲಯ ವಿಚಾರಣೆಗೆ ಒಳಪಡಿಸುತ್ತಿದೆ. ಮುಂದಿನ ವಿಚಾರಣೆ 2024ರ ಜನವರಿ 29ರಂದು ನಡೆಯಲಿದೆ.

## ಓ.ಜಿ. ಗೋಣಿಬಸಪ್ಪ ನಿಧನ



ದಾವಣಗೆರೆ ನಿಟ್ಟುವಳ್ಳಿ ಮಣಿಕಂಠ ಸರ್ಕಲ್ ಹತ್ತಿರದ ವಾಸಿ ಓ.ಜಿ. ಗೋಣಿಬಸಪ್ಪ (ಓಬಳಾಪುರ) (72) ಇವರು ದಿನಾಂಕ 28.12.2023ರ ಗುರುವಾರ ರಾತ್ರಿ 7 ಗಂಟೆಗೆ ನಿಧನರಾಗಿದ್ದಾರೆ. ನಾಲ್ವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು, ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 29.12.2023ರ ಶುಕ್ರವಾರ ಮಧ್ಯಾಹ್ನ 12.30ಕ್ಕೆ ದಾವಣಗೆರೆ ತಾಲ್ಲೂಕು ಹೊಸನಾಯಕ ಹಳ್ಳಿಯಲ್ಲಿ ನೆರವೇರಲಿದೆ.

## ಕೆ. ಬೇವಿನಹಳ್ಳಿ ಬಿ.ಎಮ್. ಬಸವರಾಜಯ್ಯ ನಿಧನ



ಹರಿಹರ ತಾಲ್ಲೂಕು ಕೆ. ಬೇವಿನಹಳ್ಳಿ ಗ್ರಾಮದ ವಾಸಿ ಹಿರೇಮಠದ ವೇ. ಬಿ.ಎಂ. ಬಸವರಾಜಯ್ಯ (82) ಇವರು ದಿನಾಂಕ : 28.12.2023ರ ಗುರುವಾರ ರಾತ್ರಿ 7.45 ಗಂಟೆಗೆ ನಿಧನರಾದರು. ಪತ್ನಿ, ನಾಲ್ವರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 29.12.2023ರ ಮಧ್ಯಾಹ್ನ 12.30ಕ್ಕೆ ಮೃತರ ಸ್ವಗ್ರಾಮವಾದ ಹರಿಹರ ತಾಲ್ಲೂಕು ಕೆ. ಬೇವಿನಹಳ್ಳಿಯಲ್ಲಿ ನೆರವೇರಲಿದೆ.

# ತರೀಕೆರೆ-ಕಡೂರಿಗೆ ನೀರು ಹರಿಸುವ ಆದೇಶ ರದ್ದು ಮಾಡಿ



**(1ನೇ ಪುಟದಿಂದ)** ಯೋಜನೆಯ ಷರತ್ತಿನಂತೆ ತುಂಗಾದಿಂದ ಭದ್ರಾಕ್ಕೆ ನೀರು ಲಿಫ್ಟ್ ಮಾಡುವವರೆಗೆ ಭದ್ರಾ ಮೇಲ್ದಂಡೆ ಭಾಗಕ್ಕೆ ನೀರು ಹರಿಸಬಾರದು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ರೈತ ಮುಖಂಡರಾದ ತೇಜಸ್ವಿ ಪಟೇಲ್, ಶಾಮನೂರು ಲಿಂಗರಾಜು, ಕೋಳೇನ ಹಳ್ಳಿ ಬಿ ಎಂ ಸತೀಶ್, ಲೋಕಿಕೆರೆ ನಾಗರಾಜ್, ಬೆಳವನೂರು ನಾಗೇಶ್ವರ ರಾವ್, ಧನಂಜಯ ಕಡ್ಲೆಬಾಳ್, ಬಲ್ಲೂರು ರವಿಕುಮಾರ್, ಬಲ್ಲೂರು ಬಸವರಾಜ, ಕುಂದುವಾಡದ ಗಣೇಶಪ್ಪ, ಗುರುನಾಥ್, ಜಿಮ್ಮಿ ಹನುಮಂತಪ್ಪ, ಮಹೇಶಪ್ಪ, ಆರನೇಕಲ್ಲು ವಿಜಯಕುಮಾರ, ಕಲ್ಪನಹಳ್ಳಿ ಸತೀಶ್, ಉಜ್ಜಪ್ಪ, ಚಿಕ್ಕಬೂದಿಹಾಳು ಭಗತ್ ಸಿಂಗ್, ಕಲ್ಲುಬಂಡೆ ಪ್ರಸಾದ್ ಮುಂತಾದವರು ಉಪಸ್ಥಿತರಿದ್ದರು.

# ಕಲ್ಕಡ್ಕರ್ ಪ್ರಭಾಕರ್ ಭಟ್ ಮೇಲೆ ಕ್ರಮಕ್ಕೆ ಆಗ್ರಹ : ಪ್ರತಿಭಟನೆ




ದಾವಣಗೆರೆ, ಡಿ. 28- ಮಹಿಳೆಯರ ಕುರಿತು ಅವಹೇಳನಕಾರಿಯಾಗಿ ಮಾತನಾಡಿರುವ ಆರ್. ಎಸ್.ಎಸ್. ಮುಖಂಡ ಕಲ್ಕಡ್ಕರ್ ಪ್ರಭಾಕರ್ ಭಟ್ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸಿ ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಜಾಗೃತಿ ವೇದಿಕೆಯಿಂದ ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಲಾಯಿತು. ಇತ್ತೀಚೆಗೆ ಮಂಡ್ಯದಲ್ಲಿ ನಡೆದ ಘಟನೆಯಲ್ಲಿ ಕಲ್ಕಡ್ಕರ್ ಪ್ರಭಾಕರ್ ಭಟ್ ಮಹಿಳೆಯರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಈ ರೀತಿ ಧರ್ಮಗಳ ಅವಹೇಳನ ಕೃತ್ಯ ಹಲವು ಬಾರಿ ನಡೆದಿದ್ದು, ಆತನ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ನಗರದ ಉಪ ವಿಭಾಗಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ಅಲ್ಪಸಂಖ್ಯಾತರ ವಿಭಾಗದ ಜಿಲ್ಲಾಧ್ಯಕ್ಷ ಆರಿಫ್ ಖಾನ್, ರಾಜ್ಯ ಕಾರ್ಯದರ್ಶಿ ಮಹಮ್ಮದ್ ಸಿರಾಜ್, ಜಿಲ್ಲಾ ಕಾರ್ಯದರ್ಶಿ ಅಬ್ದುಲ್ ಜಬ್ಬಾರ್ ಎ., ತಾಹೀರ್ ಫುನಿ, ಎಸ್.ಕೆ. ಜಬಿವುಲ್ಲಾ, ಕೊಡಪಾನ ದಾದಾಪೀರ್, ಮೈನುದ್ದೀನ್, ಅನಿಸ್ ಪಾಷ, ಹನೀಫ್, ಹರೀಶ್, ಮುಷ್ತಾಕ್, ಜಾನ್ ಇತರರು ಇದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ಇ.ಡಿ. ಪ್ರಕರಣದಲ್ಲಿ ಪ್ರಿಯಾಂಕ ಗಾಂಧಿ ಹೆಸರಿಗೆ ಕಾಂಗ್ರೆಸ್ ಆಕ್ಷೇಪ**

ನವದೆಹಲಿ : ಜಾರಿ ನಿರ್ದೇಶನಾಲಯ ದಾಖಲಿಸಿರುವ ಅಕ್ರಮ ಹಣ ಸಂಬಂಧದ ಆರೋಪ ಪಟ್ಟಿಯಲ್ಲಿ ಕಾಂಗ್ರೆಸ್ ನಾಯಕಿ ಪ್ರಿಯಾಂಕ ಗಾಂಧಿ ವಾದ್ರಾ ಹೆಸರು ಸೇರಿಸಿರುವ ಬಗ್ಗೆ ಪಕ್ಷ ಆಕ್ಷೇಪಿಸಿದ್ದು, ಇದು ಆಡಳಿತಾರೂಢ ಬಿಜೆಪಿಯ ಸಂಚು ಎಂದು ಆರೋಪಿಸಿದೆ.

**ಭಾರತ – ಫಿಲಿಪೈನ್ಸ್ ಜಂಟಿ ನೌಕಾ ಕಸರತ್ತಿನಿಂದ ಚೀನಾಗೆ ಅಸಮಾಧಾನ**

ಬೀಜಿಂಗ್ : ದಕ್ಷಿಣ ಚೀನಾ ಸಮುದ್ರದಲ್ಲಿ ಭಾರತ ಮತ್ತು ಫಿಲಿಪೈನ್ಸ್ ಜಂಟಿ ನೌಕಾ ದಳ ಕಸರತ್ತು ನಡೆಸಿರುವುದು ಚೀನಾಗೆ ಅಸಮಾಧಾನ ತಂದಿದೆ. ವಿವಿಧ ದೇಶಗಳ ನಡುವಿನ ರಕ್ಷಣಾ ಸಹಕಾರ ಮೂರನೇ ದೇಶಗಳಿಗೆ ಹಾಗೂ ಪ್ರಾಂತೀಯ ಶಾಂತಿಗೆ ಧಕ್ಕೆ ತರಬಾರದು ಎಂದು ಚೀನಾ ಹೇಳಿದೆ.

**ಯೇತಿ ಏರ್‌ಲೈನ್ಸ್ ವಿಮಾನ ಪತನಕ್ಕೆ ಮಾನವ ಲೋಪ ಕಾರಣ**

ಕಠ್ಮಂಡು : ಕಳೆದ ಜನವರಿಯಲ್ಲಿ ನೇಪಾಳದಲ್ಲಿ ಯೇತಿ ಏರ್‌ಲೈನ್ಸ್ ವಿಮಾನ ಪತನಗೊಳ್ಳಲು ಮಾನವ ಲೋಪ ಕಾರಣ ಎಂದು ಸರ್ಕಾರಕ್ಕೆ ಸಲ್ಲಿಸಲಾದ ಆಂತರಿಕ ವರದಿ ತಿಳಿಸಿದೆ. ಈ ಅಪಘಾತದಲ್ಲಿ ಐವರು ಭಾರತೀಯರೂ ಸೇರಿದಂತೆ 72 ಜನರಿದ್ದರು.

**ರಾಮ ಮಂದಿರ ಉದ್ಘಾಟನೆಯಲ್ಲಿ ಭಾಗಿಯಾಗಲು ಸಿದ್ಧ : ಜಾರ್ಖಂಡ್ ಸಿಎಂ**

ರಾಂಚಿ : ತಮಗೆ ಆಹ್ವಾನ ನೀಡಿದರೆ ಅಯೋಧ್ಯೆಯ ರಾಮ ಮಂದಿರ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗಿಯಾಗುವುದಾಗಿ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಹೇಳಿದ್ದಾರೆ.

**157 ಜೆಎನ್.1 ಸೋಂಕಿತರು ಪತ್ತೆ**

ನವದೆಹಲಿ : ದೇಶದಲ್ಲಿ ಜೆಎನ್.1 ಕೊರೊನಾ ಸೋಂಕಿನ 157 ಪ್ರಕರಣಗಳು ಪತ್ತೆಯಾಗಿವೆ. ಕೇರಳದಲ್ಲಿ ಅತಿ ಹೆಚ್ಚು 78 ಹಾಗೂ ಗುಜರಾತ್‌ನಲ್ಲಿ 34 ಪ್ರಕರಣಗಳು ಪತ್ತೆಯಾಗಿವೆ ಎಂದು ಕೇಂದ್ರ ಸರ್ಕಾರದ ಐ.ಎನ್.ಎಸ್.ಎ.ಸಿ.ಒ.ಜಿ. ಸಂಸ್ಥೆಯ ವರದಿ ತಿಳಿಸಿದೆ.

**ಐಸಿಸ್ ಉಗ್ರವಾದಿಗಳ ವಿರುದ್ಧ ಆರೋಪ ಪಟ್ಟಿ**

ನವದೆಹಲಿ : ಮಹಾರಾಷ್ಟ್ರದಲ್ಲಿ ಪತ್ತೆಯಾದ ಐಸಿಸ್ ಉಗ್ರವಾದಿ ಘಟಕಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ಸಂಸ್ಥೆಯಾದ ಎನ್.ಐ.ಎ., ಆರು ಆರೋಪಿಗಳ ವಿರುದ್ಧ ಆರೋಪ ಪಟ್ಟಿ ದಾಖಲಿಸಿದೆ. ಈ ಪ್ರಕರಣದಲ್ಲಿ ಭಾಗಿಯಾದವರು ಅಂತರರಾಷ್ಟ್ರೀಯ ಸಂಪರ್ಕ ಹೊಂದಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

**ಅಸ್ಸಾಂ ಉಗ್ರವಾದ ಅಂತ್ಯಕ್ಕೆ ತ್ರಿಪಕ್ಷೀಯ ಒಪ್ಪಂದ**

ನವದೆಹಲಿ : ಅಸ್ಸಾಂನಲ್ಲಿನ ದಶಕಗಳ ಹಳೆಯ ಬಂಡುಕೋರತನವನ್ನು ಅಂತ್ಯಗೊಳಿಸಲು ಉಲ್ಫಾದ ಮಾತುಕತೆ ಬಣ, ಕೇಂದ್ರ ಸರ್ಕಾರ ಹಾಗೂ ಅಸ್ಸಾಂ ಸರ್ಕಾರಗಳ ನಡುವೆ ಶುಕ್ರವಾರ ತ್ರಿಪಕ್ಷೀಯ ಒಪ್ಪಂದವಾಗಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

# ಎಲ್ಲಾ ಕಾರ್ಯಕರ್ತರು ಒಟ್ಟಾಗಿ ಜನರ ಮಧ್ಯೆ ತೆರಳಿ ಪಕ್ಷವನ್ನು ವಿಸ್ತರಿಸೋಣ

## ಸಿಪಿಐ ಪಕ್ಷದ 98ನೇ ಸ್ಥಾಪನಾ ದಿನಾಚರಣೆಯಲ್ಲಿ ಆವರಗೆರೆ ಚಂದ್ರು ಕರೆ




ದಾವಣಗೆರೆ, ಡಿ. 28- ಭಾರತ ಕಮ್ಯುನಿಸ್ಟ್ ಪಕ್ಷವನ್ನು ವಿಸ್ತರಿಸಲು ಎಲ್ಲಾ ಕಾರ್ಯಕರ್ತರು ಜನರ ಬಳಿ ತೆರಳಿ ಜನರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಎಲ್ಲಾ ಕಾರ್ಯಕರ್ತರು ಪಕ್ಷವನ್ನು ವಿಸ್ತರಿಸೋಣ ಎಂದು ಸಿಪಿಐ ಜಿಲ್ಲಾ ಕಾರ್ಯ ದರ್ಶಿ ಆವರಗೆರೆ ಚಂದ್ರು ಕರೆ ನೀಡಿದರು.

ಇಲ್ಲಿನ ಕಾಂ. ಪಂಪಾಪತಿ ಭವನದಲ್ಲಿ ನಡೆದ ಭಾರತ ಕಮ್ಯುನಿಸ್ಟ್ ಪಕ್ಷದ 98ನೇ ಸಂಸ್ಥಾಪನ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿ, ಸಮಾಜದಲ್ಲಿ ರೈತರು, ದುಡಿಯುವ ಹಾಗೂ ಶೋಷಿತ ಜನರ ಪರವಾಗಿ ದುಡಿದು ಅವರಿಗೆ ನ್ಯಾಯ ಒದಗಿಸುವ ಸಲುವಾಗಿ ಕಮ್ಯುನಿಸ್ಟ್ ಪಕ್ಷ ಸ್ಥಾಪನೆಯಾಗಿ ಇಂದಿಗೆ 98 ವರ್ಷಗಳಾಗಿವೆ ಎಂದರು.

ಪಕ್ಷದ ಹಿರಿಯ ಮುಖಂಡ ಹಾಗೂ ಪಂಪಾಪತಿ, ಶೇಖರಪ್ಪ, ಸುರೇಶ್ ರೈತ ಕಾರ್ಮಿಕರ ಕಲ್ಯಾಣ ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷರಾದ ಕಾಂಗ್ರೆಸ್‌ನ ಟಿ. ಎಸ್. ನಾಗರಾಜ್ ಅವರು ಧ್ವಜಾರೋಹಣ ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪಕ್ಷದ ಜಿಲ್ಲಾ ಮಂಡಳಿ ಖಜಾಂಚಿ ಆನಂದರಾಜ್ ಮಾತನಾಡಿ, ಪಕ್ಷ ಸಂಸ್ಥಾಪನೆಯಾಗಿ ಕಾರ್ಮಿಕರ ಮಧ್ಯೆ ಕೆಲಸ ಮಾಡಿರುವುದಲ್ಲದೆ, ಆರಂಭದಲ್ಲಿ ದೇಶದ ವಿವಿಧ ಭಾಗಗಳಲ್ಲಿ ರೈತರ ಮಧ್ಯೆ ಕೆಲಸ ನಿರ್ವಹಿಸುವುದರೊಂದಿಗೆ ರೈತರ ಪರವಾಗಿಯೂ ಕಮ್ಯುನಿಸ್ಟ್ ಪಕ್ಷ ಕೆಲಸ ನಿರ್ವಹಿಸಿದೆ ಎಂದರು.

ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಪಕ್ಷದ ಸಹಕಾರ್ಯದರ್ಶಿಗಳಾದ ಹೆಚ್.ಜಿ. ಉಮೇಶ್, ಆವರಗೆರೆ ವಾಸು, ಮುಖಂಡರುಗಳಾದ ಎಂ.ಬಿ. ಶಾರದಮ್ಮ, ಟಿ.ಹೆಚ್. ನಾಗರಾಜ್, ಪಿ. ಷಣ್ಮುಖ ಸ್ವಾಮಿ, ವಿ ಲಕ್ಷ್ಮಣ, ಐರಣಿ ಚಂದ್ರು ಮಾತನಾಡಿದರು.

ಬಾನಪ್ಪ, ತಿಪ್ಪೇಶ್, ನರೇಗಾ ರಂಗನಾಥ್ ಮತ್ತಿತರರು ಜಾಗೃತಿ ಗೀತೆಗಳನ್ನು ಹಾಡಿದರು. ಎಸ್.ಎಸ್. ಮಲ್ಲಮ್ಮ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು, ನಿಟುವಳ್ಳಿ ಬಸವರಾಜ್ ವಂದನಾರ್ಪಣೆ ಮಾಡಿದರು.

## ಜಗಳೂರು : ಕೃಷಿ ಹೊಂಡ ನಿರ್ಮಿಸಲು ಅರ್ಜಿ ಆಹ್ವಾನ

ಜಗಳೂರು, ಡಿ. 28 - ಕೃಷಿ ಭಾಗ್ಯ ಯೋಜನೆಯಡಿ ಕೃಷಿ ಹೊಂಡಗಳಿಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಮಿಥುನ್ ಕಿಮಾವತ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೃಷಿ ಹೊಂಡಗಳಿಗೆ ರೈತರು ಅರ್ಜಿ ಸಲ್ಲಿಸಲು 2024 ಜನವರಿ 6 ಕೊನೆಯ ದಿನಾಂಕವಾಗಿದ್ದು, ಅಗತ್ಯ ದಾಖಲೆಗಳನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ಸಲ್ಲಿಸಬೇಕು.

ಈ ಯೋಜನೆ ಪ್ಯಾಕೇಜ್ ರೂಪದಲ್ಲಿದ್ದು, ಕೃಷಿ ಹೊಂಡ, ಪಾಲಿಥಿನ್ ಹೊದಿಕೆ (ತಾಡಪಲ್), ಡೀಸೆಲ್ ಪಂಪ್ ಸೆಟ್, ಲಘು ನೀರಾವರಿ ಘಟಕ, ತಂತಿ ಬೇಲಿ ಒಳಗೊಂಡಿರುತ್ತದೆ. ಆಯ್ಕೆಯಾದ ಘಟಕಗಳು ಅನುಷ್ಠಾನಗೊಂಡ ನಂತರ ಸಹಾಯಧನ ಪಾವತಿಸಲಾಗುವುದು. ಫಲಾನುಭವಿಗಳನ್ನು ಲಾಟರಿ ಮುಖಾಂತರ ಆಯ್ಕೆ ಮಾಡಲಾಗುವುದು.

ಕ್ಷೇತ್ರ ಬದು, ಕೃಷಿ ಹೊಂಡ, ತಾಡಪಲ್‌ಗಳಿಗೆ ಸಾಮಾನ್ಯ ವರ್ಗದವರಿಗೆ ಶೇ.80 ಎಸ್.ಸಿ.ಎಸ್.ಟಿ ವರ್ಗದವರಿಗೆ ಶೇ.90, ತಂತಿ ಬೇಲಿಗೆ ಸಾಮಾನ್ಯ ವರ್ಗಕ್ಕೆ ಶೇ.40, ಎಸ್.ಸಿ.ಎಸ್.ಟಿ. ಗೆ ಶೇ.50, ಡೀಸೆಲ್ ಪಂಪ್ ಸೆಟ್‌ಗೆ ಸಾಮಾನ್ಯ ವರ್ಗಕ್ಕೆ ಶೇ.50, ಎಸ್.ಸಿ.ಎಸ್.ಟಿ. ಗೆ ಶೇ.90 ರಷ್ಟು ಸಹಾಯಧನ ಒದಗಿಸಲಾಗುವುದು, ಅರ್ಜಿ ಸಲ್ಲಿಸುವಾಗ ಅನುಷ್ಠಾನ ಇಲಾಖೆಗಳಿಂದ ಸಹಾಯಧನ ಪಡೆದಿಲ್ಲ ಎಂಬ ದೃಢೀಕರಣ ಪತ್ರ ಸಲ್ಲಿಸಬೇಕು ಎಂದು ಸಹಾಯಕ ನಿರ್ದೇಶಕರು ಮಾಹಿತಿ ನೀಡಿದ್ದಾರೆ.

# ಸಹಮತದ ವಿಚ್ಛೇದನದಿಂದ ಹಿಂದೆ ಸರಿಯುವುದು ಕ್ರೌರ್ಯ : ಹೈಕೋರ್ಟ್

ನವದೆಹಲಿ, ಡಿ. 28 – ವಿಚ್ಛೇದನಕ್ಕೆ ನೀಡಲಾದ ಪರಸ್ಪರ ಸಮ್ಮತಿಯನ್ನು ತಡೆಯುವುದು ಇಲ್ಲವೇ ಏಕಪಕ್ಷೀಯವಾಗಿ ವಾಪಸ್ ಪಡೆಯುವುದು ಹಿಂಸೆಗೆ ಸಮ ಎಂದು ದೆಹಲಿ ಹೈಕೋರ್ಟ್ ಹೇಳಿದೆ.

ವಿಚ್ಛೇದನ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸುವಾಗ ನ್ಯಾಯಮೂರ್ತಿ ಸುರೇಶ್ ಕುಮಾರ್ ಕೈತ್ ಅವರ ನೇತೃತ್ವದ ಪೀಠ ಈ ನಿಲುವು ತಳೆದಿದೆ. ವಿಚ್ಛೇದನ ವಿಷಯವನ್ನು ಪರಸ್ಪರ ಸಮ್ಮತಿಯಿಂದ ಬಗೆಹರಿಸಿಕೊಳ್ಳಲು ದಂಪತಿ ನಿರ್ಧರಿಸಿದ್ದರು. ಆದರೆ, ನಂತರ ಪತ್ನಿ ಈ ಸಹಮತಿಯಿಂದ ಹಿಂದೆ ಸರಿದಿದ್ದರು. ಪತ್ನಿ ನಿಲುವು ತಳ್ಳಿ ಹಾಕಿದ್ದ ಕೌಟುಂಬಿಕ ನ್ಯಾಯಾಲಯ, ವಿಚ್ಛೇದನಕ್ಕೆ ಅನುಮತಿ ನೀಡಿತ್ತು. ನಂತರ ಈ ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿತ್ತು.

ಗಂಡ ಹಾಗೂ ಹೆಂಡತಿ ಸಂವೇದನೆಯೊಂದಿಗೆ ಪರಸ್ಪರ ಸಮ್ಮತವಾದ ಷರತ್ತುಗಳೊಂದಿಗೆ ವಿಚ್ಛೇದನ ಪಡೆಯಲು ಸಹಮತಿಯ ಇತ್ಯರ್ಥಕ್ಕೆ ಬರಲಾಗುತ್ತದೆ ಎಂದು ಹೈಕೋರ್ಟ್ ಹೇಳಿದೆ.

ಈ ಪ್ರಕರಣದಲ್ಲಿ, ವಿಚ್ಛೇದನಕ್ಕಾಗಿ ಪತಿ 5 ಲಕ್ಷ ರೂ. ಡಿಮ್ಯಾಂಡ್ ಡ್ರಾಫ್ಟ್ ನೀಡಿದ್ದರು. ಪತ್ನಿ ಹಣ ಸಹ ಬಿಡಿಸಿಕೊಂಡಿದ್ದರು. ಆದರೆ, ನಂತರ ಏಕಪಕ್ಷೀಯವಾಗಿ ಪತ್ನಿ ಒಪ್ಪಂದದಿಂದ ಹಿಂದೆ ಸರಿದು, ಹಣ ಮರಳಿಸಿದ್ದರು.

ಇದು ಅಹಂಕಾರದ ಸಮರವಾಗಿದೆ, ದ್ವೇಷ ಕಾರಲು ಈ ರೀತಿ ಮಾಡಲಾಗುತ್ತಿದೆ. ವಿಚ್ಛೇದನಕ್ಕೆ ಪರಸ್ಪರ ಸಮ್ಮತಿಸಿದ ನಂತರ ಏಕಪಕ್ಷೀಯವಾಗಿ ಹಿಂದೆ ಸರಿಯುವುದು ಕ್ರೌರ್ಯ ಎಂದು ಹೈಕೋರ್ಟ್ ಪೀಠ ಹೇಳಿದೆ. ಈ ಪೀಠದಲ್ಲಿ ನ್ಯಾಯಮೂರ್ತಿ ನೀನಾ ಬನ್ಸಾಲ್ ಕೃಷ್ಣ ಅವರೂ ಇದ್ದಾರೆ.

ಗಂಡ ಹಾಗೂ ಕುಟುಂಬದವರ ವಿರುದ್ಧ ಪತ್ನಿ ಸುಳ್ಳು ಅಪರಾಧಿಕ ಪ್ರಕರಣ ದಾಖಲಿಸಿದ್ದಲ್ಲದೇ, ಈ ರೀತಿಯಲ್ಲಿ ಸಹಮತದ ವಿಚ್ಛೇದನದಿಂದ ಹಿಂದೆ ಸರಿಯುವುದು ಕ್ರೌರ್ಯ ಎಂದೂ ಹೈಕೋರ್ಟ್ ಹೇಳಿದೆ.

ಅಲ್ಲದೇ, ಪತಿಯ ವಿರುದ್ಧ ಆಧಾರ ರಹಿತವಾಗಿ ವ್ಯಭಿಚಾರದ ಆರೋಪ ಮಾಡಲಾಗಿತ್ತು. ಇದರಿಂದ ಪತಿಯ ಚಾರಿತ್ರ್ಯ, ಗೌರವ ಹಾಗೂ ಪ್ರತಿಷ್ಠೆಯ ಮೇಲೆ ತೀವ್ರ ಹಲ್ಲೆಯಾಗಿತ್ತು. ಇದು ಕೆಟ್ಟ ಸ್ವರೂಪದ ಕ್ರೌರ್ಯ ಎಂದೂ ನ್ಯಾಯಾಲಯ ಹೇಳಿದೆ.

ದಂಪತಿ 2001ರಲ್ಲಿ ಮದುವೆಯಾಗಿದ್ದರು. ಆದರೆ, ಈ ಮದುವೆ 13 ತಿಂಗಳ ಕಾಲವೂ ಮುಂದುವರೆಯಲಿಲ್ಲ. 2003ರ ಜನವರಿಯಲ್ಲಿ ಅವರು ದೂರವಾದರು. ನಂತರ ಪತಿ ವಿಚ್ಛೇದನಕ್ಕಾಗಿ ಅರ್ಜಿ ದಾಖಲಿಸಿದ್ದರು.

ಈ ಬಗ್ಗೆ ವಿಚಾರಣೆ ನಡೆಸಿದ ಹೈಕೋರ್ಟ್, ಈ ವಿವಾಹ ಪ್ರಕರಣದಲ್ಲಿ ನಡೆದ ಪ್ರತಿಯೊಂದು ಘಟನೆಯನ್ನು ಬಿಡಿ ಬಿಡಿಯಾಗಿ ನೋಡಿದರೆ ಹೆಚ್ಚಿನ ಅಂಶಗಳು ಕಾಣುವುದಿಲ್ಲ. ಆದರೆ, ಸಮಗ್ರವಾಗಿ ನೋಡಿದಾಗ ಪತ್ನಿ ಹೊಂದಿಕೊಳ್ಳದ ಧೋರಣೆ ಹೊಂದಿರುವುದು ಕಂಡು ಬರುತ್ತದೆ. ಪತಿಯನ್ನು ಸಾರ್ವಜನಿಕವಾಗಿ ಅವಮಾನಕ್ಕೆ ಗುರಿ ಮಾಡದೇ, ಮಾನಸಿಕ ಹಿಂಸೆ ನೀಡದೇ ವಿಷಯಗಳನ್ನು ಬಗೆಹರಿಸಿಕೊಳ್ಳುವ ಪ್ರೌಢತೆ ಪತ್ನಿಗೆ ಇಲ್ಲ ಎಂದೂ ಹೈಕೋರ್ಟ್ ಹೇಳಿದೆ.

ಈ ಪ್ರಕರಣದಲ್ಲಿ ಮದುವೆ ಉಳಿದಿದ್ದು ಕೇವಲ 13 ತಿಂಗಳು. ಆದರೆ, ಇವರ ನಡುವೆ ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣಗಳು 13 ವರ್ಷಗಳಿಗೂ ಹೆಚ್ಚು ಕಾಲ ನಡೆದಿವೆ. ಹೀಗಾಗಿ ಪತ್ನಿಯ ಅರ್ಜಿಯಲ್ಲಿ ಯಾವುದೇ ಹುರುಳಿಲ್ಲ ಎಂದು ಹೈಕೋರ್ಟ್ ಹೇಳಿದೆ.

# ಪರಿಶಿಷ್ಟರ ಮೇಲಿನ ದೌರ್ಜನ್ಯ ಪ್ರಕರಣಗಳ ಪ್ರತ್ಯೇಕ ವಿಚಾರಣೆಗೆ ನ್ಯಾಯಾಲಯ ಸ್ಥಾಪನೆ

## ಜಿಲ್ಲಾ ಜಾಗೃತಿ ಸಮಿತಿಯ ತ್ರೈಮಾಸಿಕ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ವೆಂಕಟೇಶ್



ದಾವಣಗೆರೆ, ಡಿ. 28- ಪರಿಶಿಷ್ಟರ ಮೇಲಿನ ದೌರ್ಜನ್ಯ ಪ್ರಕರಣಗಳ ಪ್ರತ್ಯೇಕ ವಿಚಾರಣೆಗಾಗಿ ನ್ಯಾಯಾಲಯವನ್ನು ಸ್ಥಾಪನೆ ಮಾಡಬೇಕೆಂದು ಒತ್ತಾಯ ಬಂದಿದ್ದು, ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ವೆಂಕಟೇಶ್ ಎಂ.ವಿ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಿನ್ನೆ ಜರುಗಿದ ನಾಲ್ಕನೇ ತ್ರೈಮಾಸಿಕ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪರಿಶಿಷ್ಟರ ಮೇಲೆ ನಡೆಯುವ ದೌರ್ಜನ್ಯ ತಡೆಗೆ ಎಲ್ಲಾ ಮುಂಜಾಗ್ರತಾ ಕ್ರಮದ ಜೊತೆಗೆ ಘಟನೆಗಳು ನಡೆಯದಂತೆ ಜಾಗೃತಿ ಮೂಡಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಪರಿಶಿಷ್ಟರ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ಸೆಪ್ಟೆಂಬರ್ ಅಂತ್ಯಕ್ಕೆ 36 ಎಫ್‌ಐಆರ್ ದಾಖಲಾಗಿದ್ದು ಡಿಸೆಂಬರ್‌ವರೆಗೆ ಒಟ್ಟು 48 ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಾಗಿರುತ್ತದೆ. ಆದರೆ ಎಫ್‌ಐಆರ್ ದಾಖಲಾದ ತಾಲ್ಲೂಕುಗಳಲ್ಲಿ ಹೆಚ್ಚಿನದಾಗಿ ದಾವಣಗೆರೆ 19 ಮತ್ತು ಚನ್ನಗಿರಿ ತಾಲ್ಲೂಕಿನಲ್ಲಿ 10 ಪ್ರಕರಣಗಳಿವೆ.

ದಾಖಲಾದ ಪ್ರಕರಣಗಳಲ್ಲಿ 27 ಪ್ರಕರಣಗಳಿಗೆ ಈಗಾಗಲೇ ಚಾರ್ಜ್‌ಶೀಟ್ ಸಲ್ಲಿಸಲಾಗಿದೆ. 12 ಪ್ರಕರಣಗಳಲ್ಲಿ ತನಿಖೆ ಹಂತದಲ್ಲಿದ್ದು, 8 ಬಿ.ರಿಪೋರ್ಟ್ ಹಾಕಿದ್ದು 1 ಪ್ರಕರಣವನ್ನು ಇತರೆ ಕಾರಣದಿಂದ ವಿಲೇ ಮಾಡಲಾಗಿ 21 ಬಾಕಿ ಉಳಿದಿರುತ್ತವೆ. ಸೆಪ್ಟೆಂಬರ್‌ವರೆಗೆ ಬಾಕಿ ಇದ್ದ 15 ಮತ್ತು ಅಕ್ಟೋಬರ್‌ನಿಂದ ಡಿಸೆಂಬರ್ ವರೆಗೆ 12 ಪ್ರಕರಣಗಳು ಸೇರಿ 27 ಪ್ರಕರಣಗಳಲ್ಲಿ ಎಫ್‌ಐಆರ್ ಮತ್ತು ಚಾರ್ಜ್‌ಶೀಟ್ ಹಂತದಲ್ಲಿ ಒಟ್ಟು 64 ಸಂತ್ರಸ್ಥರಿಗೆ 53 ಲಕ್ಷ ಪರಿಹಾರವನ್ನು ನೀಡಲಾಗಿದ್ದು, 4 ಪ್ರಕರಣಗಳಲ್ಲಿ ಮಾತ್ರ ಪರಿಹಾರ ನೀಡುವುದು ಬಾಕಿ ಇರುತ್ತದೆ ಎಂದು ಅವರು ವಿವರಿಸಿದರು.

2018-19 ರಿಂದ 2023 ರ ಡಿಸೆಂಬರ್ 26 ರ ವರೆಗೆ ದೌರ್ಜನ್ಯ ತಡೆ ಕಾಯ್ದೆಯಡಿ ಮರಣ ಹೊಂದಿದ 7 ಜನರ ಕುಟುಂಬದ ವಾರಸುದಾರರಿಗೆ ಮಾಸಿಕ ಐದು ಸಾವಿರ ಮತ್ತು ಭತ್ಯೆ ಸೇರಿ ಪಿಂಚಣಿ ಮತ್ತು ಇವರ ಕುಟುಂಬದವರಿಗೆ ಈಗಾಗಲೇ 5 ಜನರಿಗೆ ಸರ್ಕಾರಿ ನೌಕರಿಯನ್ನು ನೀಡಲಾಗಿದ್ದು, ಇಬ್ಬರಿಗೆ ಸರ್ಕಾರಿ ನೌಕರಿ ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಇದಲ್ಲದೇ ದೌರ್ಜನ್ಯ ತಡೆ ಕಾಯ್ದೆಯಡಿ ದಾಖಲಾದ ಪ್ರಕರಣಗಳು ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ನಡೆಯುತ್ತಿದ್ದು ಇದರಲ್ಲಿ ಡಿಸೆಂಬರ್ ತಿಂಗಳಲ್ಲಿ 4 ಪ್ರಕರಣಗಳನ್ನು ಇತ್ಯರ್ಥ ಮಾಡಲಾಗಿದ್ದು, 142 ಪ್ರಕರಣಗಳ ಇತ್ಯರ್ಥಕ್ಕೆ ಬಾಕಿ ಇರುತ್ತವೆ. ಸಮಿತಿ ಸದಸ್ಯರ ಮನವಿ ಮೇರೆಗೆ ಕಳೆದ ಸಭೆಯಲ್ಲಿ ಪರಿಶಿಷ್ಟರ ಮೇಲಿನ ದೌರ್ಜನ್ಯ ತಡೆ ಪ್ರಕರಣಗಳ ಪ್ರತ್ಯೇಕ ವಿಚಾರಣೆಗಾಗಿ ನ್ಯಾಯಾಲಯವನ್ನು ಸ್ಥಾಪನೆ ಮಾಡ ಬೇಕೆಂದು ಒತ್ತಾಯ ಮಾಡಿದ್ದು, ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು.

ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಸಂತೋಷ್ ಎಂ.ವಿಜಯಕುಮಾರ್, ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರಾದ ಕೆ.ನಾಗರಾಜ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಹಂತೇಶ್ ಹಾಗೂ ಜಾಗೃತಿ ಸಮಿತಿ ಸದಸ್ಯರು ಮತ್ತು ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಆರೋಗ್ಯ, ಕಣ್ಣಿನ ತಪಾಸಣೆ

ದಾವಣಗೆರೆ, ಡಿ. 28- ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆ, ಸಂಕಲ್ಪ ಸೇವಾ ಫೌಂಡೇಶನ್, ಸಿಟಿ ಸೆಂಟ್ರಲ್ ಹಾಸ್ಪಿಟಲ್ ಹಾಗೂ ದಾವಣಗೆರೆ ನೇತ್ರಾಲಯದ ಸಹಯೋಗದಲ್ಲಿ ನಾಳೆ ದಿನಾಂಕ 29ರ ಶುಕ್ರವಾರ ಉಚಿತ ಆರೋಗ್ಯ ಹಾಗೂ ಕಣ್ಣಿನ ತಪಾಸಣಾ ಶಿಬಿರ ಮತ್ತು 2024ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ವೀರೇಶ್ ಎಸ್. ಒಡೇನಪುರ, ನಿಜಲಿಂಗಪ್ಪ ಬಡಾವಣೆಯಲ್ಲಿನ ಸರ್ಕಾರಿ ನೌಕರರ ಭವನದಲ್ಲಿ ಅಂದು ಬೆಳಿಗ್ಗೆ 9.30ರಿಂದ ಮಧ್ಯಾಹ್ನ 2.30ರವರೆಗೆ ಶಿಬಿರ ನಡೆಯಲಿದ್ದು, ಬೆಳಿಗ್ಗೆ 11.30ಕ್ಕೆ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಡಿಹೆಚ್‌ಒ ಡಾ.ಷಣ್ಮುಖಪ್ಪ ಎಸ್., ಸಂಕಲ್ಪ ಸೇವಾ ಫೌಂಡೇಷನ್ ಅಧ್ಯಕ್ಷ ಜಿ.ಮಹಾಂತೇಶ್, ಸಿಟಿ ಸೆಂಟ್ರಲ್ ಆಸ್ಪತ್ರೆ ಅಧ್ಯಕ್ಷ ಡಾ. ಹೆಚ್.ಎಲ್. ಸುಬ್ಬಾರಾವ್, ಕೀಲು ಮೂಳೆ ಶಸ್ತ್ರ ಚಿಕಿತ್ಸಾ ತಜ್ಞ ಡಾ.ಷಣ್ಮುಖಪ್ಪ ಎಸ್., ನೇತ್ರ ತಜ್ಞ ಡಾ. ಸುನೀಲ್ ಜಿ. ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಸಂಕಲ್ಪ ಸೇವಾ ಫೌಂಡೇಷನ್ ಅಧ್ಯಕ್ಷ ಜಿ. ಮಹಾಂತೇಶ್, ಸರ್ಕಾರಿ ನೌಕರರ ಸಂಘದ ಕಾರ್ಯಾಧ್ಯಕ್ಷ ಬಿ. ಪಾಲಾಕ್ಷಿ, ಖಜಾಂಚಿ ತಿಪ್ಪೇಸ್ವಾಮಿ ಬಿ.ಆರ್., ಗೌರವಾಧ್ಯಕ್ಷ ಸಿ. ತಿಪ್ಪೇಸ್ವಾಮಿ, ರಾಜ್ಯ ಪರಿಷತ್ ಸದಸ್ಯೆ ಮಂಜಮ್ಮ, ಸುಹೇಲ್, ಸಿದ್ದೇಶ್, ಧರ್ಮಪ್ಪ, ಕಿರಣ್ ಕುಮಾರ್, ಮಾಲಾ, ಹರ್ಷಿತ ಇತರರಿದ್ದರು.

## ಅಣಜಿಯಲ್ಲಿಂದು ಮಾರಮ್ಮ ಕಾರ್ತಿಕ

ಗ್ರಾಮದೇವತೆ ಶ್ರೀ ಮಾರಮ್ಮದೇವಿಯ ಇಂದು ಬೆಳಿಗ್ಗೆ 8 ರಿಂದ 12 ರವರೆಗೆ ರುದ್ರಾಭಿಷೇಕ, ವಿಶೇಷ ಅಲಂಕಾರ, ಮಂಗಳಾರತಿ ನಡೆಯಲಿದೆ. ಸಂಜೆ 6 ರಿಂದ ಅಮ್ಮನವರ ಮೆರವಣಿಗೆ, ನಂತರ ರಾತ್ರಿ 8.30ಕ್ಕೆ ಕಾರ್ತಿಕ ದೀಪೋತ್ಸವ ಜರುಗಲಿದೆ. ಹೆಬ್ಬಾಳು ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಕಾರ್ತಿಕ ದೀಪೋತ್ಸವಕ್ಕೆ ಚಾಲನೆ ನೀಡುವರು.

ಎಪಿಎಂಸಿ ಮಾಜಿ ಅಧ್ಯಕ್ಷ ಎಸ್.ಕೆ. ಚಂದ್ರಶೇಖರ್, ಅಣಜಿ ಗ್ರಾ.ಪಂ. ಅಧ್ಯಕ್ಷ ಮಲ್ಲಿಕಾರ್ಜುನ, ನಿವೃತ್ತ ಎಎಸ್‌ಐ ಟಿ. ಹಾಲಪ್ಪ ಭಾಗವಹಿಸುವರು.

# ಜನಪರ ಶಿಕ್ಷಣ ನೀತಿಗೆ ಆಗ್ರಹಿಸಿ ಕುಲಪತಿಗೆ ಸಮೀಕ್ಷಾ ವರದಿ ಸಲ್ಲಿಕೆ

ದಾವಣಗೆರೆ, ಡಿ. 28- ಕರ್ನಾಟಕದಲ್ಲಿ ಜನಪರ ಶಿಕ್ಷಣ ನೀತಿಗೆ ಆಗ್ರಹಿಸಿ ನಡೆಸಿದ ಸಮೀಕ್ಷಾ ವರದಿಯನ್ನು ಎಐಡಿಎಸ್‌ಓ ಸಂಘಟನೆ ನೇತೃತ್ವದಲ್ಲಿ ದಾವಣಗೆರೆ ವಿವಿ ಕುಲಪತಿ ಪ್ರೊ. ಬಿ.ಡಿ. ಕುಂಬಾರ್ ಅವರಿಗೆ ಸಲ್ಲಿಸಲಾಯಿತು.



ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಮಹಾಂತೇಶ್ ಬೇಳೂರು, ದಾವಣಗೆರೆ ಜಿಲ್ಲಾ ಸಮಿತಿ ಕಾರ್ಯದರ್ಶಿ ಪೂಜಾ ನಂದಿಹಳ್ಳಿ ಅವರು ಈ ವರದಿಯನ್ನು ಸಲ್ಲಿಸಿದರು.

ಕರ್ನಾಟಕದ 9 ಸರ್ಕಾರಿ ವಿಶ್ವವಿದ್ಯಾಲಯಗಳು, 82 ಸರ್ಕಾರಿ ಪದವಿ ಕಾಲೇಜುಗಳು, 12 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಮತ್ತು 15 ಸರ್ಕಾರಿ ವಿದ್ಯಾರ್ಥಿ ವಸತಿ ನಿಲಯಗಳು ಸೇರಿದಂತೆ 23,120 ಜನ ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದರು. ಶಿಕ್ಷಣ ನೀತಿಯ ಮೇಲೆ ರಾಜ್ಯದಲ್ಲಿ ನಡೆದ ಅತಿ ದೊಡ್ಡ ಸಮೀಕ್ಷೆ ಇದಾಗಿದೆ.

ಶಿಕ್ಷಣದ ಸಂಪೂರ್ಣ ಆರ್ಥಿಕ ಜವಾಬ್ದಾರಿಯನ್ನು ಸರ್ಕಾರವೇ ವಹಿಸಬೇಕೆಂಬುದು ಕರ್ನಾಟಕದ ಜನತೆಯ ಆಗ್ರಹವಾಗಿದೆ. ನಾಲ್ಕು ವರ್ಷಗಳ ಪದವಿಯನ್ನು ಕೈಬಿಡಬೇಕೆಂಬದು ಸಂಘಟನೆಯ ಆಶಯವಾಗಿದೆ.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು ಸ್ಥಾಪಿಸಬೇಕೆಂದು ವಿದ್ಯಾರ್ಥಿಗಳು ಬಯಸಿದ್ದಾರೆ ಎಂದು ರಾಜ್ಯ ಕಾರ್ಯದರ್ಶಿ ಮಹಾಂತೇಶ್ ಬೇಳೂರು ತಿಳಿಸಿದರು.

ಸಾರ್ವಜನಿಕ ಶಿಕ್ಷಣ ಉಳಿಸಲು ಪ್ರಬಲ ಚಳವಳಿಯನ್ನು ಬೆಳೆಸುವ ಮತ್ತು ಎನ್‌ಇಪಿ 2020 ನ್ನು ಪ್ರತಿರೋಧಿಸಲು ಮುನ್ನಡೆಯಬೇಕಾಗಿದೆ. ವಿದ್ಯಾರ್ಥಿಗಳಿಗೆ ಕೌಶಲ್ಯ, ಉದ್ಯೋಗ ತರಬೇತಿ ನೀಡುವ ನೆಪದಲ್ಲಿ ಪಠ್ಯಕ್ರಮದಲ್ಲಿ ಮೌಲ್ಯಗಳನ್ನು ಕಡೆಗಣಿಸಬಾರದು ಎಂದು ಹೇಳಿದರು.

ರಾಜ್ಯದಲ್ಲಿ ಜನಪರ ಶಿಕ್ಷಣ ನೀತಿ ಜಾರಿಯಾಗಬೇಕೆಂದು ಸಂಘಟನೆ ಮುಖಂಡರು ಒತ್ತಾಯಿಸಿದರು.

## ಪ್ರಧಾನಿಯಿಂದ ಅಯೋಧ್ಯೆಯಲ್ಲಿ ಹಲವು ಯೋಜನೆಗಳಿಗೆ ಚಾಲನೆ

ನವದೆಹಲಿ, ಡಿ. 28 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಡಿಸೆಂಬರ್ 30ರಂದು ಅಯೋಧ್ಯೆಯ ವಿಮಾನ ನಿಲ್ದಾಣ, ನವೀಕೃತ ರೈಲ್ವೇ ನಿಲ್ದಾಣ ಉದ್ಘಾಟಿಸಲಿದ್ದಾರೆ. ಇದೇ ವೇಳೆ ಅವರು ಎರಡು ಹೊಸ ಅಮೃತ್ ಭಾರತ್ ರೈಲುಗಳು ಹಾಗೂ ಆರು ವಂದೇ ಭಾರತ್ ರೈಲುಗಳಿಗೆ ಹಸಿರು ನಿಶಾನೆ ತೋರಲಿದ್ದಾರೆ.

ಅಯೋಧ್ಯೆಯಲ್ಲಿ 11 ಸಾವಿರ ಕೋಟಿ ರೂ. ವೆಚ್ಚದ ನಾಗರಿಕ ಸೌಲಭ್ಯ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ ಹಾಗೂ ಉತ್ತರ ಪ್ರದೇಶದ ವಿವಿಧೆಡೆ 4,600 ಕೋಟಿ ರೂ.ಗಳ ಯೋಜನೆಗಳಿಗೂ ಚಾಲನೆ ನೀಡಲಿದ್ದಾರೆ.

# ಏಸು ಜೀವನ ಸಂದೇಶಗಳನ್ನು ಅಳವಡಿಸಿಕೊಳ್ಳಿ



**ಹರಪನಹಳ್ಳಿ ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ್ ಕರೆ**

ಹರಪನಹಳ್ಳಿ, ಡಿ. 28 - ಏಸು ಕ್ರಿಸ್ತನ ಜೀವನ ಸಂದೇಶಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಹೇಳಿದರು.

ಪಟ್ಟಣದ ಹೊಸಪೇಟೆ ರಸ್ತೆಯ ಬಾಬು ಜಗಜೀವನರಾಮ್ ಭವನದಲ್ಲಿ ಫುಲ್ ಗಾಸ್ಪೆಲ್ ಅಸೆಂಬ್ಲಿ ಚರ್ಚಿನವರು ಆಯೋಜಿಸಿದ್ದ ಕ್ರಿಸ್‌ಮಸ್ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕೇಕ್ ಕಟ್ ಮಾಡುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಏಸು ಹೇಳಿದ ಪ್ರೀತಿ, ಕ್ಷಮೆ, ದಯಾ ಗುಣಗಳು ಎಲ್ಲರ ಬದುಕಿನ ದಾರಿ ದೀಪವಾಗಲಿ ಶಾಂತಿ, ಸಮೃದ್ಧಿ ಎಲ್ಲೆಡೆ ತುಂಬಲಿ ಎಂದು ಆಶೀಸಿದರು.

ಈ ಸಂದರ್ಭದಲ್ಲಿ ಹಾಸ್ಟೆಲ್ ವಾರ್ಡನ್‌ಗಳಾದ ನಾಗರತ್ನಮ್ಮ ಹಾಗೂ ಶಕುಂತಲಾ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು. ಮಕ್ಕಳಿಂದ ನಾಟಕ, ನೃತ್ಯ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ತುಮಕೂರಿನ ಸಮ್‌ವೇಲ್ ಅವರು ಏಸುಕ್ರಿಸ್ತನ ಜೀವನ ಸಾಧನೆಯ ಬಗ್ಗೆ ಪ್ರವಚನ ನೀಡಿದರು.

ಈ ವೇಳೆ ಚರ್ಚಿನ ಮುಖ್ಯಸ್ಥ ನೀಲಂ ಆರ್ಮಸ್ಟ್ರಾಂಗ್, ಸರಳ ನೀಲಂ ಆರ್ಮಸ್ಟ್ರಾಂಗ್, ಸುಲೇಮಾನ್ ದೊಡ್ಡಮನಿ, ಷುಷ್ಮಾ ದೊಡ್ಡಮನಿ, ಪಿಲಿಪ್ ದೊಡ್ಡಮನಿ, ಮೀನಾಕ್ಷಿ ದೊಡ್ಡಮನಿ, ಪ್ರದೀಪ್ ಕೊಟ್ಟೂರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ (KSOU) ಮೈಸೂರು (UGC ಅನುಮೋದಿತ)**

ಪರೀಕ್ಷಾ ಕೇಂದ್ರ ಅರಸಿಕೆರೆ, ಹರಪನಹಳ್ಳಿ ತಾ.

ಪ್ರವೇಶಗಳು ಪ್ರಾರಂಭವಾಗಲಿವೆ Hurry Up

2023-24ರ ಶೈಕ್ಷಣಿಕ ಸಾಲಿನ (ಜನವರಿ ಆವೃತ್ತಿಯ) ಸ್ನಾತಕ ಮತ್ತು ಸ್ನಾತಕೋತ್ತರ (UG)PG ಕೋರ್ಸ್‌ಗಳಾದ

**BA, B.Com, BBA, B.Sc, BLis, BCA, MA (Al Sub), M.Com M.Sc (All Subjects) M.Lib, MBA, MCA, BSW, MSW ಹಾಗೂ PG Dilpoma**

ಮುಂತಾದ ಕೋರ್ಸ್‌ಗಳ ಪ್ರವೇಶಾತಿ ಪ್ರಕ್ರಿಯೆ ಪ್ರಾರಂಭವಾಗಿದೆ. ಆಸಕ್ತ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಿ.

**9535114063 / 96203 71544 / 97428 35642 / 08192 466045**

**ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ಚೀಟಿ ನಿಧಿಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ ದಾವಣಗೆರೆ.**

**ಆಂಜನೇಯ ದೇವಸ್ಥಾನದ ಎದುರು ವಿದ್ಯಾನಗರ ದಾವಣಗೆರೆ ಇವರ ನ್ಯಾಯಲಯದ ನಡವಳಿಕೆಗಳು**

**A.R./DVG/CHIT/02/2023-24**

ಅರ್ಜಿದಾರರು : ಶ್ರೀ ಗುರು ಚಿಟ್ ಫಂಡ್ಸ್ (ರಿ), ಶಾಪ್, ನಂಬರ್.1, 2ನೇ ಮಹಡಿ, ಕುರುಬರ ಹಾಸ್ಟೆಲ್ ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರೋಡ್, ದಾವಣಗೆರೆ.

ಎದುರುದಾರರು : ಎಸ್.ಸಿ. ಪ್ರಕಾಶ್ ಮತ್ತು ಇತರರು.

2) ಪ್ರೇಮಾ ಜಿ.ಆರ್ ಕೋಂ. ಎಸ್.ಎಚ್.ಚಂದ್ರಶೇಖರಪ್ಪ 75 ವರ್ಷ # 693/22 ಬನ್ನಿಮರದ ಪಕ್ಕ, 2ನೇ ಮೇನ್ ಕೊಟ್ಟೂರೇಶ್ವರ ಬಡಾವಣೆ, ನಿಟ್ಟುವಳ್ಳಿ, ದಾವಣಗೆರೆ-577002.

3) ಎ.ಸಿ.ಅನ್ನಪೂರ್ಣ ಕೋಂ. ಎಸ್.ಸಿ. ಪ್ರಕಾಶ್ 38 ವರ್ಷ, # 693/22 ಬನ್ನಿಮರದ ಪಕ್ಕ 2ನೇ ಮೇನ್ ಕೊಟ್ಟೂರೇಶ್ವರ ಬಡಾವಣೆ, ನಿಟ್ಟುವಳ್ಳಿ, ದಾವಣಗೆರೆ-577002.

**ಸಿ.ಪಿ.ಸಿ. ಆದೇಶ 5 ನಿಯಮ 20 ರ ಅಡಿಯಲ್ಲಿ ಅರ್ಜಿದಾರರು ಎದುರುದಾರರ ವಿರುದ್ಧ ನೀಡಲಾದ ಪತ್ರಿಕಾ ಪ್ರಕಟಣೆ ನೋಟೀಸ್**

ಮೇಲ್ಕಂಡ ವ್ಯಾಜ್ಯದಲ್ಲಿ ಅರ್ಜಿದಾರರು ಎದುರುದಾರರ ವಿರುದ್ಧ ದಾವೆ ಮೊತ್ತ ಮತ್ತು ಈ ನ್ಯಾಯಾಲಯದ ವೆಚ್ಚದ ವಸೂಲಾತಿಗಾಗಿ ಚಿಟ್ ಫಂಡ್ ಕಾಯ್ದೆ 1982 ಕಲಂ 64 ರ ಅನ್ವಯ ಈ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ. ಈ ನ್ಯಾಯಾಲಯದಿಂದ ಎದುರುದಾರರಾದ ನಿಮಗೆ ಈ ವ್ಯಾಜ್ಯದ ವಿಚಾರಣೆಗೆ ಹಾಜರಾಗಲು ನೋಂದಣಿ ಅಂಚೆ ಮೂಲಕ ನೋಟೀಸ್ ಕಳಿಸಿದ್ದು, ನಿಮಗೆ ನೋಟೀಸ್ ಜಾರಿ ಆಗದ ಕಾರಣ ಮೇಲ್ಕಂಡ ಎದುರುದಾರರು : ದಿನಾಂಕ:11.01.2024ರಂದು ಮಧ್ಯಾಹ್ನ 3.00 ಗಂಟೆಗೆ ಈ ಮೇಲ್ಕಂಡ ನ್ಯಾಯಲಯದಲ್ಲಿ ಹಾಜರಾಗತಕ್ಕದ್ದು, ತಪ್ಪಿದಲ್ಲಿ ತಮ್ಮ ಅನುಪಸ್ಥಿತಿಯನ್ನು ಏಕಪಕ್ಷೀಯವೆಂದು ಪರಿಗಣಿಸಿ, ಅರ್ಹತೆಯ ಆಧಾರದ ಮೇಲೆ ಈ ಪ್ರಕರಣವನ್ನು ಇತ್ಯರ್ಥ ಪಡಿಸಲಾಗುವುದೆಂದು ತಿಳಿಯತಕ್ಕದ್ದು,

ಈ ನೋಟೀಸನ್ನು ನನ್ನ ಸಹಿ ಮತ್ತು ಈ ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ: 18.12.2023 ರಂದು ನೀಡಿದೆ.

ಸ್ಥಳ : ದಾವಣಗೆರೆ.
ದಿನಾಂಕ : 18.12.2023

ಸಹಿ /- ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ಚೀಟಿ ನಿಧಿಗಳ ಸಹಾಯಕ ನಿಬಂಧಕರು ದಾವಣಗೆರೆ, ಉಪವಿಭಾಗ ದಾವಣಗೆರೆ

**FORM NO. 22 AND 18**

GENERAL NOTICE IN RESPECT OF INTERLOCUTARY APPLICATION AND NOTICE FOR APPEARANCE IN APPEALS ORDER 41 RULE 14 CPC, AND RULES 1,2,4 AND 11 OF CHAPTER IV KARNATAKA HIGH COURT RULES

**IN THE HIGH COURT OF KARNATAKA AT BENGALUR**
MFA NO. 509/2017 (MV/SJ)

APPELLANT : **1. U. MANJUNATH S/O LATE NINGAPPA,** AGED ABOUT 63 YEARS, NOW R/O # 98, 5TH CROSS, LABOUR COLONY, DAVANAGERE - 577002.
**BY SRI A.K. SHREE HARSHA ADV.** ***VS***
RESPONDENT
**1. GANAPATJI V GANGOLLI @ GANGOLLI S/O VENKATESH MADINOL,** AGED ABOUT 52 YEARS, OWNER CUM RIDER OF MOTOR CYCLE, BEARING REG NO KA.17/ & -6622, R/O # 764, 4TH MAIN, P J EXTENSION, DAVANGERE - 577002. **AND ANOTHER**

APPEAL FROM THE JUDGEMENT/AWARD/ORDER PASSED ON 03.08.2016 IN MVC NO.872/2013 ON THE FILE OF III ADDL. SENIOR CIVIL JUDGE, DAVANAGERE 6 VII MACT, DAVANAGERE. IA NO.1/2017 FOR CONDONE THE DELAY OF 12 DAYS FILED IN THE ABOVE APPEAL.

*TO* **RESPONDENT 1. GANAPATJI V GANGOLLI @ GANGOLLI S/O VENKATESH MADINOL,** AGED ABOUT 52 YEARS, OWNER CUM RIDER OF MOTOR CYCLE, BEARING REG NO KA.17/ &-6622 R/O # 764, 4TH MAIN, P J EXTENSION, DAVANGERE 577002.

WHEREAS THE AFOREMENTIONED APPEAL PREFERRED HAS BEEN REGISTERED BY THIS COURT.

NOTICE IS HEREBY GIVEN TO YOU TO APPEAR IN THIS COURT IN PERSON OR THROUGH AN ADVOCATE DULY INSTRUCTED OR THROUGH SOME ONE AUTHORISED BY LAW TO ACT FOR YOU IN THIS CASE ON **22/01/2024 AT 10.30 A.M.,** IN CASE YOU INTEND TO CONTEST THE APPEAL. IF YOU FAIL SO TO APPEAR, THE APPEAL WILL BE DEALT WITH, HEARD AND DECIDED IN YOUR ABSENCE.

GIVEN UNDER MY HAND AND THE SEAL OF THIS COURT ON 13TH DAY OF DECEMBER 2023.

*BY ORDER OF THE COURT SD/-* **ASSISTANT REGISTRAR**


# ಆಧುನಿಕ ಕನ್ನಡದ ರಸಋಷಿ, ವಿಶ್ವ ಮಾನವ ಸಂದೇಶ ಸಾರಿದ ಕುವೆಂಪು

ಆಧುನಿಕ ಕನ್ನಡದ ರಸಋಷಿ, ಕನ್ನಡದ ಅಗ್ರಮಾನ್ಯ ಕವಿ, ರಾಷ್ಟ್ರಕವಿ, ಕನ್ನಡಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿಯನ್ನು ತಂದು ಕೊಟ್ಟಂತಹ ಸಾಹಿತ್ಯದ ಮೇರು ಶಿಖರ ನಮ್ಮ ಪುಟ್ಟಪ್ಪನವರು.

'ಕುವೆಂಪು' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದವರು ಕೆ.ವಿ.ಪುಟ್ಟಪ್ಪನವರು. ಇವರ ಪೂರ್ಣ ಹೆಸರು ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ.ಇವರು 29.12.1904 ರಂದು, ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕು ಕುಪ್ಪಳಿಯಲ್ಲಿ ಜನಿಸಿದರು.ಪ್ರಾಥಮಿಕ ಶಿಕ್ಷಣವನ್ನು ತೀರ್ಥಹಳ್ಳಿಯಲ್ಲಿ, ಎಂ.ಎ, ಶಿಕ್ಷಣವನ್ನು ಮೈಸೂರಿನಲ್ಲಿ ಪೂರೈಸಿದರು.

1921 ರಲ್ಲಿ 'ಪದ್ಮ ಪತ್ರದ ಸಂಘ'ವನ್ನು ಆರಂಭಿಸಿ ಕಾವ್ಯ ವಿಮರ್ಶೆ, ಚರ್ಚಾ ಗೋಷ್ಠಿಗಳನ್ನು ನಡೆಸುತ್ತಿದ್ದವರು. 1922 ರಲ್ಲಿ ತಮ್ಮ ಮೊದಲ ಇಂಗ್ಲಿಷ್ ಪದ್ಯಗಳ ಸಂಕಲನ 'ಬಿಗಿನರ್ಸ್ ಮ್ಯೂಸ್' ಪ್ರಕಟಿಸಿದರು. ಆಗ ಅವರ ಕಾವ್ಯ ನಾಮ 'ಕಿಶೋರ ಚಂದ್ರ ವಾಣಿ' ಎಂದು. ಮುಂದೆ ಐರಿಶ್ ಕವಿ 'ಜೇಮ್ಸ್ ಕಸಿನ್ಸ್' ಪುಟ್ಟಪ್ಪನವರ ಇಂಗ್ಲೀಷ್ ವ್ಯಾಮೋಹ ಬಿಡಿಸಿ, ಕನ್ನಡದಲ್ಲಿ ಬರೆಯುವಂತೆ ಪ್ರೇರೇಪಿಸಿದರು. 1924 ರಲ್ಲಿ 'ಅಮಲನ ಕಥೆ' ಬರೆದರು. ಎರಡನೆಯ ಬಿ.ಎ, ದಲ್ಲಿ ಓದುತ್ತಿರುವಾಗಲೇ 'ಕಿಂದರಿ ಜೋಗಿ' ಪ್ರಕಟವಾಯಿತು. 1928ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ನಡೆದ ವಿದ್ಯಾರ್ಥಿ ಕವಿ ಸಮ್ಮೇಳನಕ್ಕೆ ಅಧ್ಯಕ್ಷರಾದರು. 1937ರಲ್ಲಿ ಹೇಮಾವತಮ್ಮನವರೊಂದಿಗೆ ವಿವಾಹವಾದರು. ಪ್ರಸಿದ್ಧ ಕಥಾ ಸಾಹಿತಿ ಪೂರ್ಣಚಂದ್ರ ತೇಜಸ್ವಿ ಇವರ ಮಕ್ಕಳಲ್ಲೊಬ್ಬರು. 1929 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಕೆಲಸಕ್ಕೆ ಸೇರಿದ ಪುಟ್ಟಪ್ಪನವರು 1960 ರವರೆಗೆ ಪ್ರಾಧ್ಯಾಪಕ ಮತ್ತು ಕುಲಪತಿಗಳಾಗಿಯೂ ಕೆಲಸ ಮಾಡಿದರಲ್ಲದೆ ತಮ್ಮ ಅಧಿಕಾರದ ಕಡೆಯ ವರ್ಷ ಮಾನಸ ಗಂಗೋತ್ರಿಯನ್ನು ಆರಂಭಿಸಿದರು. ಒಂದು ಮಾದರಿ ವಿಶ್ವವಿದ್ಯಾಲಯವು ಬೋಧನಾಂಗ, ಸಂಶೋಧನಾಂಗ ಮತ್ತು ಪ್ರಸಾರಾಂಗವೆಂಬ ಮೂರು ಬಗೆಯಲ್ಲಿ ಹೇಗೆ ಕೆಲಸ ಮಾಡಬೇಕೆಂಬುದನ್ನು ತೋರಿಸಿದ್ದಾರೆ. ಅಲ್ಲದೇ ಕನ್ನಡವನ್ನು ಒಂದು ಮರ್ಯಾದೆಯುತ ಭಾಷೆಯನ್ನಾಗಿಸುವ ಕಡೆ ಅಪಾರ ಶ್ರಮ ವಹಿಸಿದ್ದಾರೆ.

ಸ್ವಾತಂತ್ರ್ಯ ಚಳವಳಿ, ನಾಡು ನುಡಿ, ಕರ್ನಾಟಕದ ಏಕೀಕರಣ ಮತ್ತು ಪ್ರಾದೇಶಿಕ ಭಾಷಾ ಶಿಕ್ಷಣದ ಅವಶ್ಯಕತೆಗೆ ಸದಾ ಒತ್ತಾಯಿಸುತ್ತಿದ್ದ ಪುಟ್ಟಪ್ಪನವರು ಕನ್ನಡದ ಮೂಲಕವೇ ಭಾರತ ಮತ್ತು ವಿಶ್ವಗಳನ್ನು ಕಂಡ ಅಪರೂಪದ ಮನುಷ್ಯ.



ಅಲ್ಲದೆ ಪ್ರಜಾಪ್ರಭುತ್ವದ ಪ್ರಬಲ ಪ್ರತಿಪಾದಕ.

ಪುಟ್ಟಪ್ಪನವರು ಮೂಲತಃ ಕವಿ. ಅವರು ಕವಿತೆ, ಕಥೆ, ನಾಟಕ, ಕಾದಂಬರಿ, ಜೀವನ ಚಿತ್ರಗಳು, ಮಕ್ಕಳ ಸಾಹಿತ್ಯ, ಮಹಾಕಾವ್ಯ, ವಿಮರ್ಶೆ, ವಿಚಾರ, ಜೀವನ ಚರಿತ್ರೆ ಮತ್ತು ಆತ್ಮಕತೆ ಮುಂತಾದ ಪ್ರಕಾರಗಳಲ್ಲಿ ಎಂಭತ್ತಕ್ಕೂ ಹೆಚ್ಚಿನ ಕೃತಿಗಳನ್ನು ರಚಿಸಿದ್ದಾರೆ. ಅವರ ಕೃತಿಗಳಲ್ಲಿ ಕಲೆ, ತತ್ವ, ಅಧ್ಯಾತ್ಮ, ಪ್ರಕೃತಿ, ಪ್ರೀತಿ, ದೇವರು, ನಾಡು ನುಡಿ, ಪುರಾಣ, ಇತಿಹಾಸ, ಸಂಸ್ಕೃತಿ, ಸಾಹಿತ್ಯ ಮೀಮಾಂಸೆ, ವಿಜ್ಞಾನ, ವಿಚಾರ ಮುಂತಾಗಿ ನಾನಾ ವಿಷಯಗಳು ವಸ್ತುವಾಗಿವೆ. ಅವರ ಸಾಹಿತ್ಯ ಕನ್ನಡಕ್ಕಷ್ಟೇ ಅಲ್ಲದೆ ಭಾರತೀಯ ಸಾಹಿತ್ಯಕ್ಕೂ ಸಹಾ ಮೌಲೀಕವಾದುದಾಗಿದೆ. ಅವರ ಸೃಜನಶೀಲತೆಯ ಮುಖ್ಯ ಜೀವಾಳ ಶೂದ್ರ ಪ್ರಜ್ಞೆಯ ವಿಚಾರವಾದ.

ಯಾವುದೇ ಸಮಕಾಲೀನ ಸಾಹಿತಿಗಿಂತಲೂ ವಿಭಿನ್ನವಾದ ಪ್ರತಿಭೆ ಮತ್ತು ಆಲೋಚನಾ ಶಕ್ತಿಯ ಪುಟ್ಟಪ್ಪನವರು 'ಪ್ರೇಮ ಕಾಶ್ಮೀರ', 'ಜೇನಾಗುವ', 'ಚಂದ್ರಮಂಚಕೆ ಬಾ ಚಕೋರಿ', 'ನವಿಲು', 'ಪಕ್ಷಿಕಾಶಿ' ಮುಂತಾದ ಕವನ ಸಂಕಲನಗಳಲ್ಲಿ ಮನುಷ್ಯ ಮತ್ತು ಪ್ರಕೃತಿಗಳ ಸಂಬಂಧ, ಮನುಷ್ಯನ ತನ್ಮಯತೆ, ಅಲ್ಲಿನ ಸೌಂದರ್ಯ, ಸಾಕ್ಷಾತ್ಕಾರ, ಶಿಶುಸಹಜ ಮುಗ್ಧತೆ, ಭೀಕರತೆ ಮತ್ತು ಕೋಮಲತೆಗಳು, ಮಾನವ ಪ್ರೀತಿಯ ನೆಲೆಗಳು ಕವಿತೆಗಳು ಮತ್ತು ಕಥನ ಕವನಗಳಲ್ಲಿ ಕಂಡು ಬರುತ್ತವೆ. ಅವರ ಶೂದ್ರ ಪ್ರಜ್ಞೆ ದಿಟ್ಟವಾಗಿ ಪ್ರಕಟವಾಗಿರುವುದು 'ಬೆರಳ್‌ಗೆ ಕೊರಳ್ ' , ಶೂದ್ರ ತಪಸ್ವಿ, ಜಲಗಾರ ಮುಂತಾದ ನಾಟಕಗಳಲ್ಲಿ 'ರಸೋವೈಸಃ', 'ವಿಭೂತಿ ಪೂಜೆ', 'ತಪೋನಂದನ', 'ದ್ರೌಪದಿಯ ಶ್ರೀ ಮುಡಿ'ಗಳಲ್ಲಿ ಅವರ ದಾರ್ಶನಿಕ ವಿಮರ್ಶೆಯನ್ನು ಕಂಡರೆ, 'ಷಷ್ಟಿ ನಮನ', 'ನಿರಂಕುಶಮತಿಗಳಾಗಿ', 'ವಿಚಾರ ಕ್ರಾಂತಿಗೆ ಆಹ್ವಾನ ' ಕೃತಿಗಳಲ್ಲಿ ಬೌದ್ಧಿಕ ದಾರಿದ್ರ್ಯದ ಬಿಡುಗಡೆ, ಪುರೋಹಿತ ಶಾಹಿಯ ವಿರುದ್ಧ ಅಜ್ಞಾನದ ಬಿಡುಗಡೆಯ ಬಗ್ಗೆ ದಟ್ಟವಾಗಿ ಬರೆಯುತ್ತಾರೆ. 'ನನ್ನ ದೇವರು ಮತ್ತು ಇತರೆ ಕಥೆಗಳು', 'ಸನ್ಯಾಸಿ ಮತ್ತು ಇತರ ಕತೆಗಳು', ಕಥಾ ಸಂಕಲನಗಳು. ಅವರ 'ಮಲೆನಾಡಿನ ಚಿತ್ರಗಳು' ಸಾಹಿತ್ಯದ ವಿಶಿಷ್ಟವಾದ ಕೃತಿ.

ಇವರ 'ಕಾನೂರು ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಎಂಬೆರಡು ಮಹಾ ಕಾದಂಬರಿಗಳು ಕನ್ನಡ ಕಾದಂಬರಿ ಸಾಹಿತ್ಯದ ಮೇಲೆ ದಟ್ಟ ಪ್ರಭಾವ ಬೀರಿದವು. ಮಲೆನಾಡಿನ ಮನುಷ್ಯ ಜಗತ್ತಿನ ಸಂಕೀರ್ಣ ಬದುಕನ್ನು ಚಿತ್ರಿಸುವ ಇವು ಭಾರತೀಯ ಸಾಹಿತ್ಯದ ಪ್ರಮುಖ ದಾಖಲೆಗಳು. 'ಷಷ್ಟಿ ನಮನ', 'ನಿರಂಕುಶಮತಿಗಳಾಗಿ', 'ವಿಚಾರ ಕ್ರಾಂತಿಗೆ ಆಹ್ವಾನ ', ಕೃತಿಗಳ ಮೂಲಕ ಅವರ ವೈಚಾರಿಕತೆಯ ಹೊಸ ಬೆಳಕು ಪ್ರದರ್ಶಿತವಾದರೆ 'ಶ್ರೀ ರಾಮಕೃಷ್ಣ ಪರಮಹಂಸ', 'ಸ್ವಾಮಿ ವಿವೇಕಾನಂದ' ಕೃತಿಗಳಲ್ಲಿ ಜೀವನ ಚರಿತ್ರೆಯ ನಿರೂಪಣಾ ಶಕ್ತಿ ಮತ್ತು ಗದ್ಯ ಬರಹದ ವಿಶೇಷವನ್ನು ಕಾಣುತ್ತೇವೆ. ಅವರ 'ಶ್ರೀ ರಾಮಾಯಣ ದರ್ಶನಂ' ಕನ್ನಡ ಭಾಷಾ ಸಂಸ್ಕೃತಿ ದೃಷ್ಟಿಕೋನಗಳಿಗೆ ಹೊಸ ಚಾಲನೆ ನೀಡಿದ ಮಹಾಕಾವ್ಯ.

ಕುವೆಂಪು ಅವರು ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ ಮತ್ತು ಪೂರ್ಣ ದೃಷ್ಟಿ ಎಂಬ 'ವಿಶ್ವಮಾನವ ತತ್ವವನ್ನು' ಸಾರಿದ ಮೇರು ಕವಿಯಾಗಿದ್ದಾರೆ.



- ಮಾ.ಬ.ನಾಗರಾಜ್ ಕುಂದೂರು.
ಶಿಕ್ಷಕರು, ದಾವಣಗೆರೆ.
ಮೊ : 9611480732

## ಯುವಕರಿಗೆ ಉತ್ತಮ ಸಮಾಜ ಕಟ್ಟಲು ಕರೆ

**ಹೊನ್ನಮರಡಿಯಲ್ಲಿನ ಸುವರ್ಣ ಕರ್ನಾಟಕ ವೇದಿಕೆಯ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ರೈತ ಮುಖಂಡ ತೇಜಸ್ವಿ ಪಟೇಲ್**

ದಾವಣಗೆರೆ, ಡಿ. 28- ತಾಲ್ಲೂಕಿನ ಹೊನ್ನಮರಡಿ-ಆಂಜನೇಯ ನಗರದಲ್ಲಿ ಸುವರ್ಣ ಕರ್ನಾಟಕ ವೇದಿಕೆಯ ಗ್ರಾಮ ಘಟಕದ ವತಿಯಿಂದ 68 ನೇ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು.

ರೈತ ಮುಖಂಡ ತೇಜಸ್ವಿ ಪಟೇಲ್ ಜ್ಯೋತಿ ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ರೈತ ಸಂಘಟನೆ, ದಲಿತ ಸಂಘಟನೆ, ಕಾರ್ಮಿಕ ಸಂಘಟನೆಗಳಲ್ಲಿ ವಯಸ್ಕರರು, ಮಧ್ಯ ವಯಸ್ಕರರು ಇದ್ದಾರೆ. ಆದರೆ ಕನ್ನಡ ಪರ ಸಂಘಟನೆಗಳಲ್ಲಿ ಅತಿ ಹೆಚ್ಚು ಯುವಕರೇ ಇರುವುದನ್ನು ಗಮನಿಸಬೇಕೆಂದರು.

ಯುವಕರು ಭವಿಷ್ಯದ ಪ್ರಜೆಗಳು, ನಮ್ಮ ದೇಶ, ಪ್ರಪಂಚದ ಇತಿಹಾಸ ಗಮನಿಸುತ್ತಾ ಬಂದರೆ ಹಲವು ಪ್ರಾಂತಗಳಲ್ಲಿ ಅದರಲ್ಲೂ ನಮ್ಮ ದೇಶದ ಸ್ವಾತಂತ್ರ್ಯದಲ್ಲಿ ಆ ಕಾಲದ ಯುವಕರು ಪ್ರಜ್ಞಾವಂತರಾಗಿದ್ದ ಕಾರಣ ಅವರು ಉತ್ತಮ ಸಮಾಜ ನಿರ್ಮಾಣ ಮಾಡಿದರು. ಅದೇ ರೀತಿ ಈಗಲೂ ಇನ್ನಷ್ಟು ಉತ್ತಮ ಸಮಾಜವನ್ನು ಕಟ್ಟಲು ಮನಸ್ಸು ಮಾಡಲು ಮುಂದಾಗುವಂತೆ ಕರೆ ನೀಡಿದರು.

ಸಾನ್ನಿಧ್ಯ ವಹಿಸಿದ್ದ ಶ್ರೀ ಬಾಲಯೋಗಿ ಜಗದೀಶ್ವರ ಸ್ವಾಮೀಜಿ ಮಾತನಾಡಿದರು. ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಸಂತೋಷ್ ಕುಮಾರ್, ಉಪ ಪ್ರಾಚಾರ್ಯ ಪ್ರೊ ಎಂ. ಆರ್.ಹರೀಶ್, ಸಂತೋಷ್ ಕುಮಾರ್, ಮುರಿಗೆಪ್ಪ, ಎ.ಎಂ. ನಾಗರಾಜ್, ಪೋತಲ ಶ್ರೀನಿವಾಸ್, ಜಿಲ್ಲಾಧ್ಯಕ್ಷ ಶಿವಕುಮಾರ್ ಮತ್ತಿತರರು ಭಾಗವಹಿಸಿದ್ದರು.



## ಜಗಳೂರಿಗೆ ನೂತನ ಎಎಸ್ಪಿ ಬಿ.ಮಂಜುನಾಥ್ ಭೇಟಿ



ಜಗಳೂರು, ಡಿ.28- ಜಿಲ್ಲೆಯ ನೂತನ ಪೊಲೀಸ್ ಉಪ ಅಧೀಕ್ಷಕರಾಗಿ ಬಿ.ಮಂಜುನಾಥ್ ಅವರು ಅಧಿಕಾರ ವಹಿಸಿಕೊಂಡ ನಂತರ ಪ್ರಥಮವಾಗಿ ತಾಲ್ಲೂಕಿನ ಬಿಳಿಚೋಡು ಮತ್ತು ಜಗಳೂರು ಪೊಲೀಸ್ ಠಾಣೆಗಳಿಗೆ ನಿನ್ನೆ ಭೇಟಿ ನೀಡಿ ಪರಿಶೀಲಿಸಿದರು.

ನಂತರ ಮಾತನಾಡಿದ ಅವರು, ನಾನು ಈ ಹಿಂದೆ ಮೈಸೂರು ಟ್ರೈನಿಂಗ್ ಸೆಂಟರ್ ಸೇರಿದಂತೆ ಗುಲ್ಬರ್ಗ, ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಎಸಿಬಿ ಲೋಕಾಯುಕ್ತರಾಗಿ ಕೆಲಸ ನಿರ್ವಹಿಸಿದ್ದೇನೆ ಎಂದರು.


ನಾನು ಕೂಡ 2008ರಲ್ಲಿ ಜಗಳೂರು ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಆಗಿ 7 ತಿಂಗಳುಗಳ ಕಾಲ ಕೆಲಸ ನಿರ್ವಹಿಸಿದ್ದೇನೆ. ನನಗೆ ಈ ತಾಲ್ಲೂಕಿನ ಕಷ್ಟ - ಸುಖಗಳು ಗೊತ್ತು. ಜಗಳೂರಿನ ಯಾವ ಋಣಾನುಬಂಧವೋ ನನಗೆ ಗೊತ್ತಿಲ್ಲ, ಮರಳಿ ನಾನು ದಾವಣಗೆರೆ ಜಿಲ್ಲೆಗೆ ಪೋಲಿಸ್ ಉಪ ಅಧೀಕ್ಷಕರಾಗಿ ಅಧಿಕಾರ ವಹಿಸಿಕೊಂಡ ನಂತರ ಇದೇ ಪ್ರಥಮ ಬಾರಿಗೆ ಜಗಳೂರು ತಾಲ್ಲೂಕಿಗೆ ಭೇಟಿ ನೀಡಿರುವುದು ನನಗೆ ತುಂಬಾ ಸಂತೋಷದ ವಿಷಯ ಎಂದರು.

**ಪಟ್ಟಣಕ್ಕೆ ಎರಡು ಸಿಗ್ನಲ್‌ಗಳ ಅವಶ್ಯಕತೆ :** ಪಟ್ಟಣದಲ್ಲಿ ದಿನದಿಂದ ದಿನಕ್ಕೆ ವಾಹನ ಸಂಖ್ಯೆಗಳು ಹೆಚ್ಚಾಗುತ್ತಿದ್ದು, ಡಾ. ಬಿ.ಆರ್.ಅಂಬೇಡ್ಕರ್ ವೃತ್ತ ಮತ್ತು ಹಳೇ ಮಹಾತ್ಮ ಗಾಂಧೀಜಿ ವೃತ್ತದ ಎರಡು ಕಡೆ ಸಿಗ್ನಲ್‌ಗಳ ಅವಶ್ಯಕತೆ ಇದೆ. ಹಾಗಾಗಿ ತಾವುಗಳು ಪೊಲೀಸ್ ವರಿಷ್ಠಾಧಿಕಾರಿಗಳ ಗಮನಕ್ಕೆ ತಂದು, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಪತ್ರಕರ್ತರು ಕೇಳಿದ ಪ್ರಶ್ನೆಗೆ ಜಿ.ಮಂಜುನಾಥ್ ಉತ್ತರಿಸಿದರು.

ಈ ಸಂದರ್ಭದಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ಶ್ರೀನಿವಾಸ್ ರಾವ್, ಪಿಎಸ್‌ಐ ಮಂಜುನಾಥ ಸ್ವಾಮಿ, ಸಾಗರ್ ಸೇರಿದಂತೆ ಪೊಲೀಸ್ ಸಿಬ್ಬಂದಿಗಳು ಹಾಜರಿದ್ದರು.

## ಜಿಲ್ಲಾ ಕಸಾಪದಿಂದ ಇಂದು ನಗರದಲ್ಲಿ ವಿಶ್ವ ಮಾನವ ದಿನಾಚರಣೆ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ 'ಹೆಸರಾಯಿತು ಕರ್ನಾಟಕ - ಉಸಿರಾಗಲಿ ಕನ್ನಡ' ಕರ್ನಾಟಕ ಎಂದು ಹೆಸರಾಗಿ 50 ವರ್ಷ ತುಂಬಿರುವ ಹಿನ್ನೆಲೆಯಲ್ಲಿ 'ಕರ್ನಾಟಕ ಸಂಭ್ರಮ-50' ಹಾಗೂ 'ವಿಶ್ವ ಮಾನವ ದಿನಾಚರಣೆ' ಪ್ರಯುಕ್ತ 'ವಿಶೇಷ ಉಪನ್ಯಾಸ ಹಾಗೂ ಸಾಂಸ್ಕೃತಿಕ ಕಲರವ' ಮಾಲಿಕೆ-2 ಡಿಸೆಂಬರ್ 2023 ಹಾಗೂ 'ಅವಾಂತರ' - ಹಾಸ್ಯ ಪ್ರಸಂಗಗಳು ಕೃತಿ ಲೋಕಾರ್ಪಣೆ ಸಮಾರಂಭವು ಇಂದು ಸಂಜೆ 5-30 ಗಂಟೆಗೆ ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ.



ಅಧ್ಯಕ್ಷತೆಯನ್ನು ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ವಹಿಸುವರು. ಉದ್ಘಾಟನೆ : ಎನ್. ಪರಶುರಾಮನ ಗೌಡ. ಉಪನ್ಯಾಸ : ಡಾ. ಮಂಜಣ್ಣ. ವಿಷಯ : ಕುವೆಂಪುರವರ ಬದುಕು-ಬರಹ'.

ಮುಖ್ಯ ಅತಿಥಿಗಳು : ಡಾ. ಬಿ. ಹಾಲೇಶ್. ಉಪಸ್ಥಿತಿ : ಸಿದ್ದೇಶ್ ಬಿ.ಎಸ್., ಲೇಖಕರು : 'ಅವಾಂತರ'- ಹಾಸ್ಯ ಪ್ರಸಂಗಗಳನ್ನು ಒಳಗೊಂಡಿದೆ. ನಾಡಗೀತೆ ಮತ್ತು ಕುವೆಂಪು ವಿರಚಿತ ಗೀತಗಾಯನ ಕು. ಪೃಥ್ವಿ ಮತ್ತು ತಂಡ, ಆದಮ್ಯ ಕಲಾ ಸಂಸ್ಥೆ, ದಾವಣಗೆರೆ ಇವರಿಂದ ಸಾಂಸ್ಕೃತಿಕ ಕಲರವ : ದವನ್-ನೂತನ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಂದ ನಡೆಯಲಿದೆ.

**ಅವಾಂತರ ಕೃತಿ ಹಾಗೂ ಕೃತಿಕಾರರ ಪರಿಚಯ :** ಅವಾಂತರ 50 ಹಾಸ್ಯ ಪ್ರಸಂಗಗಳ ನ್ನೊಳಗೊಂಡ ಒಂದು ಪುಸ್ತಕ. ಈ ಕೃತಿ ಲೇಖಕರಾದ ಬಿ.ಎಸ್ ಸಿದ್ದೇಶ್‌ರವರು, ವಿಶ್ರಾಂತ ಆಂಗ್ಲ ಭಾಷಾ ಅಧ್ಯಾಪಕರಾಗಿದ್ದು ಬಸವನಕೋಟೆ ಗ್ರಾಮದವರು.





**ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಕಲರವ ಮಾಲಿಕೆ-2 ಹಾಗೂ 'ಅವಾಂತರ'-ಹಾಸ್ಯ ಪ್ರಸಂಗಗಳು ಕೃತಿ ಲೋಕಾರ್ಪಣೆ**

ಈ ಕೃತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿನ ದಿನ ನಿತ್ಯದ ತಮ್ಮ ಕೆಲಸಗಳ ನಡುವೆ ಬರುವ ಕೆಲವು ತಮಾಷೆ ಅಂಶಗಳನ್ನು ಜಾಣತನದಲ್ಲಿ, ಚಾಣಾಕ್ಷ ರೀತಿಯಲ್ಲಿ ಭೇದಿಸುತ್ತ, ಬದುಕಿನಲ್ಲಿ ಬರುವ ಕಷ್ಟ ದುಃಖಗಳನ್ನು ಮರೆಯಲು 'ವಿಶ್ವ' ಎಂಬ ಹೆಸರಿನ ಕಾಲ್ಪನಿಕ ಒಬ್ಬರನ್ನು ಸೃಷ್ಟಿಸಿ ತುಂಬಾ ನೂತನವಾದ ನಿಜ ಬದುಕಿನ ಚಿತ್ರಣಗಳನ್ನು ಹಾಸ್ಯಮಯ ಜಾಣತನ ಹಾಗೂ ತುಂಟತನದಿಂದ ತನ್ನ ಚಾಣಾಕ್ಷ ಬುದ್ಧಿವಂತಿಕೆ ಪ್ರದರ್ಶನ ನಿಜಕ್ಕೂ ಓದುಗರಲ್ಲಿ ಸಂತೋಷ ತರುತ್ತದೆ ಹಾಗೂ ಸಮಾಜ ಅಂಗೀಕರಿಸುತ್ತದೆ ಎಂದು ಈ ಕೃತಿಯಲ್ಲಿ ತಿಳಿಸುತ್ತದೆ.

## ತಾಲ್ಲೂಕು ಕಸಾಪದಿಂದ ಇಂದು ಸಾಹಿತ್ಯೋತ್ಸವ

ದಾವಣಗೆರೆ ತಾಲ್ಲೂಕು ಕ.ಸಾ.ಪ. ಮತ್ತು ಹಿರಿಯ ನಾಗರಿಕರ ಸಹಾಯವಾಣಿ ಇವರ ಸಹಯೋಗದಲ್ಲಿ ಇಂದು ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ ಆವರಣದಲ್ಲಿ ಇಂದು ಮಧ್ಯಾಹ್ನ 3 ಗಂಟೆಗೆ ನಡೆಯುವ ಕಾರ್ಯಕ್ರಮವನ್ನು ಶಾಲಾ ಮುಖ್ಯೋಪಾಧ್ಯಾಯ ಎಚ್. ನಿಂಗಪ್ಪ ಉದ್ಘಾಟಿಸುವರು. ಸುರೇಶ್ ನಾಯ್ಕ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ದಾಸ ಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳು ವಿಷಯವಾಗಿ ಅಜಯ್‌ನಾರಾಯಣ್ ಉಪನ್ಯಾಸ ನೀಡಲಿದ್ದಾರೆ. ಜಿಗಳಿ ಎನ್.ಎಲ್. ಪ್ರಕಾಶ್, ಕೆ.ಜಿ. ಸೌಭಾಗ್ಯ, ನವೀನ್‌ಕುಮಾರ್, ಷಡಕ್ಷರಪ್ಪ ಎಂ. ಬೇತೂರು ಉಪಸ್ಥಿತರಿರುವರು. ಸುಮತಿ ಜಯ್ಯಪ್ಪ ಪ್ರಾಸ್ತಾವಿಕ ನುಡಿಗಳನ್ನಾಡುವರು.

ಜಿ.ವಿ. ಚನ್ನಬಸಪ್ಪ (ಶ್ರೀಮತಿ ಭಾಗೀರಥಮ್ಮ ದಿ. ಜಿ. ಬಸಪ್ಪ ಸ್ಮರಣಾರ್ಥ ದತ್ತಿ), ಶ್ರೀಮತಿ ಪದ್ಮ ಟಿ. ಆರ್, ತೆಲಗಿ ರುದ್ರೇಶ್ (ಶ್ರೀಮತಿ ಶಾರದಮ್ಮ ತೆಲಗಿ ಬಸವರಾಜಪ್ಪ ದತ್ತಿ), ಶ್ರೀಮತಿ ಸುಧಾ ಡಿ. ಸುರೇಂದ್ರಪ್ಪ (ಕುಕ್ಕುವಾಡದ ಶ್ರೀಮತಿ ಗಂಗಮ್ಮ ದ್ಯಾಮೇನಹಳ್ಳಿ ನಾಗಪ್ಪ ದತ್ತಿ) ಇವರುಗಳು ದತ್ತಿ ದಾನಿಗಳಾಗಿದ್ದಾರೆ.

## ಹಳೆ ಬಸ್‌ನ್ನು ಸ್ಕ್ರ್ಯಾಪ್‌ಗೆ ಹಾಕಲು ಆದೇಶ

**(1ನೇ ಪುಟದಿಂದ)** ಮೀ.ಗೂ ಹೆಚ್ಚು ಕಾಲ ಓಡಿದ್ದ ಈ ಬಸ್‌ಗೆ ಇಗ್ನಿಷನ್ ಸ್ಟಾರ್ಟರ್, ಹಾರ್ನ್ ಹಾಗೂ ಬ್ರೇಕ್ ಇರಲಿಲ್ಲ. ಈ ಬಸ್ ಸ್ಟಾರ್ಟ್ ಮಾಡಲು ಪ್ರಯಾಣಿಕರು ಇಳಿದು ದೂಡಬೇಕಾಯಿತು. ಈ ರೀತಿಯ ಬಸ್ ಚಲಾಯಿಸುತ್ತಿದ್ದುದು ಆತಂಕ ಕಾರಿ ಎಂದೂ ಹೈಕೋರ್ಟ್ ಹೇಳಿದೆ.

ಕೆ.ಎಸ್.ಆರ್.ಟಿ.ಸಿ. ಉತ್ತಮ ಗುಣಮಟ್ಟದ ಬಸ್‌ಗಳನ್ನು ಓಡಿಸಬೇಕು. ಕೆ.ಎಸ್.ಆರ್.ಟಿ.ಸಿ. ನಿಯಮ ಗಳ ಪ್ರಕಾರ, ನಿರ್ದಿಷ್ಟ ಮಿತಿ ದಾಟಿದ ಬಸ್‌ಗಳನ್ನು ಸ್ಕ್ರ್ಯಾಪ್‌ಗೆ ಹಾಕಬೇಕು. ಇವುಗಳನ್ನು ನಗರಗಳಲ್ಲಾಗಲೀ, ಗ್ರಾಮಗಳಲ್ಲಾಗಲೀ ಸಂಚಾರಕ್ಕೆ ಬಿಡಬಾರದು ಎಂದು ಹೈಕೋರ್ಟ್ ಹೇಳಿದೆ.

ಕೆ.ಎಸ್.ಆರ್.ಟಿ.ಸಿ.ಯ ಯಾಂತ್ರಿಕ ವಿಭಾಗ ಸಂಚಾರಕ್ಕೆ ಸೂಕ್ತ ಎಂದು ಪ್ರಮಾಣ ಪತ್ರ ನೀಡಿದ ಬಸ್‌ಗಳನ್ನು ಮಾತ್ರ ಬಳಸಬೇಕು ಎಂದು ಹೈಕೋರ್ಟ್ ಹೇಳಿದೆ.

ಪ್ರತಿ ವರ್ಷ ಕೆ.ಎಸ್.ಆರ್.ಟಿ.ಸಿ. ಅಧಿಕಾರಿಗಳು ಆರ್.ಟಿ.ಓ.ದಿಂದ ಎಲ್ಲಾ ಬಸ್‌ಗಳಿಗೆ ಪ್ರಮಾಣ ಪತ್ರ ಪಡೆಯಬೇಕು. ನಿಯಮಿತವಾಗಿ ಬಸ್‌ಗಳ ರಿಪೇರಿ ಪರಿಶೀಲನೆ ಆಗ ಬೇಕು ಎಂದೂ ಹೈಕೋರ್ಟ್ ಹೇಳಿದೆ.

## ಬ್ಯಾಂಕುಗಳ ಎನ್.ಪಿ.ಎ. ಪ್ರಮಾಣ ಇಳಿಕೆ

**(1ನೇ ಪುಟದಿಂದ)** ಜಿ.ಎನ್.ಪಿ.ಎ. ಶೇ.4.6 ಹಾಗೂ ಆಸ್ತಿಗಳ ಮೇಲಿನ ಆದಾಯ ಶೇ.2.9ರಷ್ಟಿದೆ ಎಂದು ರಿಸರ್ವ್ ಬ್ಯಾಂಕ್ ವರದಿಯಲ್ಲಿ ತಿಳಿಸಲಾ ಗಿದೆ. ಬ್ಯಾಂಕುಗಳ ಜಿ.ಎನ್.ಪಿ.ಎ. ಸಹ ಹಲವು ವರ್ಷಗಳಲ್ಲೇ ಅತಿ ಕಡಿಮೆ ಶೇ.3.2 ರಷ್ಟಿದೆ ಎಂದೂ ವರದಿಯಲ್ಲಿ ಹೇಳಲಾಗಿದೆ.

## ಐ.ಎನ್.ಡಿ.ಐ.ಎ. ಗೆದ್ದರೆ 6 ಸಾವಿರ ರೂ., ಜಾತಿ ಗಣತಿ

**(1ನೇ ಪುಟದಿಂದ)** ಗುಲಾಮಗಿರಿಯ ಕಾಲಕ್ಕೆ ತೆಗೆದುಕೊಂಡು ಹೋಗುತ್ತಿವೆ. ಬಿಜೆಪಿ ರಾಜ ಮಹಾರಾಜರ ಸಿದ್ಧಾಂತ ಹೊಂದಿದೆ ಎಂದು ಆರೋಪಿಸಿದ್ದಾರೆ.

ಸಮಾವೇಶದಲ್ಲಿ ಮಾತನಾಡಿದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರತಿಪಕ್ಷಗಳ ಕೂಟ ಗೆಲುವು ಸಾಧಿಸಿದರೆ ಪ್ರತಿ ಕುಟುಂಬಕ್ಕೆ ತಿಂಗಳಿಗೆ 6 ಸಾವಿರ ರೂ.ಗಳನ್ನು ನೀಡುವ 'ನ್ಯಾಯ' ಯೋಜನೆ ಜಾರಿಗೆ ತರಲಾಗುವುದು ಎಂದು ಹೇಳಿದರು.

ನಾಗಪುರದಲ್ಲಿ ಎರಡು ಸಿದ್ಧಾಂತಗಳಿವೆ. ಒಂದು ಅಂಬೇಡ್ಕರ್ ಅವರ ಪ್ರಗತಿಪರ ಸಿದ್ಧಾಂತವಾದರೆ, ಇನ್ನೊಂದು ದೇಶವನ್ನು ನಾಶಗೊಳಿಸುವ ಆರ್.ಎಸ್.ಎಸ್. ಸಿದ್ಧಾಂತ ಎಂದೂ ಖರ್ಗೆ ಆರೋಪಿಸಿದರು. ನಾಗಪುರದಲ್ಲಿ ಆರ್.ಎಸ್.ಎಸ್. ಕೇಂದ್ರ ಕಚೇರಿ ಇದೆ. ಇಲ್ಲೇ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರ ದೀಕ್ಷಾಭೂಮಿಯೂ ಇದೆ. ಇದೇ ನೆಲದಲ್ಲಿ ಕಾಂಗ್ರೆಸ್ ತನ್ನ 2024ರ ಲೋಕಸಭಾ ಚುನಾವಣಾ ಸಮರದ ರಣಕಹಳೆ ಮೊಳಗಿಸಿದೆ.

ಪಕ್ಷದ ಹಿರಿಯ ನಾಯಕಿ ಸೋನಿಯಾ ಗಾಂಧಿ ಹಾಗೂ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ ಗಾಂಧಿ ವಾದ್ರಾ ಅವರು ಸಮಾವೇಶನದಲ್ಲಿ ಪಾಲ್ಗೊಂಡಿರಲಿಲ್ಲ.

ಬಿಜೆಪಿಯಲ್ಲಿ ಕಾರ್ಯಕರ್ತರು ಹಾಗೂ ನಾಯಕರನ್ನು ಗುಲಾಮರಂತೆ ಕಾಣಲಾಗುತ್ತಿದೆ. ಕೆಳ ಹಂತದ ಮುಖಂಡರ ಮಾತುಗಳನ್ನು ಆಲಿಸುತ್ತಿಲ್ಲ ಎಂದು ರಾಹುಲ್ ಗಾಂಧಿ ಇದೇ ಸಂದರ್ಭದಲ್ಲಿ ಆರೋಪಿಸಿದರು.

ಕಾಂಗ್ರೆಸ್ ಪಕ್ಷ ತನ್ನ ಕಾರ್ಯಕರ್ತರ ಬಗ್ಗೆ ಕಳಕಳಿ ಹೊಂದಿದೆ. ನಾನೂ ಸೇರಿದಂತೆ ಪಕ್ಷದ ಉನ್ನತರು ಕಾರ್ಯಕರ್ತರ ಮಾತುಗಳನ್ನು ಕೇಳುತ್ತೇವೆ ಎಂದೂ ಅವರು ಹೇಳಿದರು

ದೇಶಕ್ಕೆ ಸ್ವಾತಂತ್ರ್ಯ ದೊರೆಯುವ ಮುಂಚೆ ಮಹಿಳೆಯರಿಗೆ ಯಾವುದೇ ಹಕ್ಕಿರಲಿಲ್ಲ. ದಲಿತರನ್ನು ಅಸ್ಪೃಶ್ಯರನ್ನಾಗಿ ಕಾಣಲಾಗುತ್ತಿತ್ತು. ಇದು ಆರ್.ಎಸ್.ಎಸ್. ಸಿದ್ಧಾಂತವೂ ಆಗಿದೆ. ಕಾಂಗ್ರೆಸ್ ಇದನ್ನು ಬದಲಿಸುತ್ತಿದೆ. ಆದರೆ, ಆರ್.ಎಸ್.ಎಸ್. ಭಾರತವನ್ನು ಮತ್ತೆ ಸ್ವಾತಂತ್ರ್ಯ ಪೂರ್ವದ ದಿನಗಳಿಗೆ ತೆಗೆದುಕೊಂಡು ಹೋಗಲು ಬಯಸುತ್ತಿದೆ ಎಂದು ರಾಹುಲ್ ಗಾಂಧಿ ಆರೋಪಿಸಿದರು.

ಈ ಸಂದರ್ಭದಲ್ಲಿ ಮರಾಠಿಯಲ್ಲಿ ಮಾತನಾಡಿದ ಖರ್ಗೆ, ನಾಗಪುರವು ಕ್ರಾಂತಿಕಾರಿಗಳ ನೆಲೆಯಾಗಿದೆ. ಇಲ್ಲಿ ಅಂಬೇಡ್ಕರ್ ಹಾಗೂ ಮಹಾತ್ಮ ಗಾಂಧಿ ಅವರು ಒಂದೊಮ್ಮೆ ಕೆಲಸ ಮಾಡಿದ್ದರು ಎಂದರು.

ಬಿಜೆಪಿ ಹಾಗೂ ಆರ್.ಎಸ್.ಎಸ್. ಮತ್ತೆ ಅಧಿಕಾರಕ್ಕೆ ಬಂದರೆ ಪ್ರಜಾಪ್ರಭುತ್ವ ನಾಶವಾಗಲಿದೆ. ಪ್ರಧಾನಿ ಮೋದಿ ಸಾಮಾಜಿಕ ನ್ಯಾಯ ಹಾಗೂ ಸಮಾನತೆಗೆ ವಿರುದ್ಧವಾಗಿದ್ದಾರೆ ಎಂದು ಖರ್ಗೆ ಆರೋಪಿಸಿದರು.

## ಕಥೆಯನ್ನು ಸರಳವಾಗಿಸಬೇಕು



**(1ನೇ ಪುಟದಿಂದ)** ಕಥೆಗಾರ ಇಲ್ಲಿ ವಿವರಿಸಿದ್ದರಿಂದ ಶ್ರೇಷ್ಠ ಕಥೆಗೆ ಭಾರತೀಯ ಕಥಾ ಪುರಸ್ಕಾರ ಸಿಕ್ಕಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಾಚಾರ್ಯ ಶಿವನಗೌಡ ಕೆ. ಸುರಕೋಡ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪ್ರಾಚಾರ್ಯ ಪ್ರವೀಣ್ ಕುಮಾರ್ ಜಿ.ಸಿ, ಪ್ರಾಚಾರ್ಯ ನರೇಂದ್ರ ಪಾಟೀಲ್ ಮತ್ತು ಕಾಲೇಜಿನ ಉಪನ್ಯಾಸಕರು ಹಾಗೂ ಬಿ.ಎಲ್.ಆರ್ ಪದವಿ ಪೂರ್ವ ಕಾಲೇಜು, ಎಂ.ಬಿ.ಆರ್. ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಕೃಷ್ಣೇಗೌಡರ ಆನೆ ಕಥೆಯ ವಿಷಯವಾಗಿ ಸಂವಾದ ನಡೆಸಿದರು.

ಕನ್ನಡ ಉಪನ್ಯಾಸಕರಾದ ಇ.ದೇವರಾಜು, ನರೇಶ್ ಕುಮಾರ್, ಸುಜಾತ, ರಮ್ಯ ಇದ್ದರು. ನಯನ ಸಂಗಡಿಗರು ಪ್ರಾರ್ಥಿಸಿದರು. ಉಪನ್ಯಾಸಕಿ ಸುಜಾತ ಸ್ವಾಗತಿಸಿದರು, ಉಪನ್ಯಾಸಕಿ ರಮ್ಯ ನಿರೂಪಿಸಿದರು.

## ವಿದ್ಯಾರ್ಥಿಗಳಿಂದ ಶೌಚಾಲಯ ಸ್ವಚ್ಛತೆ, ಮುಖ್ಯೋಪಾಧ್ಯಾಯ ಸಸ್ಪೆಂಡ್

**(1ನೇ ಪುಟದಿಂದ)** ಶೌಚಾಲಯ ಸ್ವಚ್ಛಗೊಳಿಸಲು ತಿಳಿಸಲಾಗಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ.

ಅಧಿಕಾರಿಗಳು ಸ್ಥಳಕ್ಕೆ ತೆರಳಿ ಪರಿಶೀಲಿಸಿದ ನಂತರ ಶಾಲೆಯ ಮುಖ್ಯೋಪಾಧ್ಯಾಯ ಶಂಕರಪ್ಪ ಅವರನ್ನು ಅಮಾನತ್ತುಗೊಳಿಸಲಾಗಿದೆ

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಮಹಿಳೆಯರು, ಹುಡುಗರು, ಅಡುಗೆ ಭಟ್ಟರು ಬೇಕಾಗಿದ್ದಾರೆ. ಸಂಪರ್ಕಿಸಿ
63635 43487

**ಸಂಪರ್ಕಿಸಿ**
ಎಂ.ಸಿ.ಸಿ. 'ಎ' & 'ಬಿ' ಬ್ಲಾಕ್
A-22X60 ಮನೆ, 44X60 ಕಾರ್ನರ್ ಮನೆ, B-44X60 ಮನೆ, 35X60 ಸೈಟ್
ಕಿರಣ್ ಭೂಸ್ನೂರ್ (ಏಜೆಂಟ್)
97315-63409, 97315-63409
ಸೈಟ್ ಮನೆ ಜಮೀನು ಕೊಳ್ಳುವದಕ್ಕೆ, ಮಾರಾಟಕ್ಕೆ, ಬಾಡಿಗೆ, ಲೀಸ್‌ಗೆ ವಿಚಾರಿಸಿ.

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
ನಾರ್ಥ್ ಇಂಡಿಯನ್ ಶೈಲಿಯ ಅಡುಗೆ ಮಾಡಬಲ್ಲ ಶೆಫ್ ಬೇಕಾಗಿದ್ದಾರೆ. ಸಂಪರ್ಕಿಸಿ.
99863 16672

**ನಮ್ಮ ಗುಳಚಾ ಮತ್ತು ಕಿಕ್ಸ್ R ಚಾಯಿ**
(ಬೆಲ್ಲದ ಟೀ) ಶಾಪ್‌ಗೆ ಕೆಲಸಕ್ಕೆ ಯುವಕ ಮತ್ತು ಯುವತಿಯರು ಬೇಕಾಗಿದ್ದಾರೆ. ಬೆಳಿಗ್ಗೆ 9.30ರಿಂದ 6.30, ಸಂಬಳ : 7000
80503 58132

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
30x40, 30x40 East ಅಕ್ಕ-ಪಕ್ಕ, 40x60 North, 80 ಅಡಿ ರೋಡಿಗಿದೆ. 30x50 West 60 ಅಡಿ ರೋಡಿಗಿದೆ. 35 lakh A/C money ಬೇಕು.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮಳಿಗೆ ಬಾಡಿಗೆಗಿದೆ**
ನರಸರಾಜ ರಸ್ತೆ ಹಾಸಬಾವಿ ಸರ್ಕಲ್ ಹತ್ತಿರವಿರುವ ಆಲದಹಳ್ಳಿ ಕಾಂಪ್ಲೆಕ್ಸ್‌ನಲ್ಲಿ 13x16 1/2 (Gold Shop, Cloth Shop, Medical Shop, Kirani Shop) ಅಳತೆಯ ಮಳಿಗೆ ಬಾಡಿಗೆಗಿದೆ.
ಸಂಪರ್ಕಿಸಿರಿ
94801 75911

**COSDARM HAIR & SKIN CARE INSTITUTE**
ಉಚಿತ ಉಚಿತ ಉಚಿತ
ಸೌಂದರ್ಯ ಮತ್ತು ಕೂದಲು ರಕ್ಷಣೆ ತರಗತಿಗಳು ಪ್ರವೇಶ ತೆರೆಯಲಾಗಿದೆ.
ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
76192 57443
81975 72499 C/A

**65HP ವಿದ್ಯುತ್‌ಉಳ್ಳ ಇಂಡಸ್ಟ್ರೀ ಮಾರಾಟಕ್ಕಿದೆ**
ಗ್ರೌಂಡ್ ಫ್ಲೋರ್‌ನಲ್ಲಿ ಅಗಲ 65 ಉದ್ದ 75 ಅಡಿ ಇರುವ ಒಟ್ಟು ಅಳತೆ 4875, ಮೊದಲನೇ ಮಹಡಿ 75x75 ಒಟ್ಟು ಅಳತೆ 5625 ಒಟ್ಟು ಅಳತೆ =10500. ಗ್ರೌಂಡ್ ಫ್ಲೋರ್‌ನಲ್ಲಿ ಲಿಫ್ಟ್ ಇದ್ದು 3ನೇ ಫ್ಲೋರ್‌ವರೆಗೂ ಸರಕು ತೆಗೆದುಕೊಂಡು ಹೋಗಬಹುದು, ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
90364 66669

**FLAT FOR LEASE**
2 BHK, North facing
1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228


**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಪೆಂಟ್ ಹೌಸ್ ಮನೆ ಮಾರಾಟಕ್ಕಿದೆ**
ಡಬಲ್ ಬೆಡ್ ರೂಮ್ ಇರುವ 5 ಮನೆಗಳು ಬಾಡಿಗೆಗೆ ಕೊಟ್ಟಿದೆ, ಪೆಂಟ್ ಹೌಸ್‌ನಲ್ಲಿ 5 ಬೆಡ್ ರೂಮ್‌ಗಳಿವೆ, ಮಧ್ಯವರ್ತಿಗಳಗೆ ಅವಕಾಶವಿಲ್ಲ, ತೆಗೆದುಕೊಳ್ಳಲಿಚ್ಚಿಸುವವರು ಬಂದು ಮನೆ ನೋಡಬಹುದು. ಸಂಪರ್ಕಿಸಿ :
90364 66669

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ :
ಶಂಕರಲೀಲಾ ಫ್ಯೂಯಲ್ ಸ್ಟೇಷನ್
ಜೈನ್ ಟೆಂಪಲ್ ಬಳಿ, ಆವರಗೆರೆ-ದಾವಣಗೆರೆ.
ಮೊ. 90190-94446

**ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ**
ರಾಣೆಬೆನ್ನೂರಿನಲ್ಲಿ ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ. 30x20 ಅಡಿ ಹಲಗೇರಿ ರಸ್ತೆ. ಸಂಪರ್ಕಿಸಿ :
98445 34678

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2&3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಬೇಕಾಗಿದ್ದಾರೆ**
ಋತು ಸಲ್ಯೂಷನ್ಸ್
ದಾವಣಗೆರೆಗೆ Field Executive / ಆಫೀಸ್ Staff ಬೇಕಾಗಿದ್ದು, ಅಭ್ಯರ್ಥಿಗಳು ಬೇಸಿಕ್ ಕಂಪ್ಯೂಟರ್ ಜ್ಞಾನ ಹಾಗೂ ಬೈಕ್ ಹೊಂದಿರಬೇಕು.
Qualification : PUC / Degree
ಸಂದರ್ಶನ ಸಮಯ : ಬೆಳಿಗ್ಗೆ 10 ರಿಂದ ಮಧ್ಯಾಹ್ನ 2.30.
Salary & TA/DA As per company standard.
ಸಂಪರ್ಕಿಸಿ.
63669 76661

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ,**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**10 ಎಕರೆ ಜಮೀನು ಮಾರಾಟಕ್ಕಿದೆ**
NH-4, ರಸ್ತೆಗೆ, ಹರಿಹರ-ರಾಣೇಬೆನ್ನೂರು, (ಮಧ್ಯ) ಚಳಗೇರಿ ಟೋಲ್ ಹತ್ತಿರ
@ ಎಕರೆಗೆ ರೂ. 95 ಲಕ್ಷ
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
(Contact buyer only)
ಶರ್ಮಾ, 63608 66997

**'ಮಚ್ಚಿ' ಫಿಶ್ ಫ್ರೈ ಹೋಟೆಲ್**
ಸಮುದ್ರದ ತಾಜಾ ಮೀನುಗಳನ್ನು ಮಂಗಳೂರು ಶೈಲಿಯಲ್ಲಿ ತವಾ ಫ್ರೈ ಮಾಡಲಾಗುತ್ತದೆ. ಹಳೇ ಬೆತೂರು ರಸ್ತೆ, ಶ್ಯಾವಿಗೆ ಮೆಶಿನ್ ಹತ್ತಿರ, ದಾವಣಗೆರೆ.
63646 78760

**HOUSE FOR RENT**
1 BHK, Semi Furnished
1st floor, Rent Rs. 7000/-
Security Deposit : Rs. 70,000/-
1st Main Road, 4th Cross, Prashanth Nagar, Harihar.
79750 77328

**ಬೇಕಾಗಿದ್ದಾರೆ**
ಫ್ಲೆಕ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ
ಸುರೇಶ್ ಇಮೇಜಸ್
ಚನ್ನಗಿರಿ ವಿರೂಪಾಕ್ಷಪ್ಪ ಕಲ್ಯಾಣ ಮಂಟಪದ ಕೆಳಗೆ, ತಾಲ್ಲೂಕು ಆಫೀಸ್ ಹತ್ತಿರ, ದಾವಣಗೆರೆ.

**ಮಳಿಗೆ ಬಾಡಿಗೆಗೆ ಇದೆ**
ಅಶೋಕ ಟಾಕೀಸ್ ಮುಂಭಾಗದಲ್ಲಿ ಇರುವ 11x90 ಮೇಲುಗಡೆ 11x45 ವಿಚಾರಿಸಿ :
ಮೈತ್ರಿ ಹೋಟೆಲ್
99862 44140

**ಬೇಕಾಗಿದ್ದಾರೆ**
ಫೀಲ್ಡ್ ವರ್ಕ್ ಕೆಲಸಕ್ಕೆ ಮಹಿಳೆಯರು, ಪುರುಷರು ಬೇಕಾಗಿದ್ದಾರೆ.
ಸಂಬಳ 10,000/- ದಿಂದ 15,000/-
78923 28599

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**WANTED**
For marketing Office Work And Helpers.
Kalpataru Plywoods
S.Nijalingappa, Layout, Davanagere.
94483 41142

**WANTED**
Order Booking - PUC
Contact along with Bio Data.
AK TRADERS
BAPUJI HOSPITAL ROAD PJ EXTENSION

**ನೇರ ಪರೀಕ್ಷೆಗಳು**
SSLC , PUC , NTC :
ನರ್ಸರಿ ಟೀಚರ್ಸ್ ಟ್ರೇನಿಂಗ್
BA, B.COM, MA M.COM, MBA (ALL)
SGET (R)
ಮೋತಿ ಸ್ವೀಟ್ಸ್/ ಟ್ರೆಂಡ್ಸ್ ಪಕ್ಕ, ಪಿಬಿ ರಸ್ತೆ, ದಾವಣಗೆರೆ
86602 35013

**WANTED TEACHERS**
B.Sc or
B.Sc B.Ed - 2
Contact
63616 62669

# ವಿಕಲಚೇತನರ ಸಾಧನೆಗೆ ಅವಕಾಶ ನೀಡಬೇಕು



## ಹಿಮೋಫಿಲಿಯಾ ಸೊಸೈಟಿ ಅಧ್ಯಕ್ಷ ಡಾ. ಸುರೇಶ್ ಹನಗವಾಡಿ

ದಾವಣಗೆರೆ, ಡಿ. 28 - ವಿಕಲಚೇತನರಿಗೆ ಸಾಧನೆ ಮಾಡುವ ಛಲ ಹಾಗೂ ಸಾಮರ್ಥ್ಯ ಇದೆ. ಸರ್ಕಾರ ಹಾಗೂ ಸಮಾಜಗಳು ಸಾಧನೆಗೆ ಅಗತ್ಯ ಅವಕಾಶ ನೀಡಬೇಕು ಎಂದು ಕರ್ನಾಟಕ ಹಿಮೋಫಿಲಿಯಾ ಸೊಸೈಟಿ ಅಧ್ಯಕ್ಷ ಡಾ. ಸುರೇಶ್ ಹನಗವಾಡಿ ಹೇಳಿದರು.

ಕರ್ನಾಟಕ ರಾಜ್ಯ ವಿಕಲಚೇತನರ ಆರ್.ಪಿ.ಡಿ. ಟಾಸ್ಕ್ ಫೋರ್ಸ್ (ಬೆಂಗಳೂರು), ಲಯನ್ಸ್ ಕ್ಲಬ್ (ದಾವಣಗೆರೆ) ಹಾಗೂ ಮಾನಸ ಸಾಧನಾ ವಿಕಲಚೇತನರ ಸೇವಾ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ನಗರದ ಲಯನ್ಸ್ ಭವನದಲ್ಲಿ ಇಂದು ಆಯೋಜಿಸಲಾಗಿದ್ದ ವಿಶ್ವ ವಿಕಲಚೇತನರ ದಿನಾಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು. ಕಣ್ಣಿಗೆ ಕಾಣುವ ಹಾಗೂ ಕಣ್ಣಿಗೆ ಕಾಣದೇ ಇರುವ ಎರಡೂ ರೀತಿಯ ಅಂಗವೈಕಲ್ಯ ಇರುತ್ತದೆ. ಈ ವೈಕಲ್ಯಗಳ ನಡುವೆಯೂ ಸಾಧನೆಗೆ ಅವಕಾಶ ಇದೆ. ಹೀಗಾಗಿ ವಿಕಲಚೇತನರಿಗೆ ಈಗ ಬೇಕಾಗಿರುವುದು ಅವಕಾಶವೇ ಹೊರತು ಅನುಕಂಪವಲ್ಲ ಎಂದರು.

ಕುಸುಮರೋಗವೂ ಒಂದು ವಿಧದ ಅಂಗವೈಕಲ್ಯವಾಗಿದೆ. ನಾನು ಈ ವೈಕಲ್ಯವನ್ನು ಹೊಂದಿದ ಕಾರಣ ಹಲವು ಸಮಸ್ಯೆಗಳನ್ನು ಎದುರಿಸಬೇಕಾಯಿತು. ಆದರೂ, ಸಾಧನೆ ಮಾಡುವ ಛಲವೂ ದೊರೆಯಿತು ಎಂದವರು ತಮ್ಮ ಅನುಭವ ತಿಳಿಸಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ. ಫಕ್ರುದ್ದೀನ್, ಅಂಗವೈಕಲ್ಯದ ನಡುವೆಯೂ ಸಾಧನೆ ಮಾಡಿರುವವರನ್ನು ನಾನು ಹತ್ತಿರದಿಂದ ಕಂಡಿದ್ದೇನೆ. ಛಲದಿಂದ ಸಾಧನೆ ಮಾಡುವ ಗುಣ ಎಲ್ಲ ವಿಕಲಚೇತನರಲ್ಲೂ ಬರಬೇಕು ಎಂದರು.

ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 50 ಜನ ವಿಕಲಚೇತನ ಸಾಧಕರಿಗೆ ವಿಶೇಷ ಸಾಧನಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಲಯನ್ಸ್ ಕ್ಲಬ್ ಅಧ್ಯಕ್ಷ ನೀಲಿ ಉಮೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯ ಮೇಲೆ ಮುಖಂಡರಾದ ಕೆ. ಎಸ್. ಮಂಜುನಾಥ್, ಮಂಜುನಾಥ ಹೊಸಕೆರೆ, ಸುರೇಶ್ ಭಂಡಾರಿ, ವೀರಯ್ಯ ಸ್ವಾಮಿ, ಡಾ. ಪುಷ್ಪಲತ, ಕೆ.ಬಿ. ರೂಪಾ ನಾಯ್ಕ, ಡಾ. ಬಿ. ಕಿರಣ್ ನಾಯ್ಕ, ಸುಮನ, ಮೀನಾಕ್ಷಿ, ಎಂ. ವಿಜಯಲಕ್ಷ್ಮಿ ಮತ್ತಿತರರು ಉಪಸ್ಥಿತರಿದ್ದರು.

# ದಲಿತ ಸಂಘರ್ಷ ಸಮಿತಿಗಳು ಸಾಮಾಜಿಕ ಚಳವಳಿಗಳಿಂದ ವಿಮುಖ

## ಜಿಲ್ಲಾಮಟ್ಟದ ಜಾಗೃತಿ ಸಮಾವೇಶದಲ್ಲಿ ಶಾಸಕ ಕೆ.ಎಸ್. ಬಸವಂತಪ್ಪ ವ್ಯಾಕುಲತೆ



ದಾವಣಗೆರೆ, ಡಿ. 28- ಪ್ರಸ್ತುತ ದಲಿತ ಸಂಘರ್ಷ ಸಮಿತಿಗಳು ಸಾಮಾಜಿಕ ಚಳವಳಿಗಳಿಂದ ವಿಮುಖವಾಗುತ್ತಿದ್ದು, ಸಂಘಟನಾ ಚತುರರು ಯಾರಾದರೂ ನಾಯಕತ್ವ ವಹಿಸಿಕೊಂಡು, ಸಂಘಟನೆಗಳನ್ನು ಒಗ್ಗೂಡಿಸುವ ಕೆಲಸವನ್ನು ಮಾಡುವ ಅಗತ್ಯತೆ ಇದೆ ಎಂದು ಮಾಯಕೊಂಡ ಶಾಸಕ ಕೆ. ಎಸ್. ಬಸವಂತಪ್ಪ ಹೇಳಿದರು.

ನಗರದ ಮಹಾನಗರ ಪಾಲಿಕೆ ಆವರಣದಲ್ಲಿರುವ ಶ್ರೀಮತಿ ರಾಧಮ್ಮ ಚನ್ನಗಿರಿ ರಂಗಪ್ಪ ಸ್ಮಾರಕ ರಂಗಮಂದಿರದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಜಿಲ್ಲಾ ಸಮಿತಿ ವತಿಯಿಂದ ದಲಿತ, ಶೋಷಿತರ ಹಕ್ಕುಗಳಿಗೆ ಆಗ್ರಹಿಸಿ ಇಂದು ಹಮ್ಮಿಕೊಂಡಿದ್ದ ಜಿಲ್ಲಾಮಟ್ಟದ ಜಾಗೃತಿ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಒಗ್ಗಟ್ಟಿನಲ್ಲಿ ಬಲವಿದೆ ಎಂಬುದನ್ನು ಅರಿಯಬೇಕಾಗಿದೆ. ಒಗ್ಗಟ್ಟು ಇಲ್ಲದ ಯಾವುದೇ ಸಂಘಟನೆಗಳು ಬಲಗೊಳ್ಳಲು ಅಸಾಧ್ಯ. ಹಿಂದೆ ಪ್ರೊ. ಬಿ. ಕೃಷ್ಣಪ್ಪ ಅವರು ಒಂದು ಕರೆ ಕೊಟ್ಟರೆ ಸಾಕು ದಾವಣಗೆರೆಯೇ ಬಂದ್ ಆಗುತ್ತಿತ್ತು. ಅಂದು ರೈತ ಮತ್ತು ದಲಿತ ಸಂಘಟನೆಗಳ ಮುಖಂಡರುಗಳಿಗೆ ಅಂತ ಶಕ್ತಿ ಇತ್ತು ಎಂದು ಹಿಂದಿನ ದಲಿತ ಚಳವಳಿಗಳನ್ನು ಸ್ಮರಿಸಿಕೊಂಡರು.

ಅನೇಕ ಭಿನ್ನಾಭಿಪ್ರಾಯಗಳಿಂದ ದಲಿತ ಸಂಘಟನೆಗಳು ವಿಭಜನೆಗೊಂಡಿವೆ. ಅವುಗಳಿಗೆ ಶಕ್ತಿ ತುಂಬಲು ಸಮರ್ಥ ನಾಯಕತ್ವ ಬೇಕಾಗಿದೆ. ಈ ಹಿನ್ನೆಲೆಯಲ್ಲಿ ಮುಖಂಡರೆಲ್ಲರೂ ಒಗ್ಗೂಡಿ ಸಂಘಟನೆ ಬಲಿಷ್ಠಗೊಳಿಸಲು ಚಿಂತನ-ಮಂಥನ ಸಭೆ ನಡೆಸುವ ಮೂಲಕ ವಿಭಜನೆಗೊಂಡ ಸಂಘಟನೆಗಳನ್ನು ಒಂದೇ ವೇದಿಕೆಯಡಿ ತರುವ ಪ್ರಯತ್ನವನ್ನು ಮಾಡಬೇಕಾಗಿದೆ ಎಂದರು.

ನನ್ನ ಮತ ಕ್ಷೇತ್ರದಲ್ಲಿ ಉಳುಮೆ ಮಾಡಿ ಜೀವನ ಸಾಗಿಸುತ್ತಿರುವ ಜನರಿಗೆ ಹಕ್ಕುಪತ್ರ ಕೊಡಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದು, ಅನ್ನ, ಸೂರು, ಉಳುಮೆ ಮಾಡಲು ಜಮೀನು ಇದ್ದರೆ ಜೀವನ ನಿರ್ವಹಣೆ ಮಾಡಬಹುದು. ಅಗತ್ಯ ಸೌಲಭ್ಯಗಳನ್ನು ಕೊಡಿಸುವ ಕಡೆ ಹೆಚ್ಚು ಗಮನಹರಿಸುತ್ತಿದ್ದೇನೆ ಎಂದರು.

ಮಾಜಿ ಸಚಿವ ಹೆಚ್. ಆಂಜನೇಯ ಮಾತನಾಡಿ, ಬಂಡವಾಳಶಾಹಿ ಪರ ಇರುವ ಕೇಂದ್ರದ ಬಿಜೆಪಿ ಸರ್ಕಾರ ಬೆಲೆ ನಿಯಂತ್ರಿಸುವಲ್ಲಿ ವಿಫಲವಾಗಿದೆ. ಭೂ ಸುಧಾರಣೆ ಕಾಯ್ದೆಗಳನ್ನು ಸಡಿಲಗೊಳಿಸಿರುವು ದರಿಂದ ಕಾಳಸಂತೆಕೋರರು ಭೂಮಿ ಮೇಲೆ ಬಂಡವಾಳ ಹೂಡಿಕೆ ಮಾಡಿ ಅಧಿಕ ಲಾಭ ಗಳಿಸುವಲ್ಲಿ ಮುಂದಾಗಿದ್ದಾರೆ. ಇದರಿಂದ ಬೆಲೆ ಏರಿಕೆಯಾಗಿ ಶೋಷಿತ ವರ್ಗಕ್ಕೆ ತುಂಬಾ ತೊಂದರೆಯಾಗುತ್ತಿದೆ ಎಂದು ತಿಳಿಸಿದರು.

ಕಾಂಗ್ರೆಸ್ ಯುವ ಮುಖಂಡ ಜಿ.ಬಿ. ವಿನಯ್ ಕುಮಾರ್ ಕಕ್ಕರಗೊಳ್ಳ ಮಾತನಾಡಿ, ಶಿಕ್ಷಣದಲ್ಲಿ ಬದಲಾವಣೆ ಬರದಿದ್ದರೆ ನಾವು ಎಷ್ಟೇ ಹೋರಾಟ ಮಾಡಿದರೂ ವ್ಯರ್ಥ. ನಗರ ಪ್ರದೇಶದ ಮಕ್ಕಳಿಗೆ ಹೋಲಿಸಿ ನೋಡಿದರೆ, ಗ್ರಾಮೀಣ ಮಕ್ಕಳು ಸಾಮಾನ್ಯ ಜ್ಞಾನ, ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಅಲ್ಪ ಹಿಂದೆ ಇದ್ದಾರೆ ಎಂದು ಹೇಳಿದರು.

ಯಾವ ಹಕ್ಕುಗಳಿಗಾಗಿ ಹೋರಾಟ ಮಾಡುತ್ತಿದ್ದೇವೆ ಎಂಬುದರ ಬಗ್ಗೆ ಎಲ್ಲರಿಗೂ ಅರಿವಿರಬೇಕು. ಅದು ನಮ್ಮ ವ್ಯಕ್ತಿತ್ವದಲ್ಲಿ ಬೆಸೆದುಕೊಳ್ಳಬೇಕು. ಹಾಗೆ ಆಗಲು ಸಾಮಾನ್ಯ ಶಿಕ್ಷಣ ಸಿಗಬೇಕಾಗಿದೆ ಎಂದರು.

ಶಿಕ್ಷಣದ ಮೂಲಕ ಮಕ್ಕಳಲ್ಲಿ ಹುದುಗಿರುವ ಪ್ರತಿಭೆ ಮತ್ತು ಸಾಮರ್ಥ್ಯವನ್ನು ಗುರುತಿಸಬೇಕು. ಈ ನಿಟ್ಟಿನಲ್ಲಿ ರಾಜಕಾರಣಕ್ಕೆ ಬರುವವರು ಶಿಕ್ಷಣಕ್ಕೆ ಆದ್ಯತೆ ನೀಡಬೇಕಾಗಿದೆ ಎಂದು ಆಶಿಸಿದರು.

ಮಾನವ ಬಂಧುತ್ವ ವೇದಿಕೆ ರಾಜ್ಯ ಸಂಚಾಲಕ ಡಾ. ಎ.ಬಿ. ರಾಮಚಂದ್ರಪ್ಪ ಮಾತನಾಡಿ, ಸ್ವಾತಂತ್ರ್ಯ ಬಂದು 70 ವರ್ಷಗಳು ಗತಿಸಿದರೂ, ತುಂಡು ಭೂಮಿಗಾಗಿ, ಸಣ್ಣ ಸೂರಿಗಾಗಿ ಹೋರಾಟ ಮಾಡಬೇಕಾದ ದಯನೀಯ ಸ್ಥಿತಿ ಬಂದಿದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಶೋಷಿತರ ಪರ ಕೆಲಸ ಮಾಡಲು ಸರ್ಕಾರಗಳು ಮುಂದಾಗಬೇಕು. ಆದರೆ ಉಳ್ಳವರ ಪರ ಸರ್ಕಾರಗಳು ಕೆಲಸ ಮಾಡುತ್ತಿರುವುದು ದುರಂತವೇ ಸರಿ ಎಂದು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಅಧ್ಯಕ್ಷತೆ ವಹಿಸಿದ್ದರು. ಕಾಂಗ್ರೆಸ್ ಮುಖಂಡ ಚಂದ್ರಪ್ಪ ಮಾತನಾಡಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ ಬೆಂಗಳೂರು ವಿಭಾಗೀಯ ಸಂಚಾಲಕ ಬಿ. ಎನ್. ಜೀವೇಶಿ, ಉಪ ಪ್ರಧಾನ ಸಂಚಾಲಕ ಮಣಿಪಾಲ್ ರಾಜಪ್ಪ, ಕಟ್ಟಡ ಕಟ್ಟುವ, ಕಲ್ಲು ಕ್ವಾರಿ ಒಡೆಯುವ ಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ ಹೆಚ್.ಜಿ. ಉಮೇಶ್ ಆವರಗೆರೆ, ಹಿರಿಯ ವಕೀಲ ಅನೀಸ್ ಪಾಷ, ಪಾಲಿಕೆ ಮಾಜಿ ಮಹಾಪೌರ ಎಸ್.ಟಿ. ವೀರೇಶ್ ಮತ್ತಿತರರು ಉಪಸ್ಥಿತರಿದ್ದರು.

# ಮಲೇಬೆನ್ನೂರು : ಬೀರಲಿಂಗೇಶ್ವರ ಕ್ರೆಡಿಟ್ ಸೊಸೈಟಿ ಅಧ್ಯಕ್ಷರಾಗಿ ಟಿ. ಗೋವಿಂದಪ್ಪ

## ಉಪಾಧ್ಯಕ್ಷರಾಗಿ ಭಾನುವಳ್ಳಿಯ ಹೆಚ್.ಎಸ್. ಕರಿಯಪ್ಪ



ಮಲೇಬೆನ್ನೂರು, ಡಿ.28- ಇಲ್ಲಿನ ಶ್ರೀ ಬೀರಲಿಂಗೇಶ್ವರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ನೂತನ ಅಧ್ಯಕ್ಷರಾಗಿ ಭಾನುವಳ್ಳಿಯ ಟಿ. ಗೋವಿಂದಪ್ಪ ಮತ್ತು ಉಪಾಧ್ಯಕ್ಷರಾಗಿ ಭಾನುವಳ್ಳಿಯ ಹೆಚ್.ಎಸ್. ಕರಿಯಪ್ಪ ಅವರು ಗುರುವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಹಕಾರ ಅಭಿವೃದ್ಧಿ ಅಧಿಕಾರಿ ಶ್ರೀಮತಿ ಸುನಿತಾ ಅವರು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು.

ಸೊಸೈಟಿ ನಿರ್ದೇಶಕರಾದ ಸಂಸ್ಥಾಪಕ ಮಾಜಿ ಅಧ್ಯಕ್ಷ ಪಿ.ಎಸ್. ಹನುಮಂತಪ್ಪ, ಮಾಜಿ ಉಪಾಧ್ಯಕ್ಷ ಪಿ. ಹಾಲಪ್ಪ, ಕೊಕ್ಕನೂರಿನ ಮಹಾದೇವಪ್ಪ, ಬಿ.ಹೆಚ್. ನಾಗೇಂದ್ರಪ್ಪ, ಪಿ.ಎಸ್. ನಿಜಲಿಂಗಪ್ಪ, ಭೋವಿ ಹನುಮಂತಪ್ಪ, ತಳವಾರ ಚಂದ್ರಪ್ಪ, ಶ್ರೀಮತಿ ಸುಧಾ ಪಿ.ಆರ್. ರಾಜು, ಶ್ರೀಮತಿ ಕಮಲಮ್ಮ ಧರ್ಮಪ್ಪ, ಭಾನುವಳ್ಳಿಯ ಹಣಚಿಕ್ಕಿ ಚಂದ್ರಪ್ಪ, ಶ್ರೀಮತಿ ಗಿರಿಜಮ್ಮ ಸಂಕೊಳ್ಳಿ ಶಿವನಗೌಡ, ಕಾರ್ಯದರ್ಶಿ ಎಂ. ಕರಿಯಪ್ಪ ಈ ವೇಳೆ ಹಾಜರಿದ್ದರು.

# ನಗರದಲ್ಲಿ ಇಂದು 'ಚೇತನ ಸೌರಭ'

ಚೇತನ ವಿದ್ಯಾಸಂಸ್ಥೆಯ ವಿದ್ಯಾಚೇತನ ಪಿಯು ಕಾಲೇಜಿನ ವಾರ್ಷಿಕೋತ್ಸವ 'ಚೇತನ ಸೌರಭ' ಕಾರ್ಯಕ್ರಮವು ಶ್ರೀಮತಿ ಸುಧಾ ವೀರೇಂದ್ರ ಪಾಟೀಲ್ ಸಮುದಾಯ ಭವನದಲ್ಲಿ ಇಂದು ಬೆಳಿಗ್ಗೆ 9 ಗಂಟೆಯಿಂದ ನಡೆಯಲಿದೆ.

ಕಾಲೇಜಿನ ಅಧ್ಯಕ್ಷರಾದ ಶ್ರೀಮತಿ ವಿಜಯಲಕ್ಷ್ಮಿ ವೀರಮಾಚನೇನಿ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಎಸ್. ಜಿ. ಕರಿಸಿದ್ದಪ್ಪ, ಪಿ. ಶಶಿಕಲಾ, ಎ.ಕೆ. ರುದ್ರೇಶ್, ವಿ. ರಾಘವೇಂದ್ರ ಪ್ರಸಾದ್, ವಿ.ವಿ. ಕಿರಣ್, ಲೇಖ ಕಿರಣ್ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿರುವರು.

**ವಿಶ್ವಚೇತನ ವಿದ್ಯಾನಿಕೇತನ ಕಾಲೇಜು :** ವಿಶ್ವಚೇತನ ವಿದ್ಯಾನಿಕೇತನ ಕಾಲೇಜಿನ ವಾರ್ಷಿಕೋತ್ಸವ ಚೇತನ ಸೌರಭ ಕಾರ್ಯಕ್ರಮವು ಶ್ರೀಮತಿ ಸುಧಾ ವೀರೇಂದ್ರ ಪಾಟೀಲ್ ಸಮುದಾಯ ಭವನದಲ್ಲಿ ಇಂದು ಸಂಜೆ 4 ಗಂಟೆಯಿಂದ ನಡೆಯಲಿದೆ.

ಶ್ರೀ ಬಸವಪ್ರಭು ಶ್ರೀಗಳು ದಿವ್ಯ ಸಾನ್ನಿಧ್ಯ ವಹಿಸಲಿದ್ದು, ಕಾಲೇಜಿನ ಅಧ್ಯಕ್ಷರಾದ ಶ್ರೀಮತಿ ವಿಜಯಲಕ್ಷ್ಮಿ ವೀರಮಾಚನೇನಿ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಬಿ.ಎಸ್. ಬಸವರಾಜ್, ಆದರ್ಶ ಗೋಖಲೆ, ವಿ.ವಿ. ಕಿರಣ್, ಲೇಖ ಕಿರಣ್ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿರುವರು.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ನಿಜಲಿಂಗಪ್ಪ ಬಡಾವಣೆ, ರಿಂಗ್ ರಸ್ತೆ, ಕುಂದುವಾಡ ರಸ್ತೆ, ಯಲ್ಲಮ್ಮ ನಗರ 4ನೇ ಮೇನ್, 3ನೇ ಮೇನ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಇಂದು ವಿದ್ಯುತ್ ಸರಬರಾಜು ವ್ಯತ್ಯಯವಾಗಲಿದೆ.

# ನಗರದಲ್ಲಿ ಇಂದು ಕಸಾಪದಿಂದ ಸಾಹಿತ್ಯೋತ್ಸವ : ಇಂದು ದತ್ತಿ ಉಪನ್ಯಾಸ

ದಾವಣಗೆರೆ ತಾಲ್ಲೂಕು ಕ.ಸಾ.ಪ. ಮತ್ತು ಹಿರಿಯ ನಾಗರಿಕರ ಸಹಾಯವಾಣಿ ಇವರ ಸಹಯೋಗದಲ್ಲಿ ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ಇಂದು ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಗುರುಬಸಮ್ಮ ವಿ. ಚಿಗಟೇರಿ ಆಂಗ್ಲಮಾಧ್ಯಮ ಪ್ರೌಢಶಾಲೆ ಆವರಣದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ನಡೆಯುವ ಕಾರ್ಯಕ್ರಮವನ್ನು ಸುರೇಶ್ ನಾಯ್ಕ ಉದ್ಘಾಟಿಸುವರು. ಎಚ್. ನಿಂಗಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಕನ್ನಡ ಸಾಹಿತ್ಯಕ್ಕೆ ವಚನ ಸಾಹಿತ್ಯದ ಕೊಡುಗೆ ವಿಷಯವಾಗಿ ಆರ್. ಶಿವಕುಮಾರ್ ಉಪನ್ಯಾಸ ನೀಡಲಿದ್ದಾರೆ. ಜಿಗಳಿ ಎನ್.ಎಲ್. ಪ್ರಕಾಶ್, ಕೆ.ಜಿ. ಸೌಭಾಗ್ಯ, ನವೀನ್‌ಕುಮಾರ್, ಷಡಕ್ಷರಪ್ಪ ಎಂ. ಬೇತೂರು ಉಪಸ್ಥಿತರಿರುವರು. ಸುಮತಿ ಜಯ್ಯಪ್ಪ ಪ್ರಾಸ್ತಾವಿಕ ನುಡಿಗಳನ್ನಾಡುವರು. ವೀರಣ್ಣ ವಿ. ಚಿಗಟೇರಿ, ಎಂ.ಕೆ. ಬಕ್ಕಪ್ಪ (ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ ದತ್ತಿ), ಬಿ.ಕೆ. ತಿಪ್ಪೇಸ್ವಾಮಿ (ರಂಗೇನಹಳ್ಳಿ ಶ್ರೀಮತಿ ಹನುಮಮ್ಮ ಮಾಕುಂಟೆ ದ್ಯಾಮಪ್ಪ ದತ್ತಿ), ಶ್ರೀಮತಿ ಶಿಲ್ಪಶ್ರೀ ಎಸ್.ಹೆಚ್. ಪ್ರಶಾಂತ್ (ತೂಲಹಳ್ಳಿ ಶ್ರೀಮತಿ ಟಿ. ಎಂ. ಶಕುಂತಲ ಸಂಗಮೇಶ್ವರದ ಹೇಮಣ್ಣ ದತ್ತಿ) ದತ್ತಿ ದಾನಿಗಳಾಗಿದ್ದಾರೆ.

# ನಗರದಲ್ಲಿ ಇಂದು ವಿನೂತನ ಮಹಿಳಾ ಸಮಾಜದ ವಾರ್ಷಿಕೋತ್ಸವ

ವಿದ್ಯಾನಗರ ವಿನಾಯಕ ಬಡಾವಣೆಯ ವಿನೂತನ ಮಹಿಳಾ ಸಮಾಜದ 18ನೇ ವಾರ್ಷಿಕೋತ್ಸವವು ವಿನಾಯಕ ಬಡಾವಣೆ ವಿನಾಯಕ ದೇವಸ್ಥಾನದ ಆವರಣದಲ್ಲಿ ಇಂದು ಸಂಜೆ 4 ಗಂಟೆಗೆ ನಡೆಯಲಿದೆ.

ವಿನೂತನ ಮಹಿಳಾ ಸಮಾಜದ ಅಧ್ಯಕ್ಷರಾದ ಶ್ರೀಮತಿ ಚಂದ್ರಿಕಾ ಮಂಜುನಾಥ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಉಪನ್ಯಾಸಕರಾದ ಶ್ರೀಮತಿ ಉಷಾ ಬಸವರಾಜ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪಲತಾ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದು, ಮಕ್ಕಳ ಬೆಳವಣಿಗೆಯಲ್ಲಿ ಮಹಿಳೆಯ ಪಾತ್ರ ವಿಷಯ ಕುರಿತು ಮಾತನಾಡಲಿದ್ದಾರೆ. ಅತಿಥಿಗಳಾಗಿ ಮಹಾನಗರ ಪಾಲಿಕೆ ಸದಸ್ಯರಾದ ವೀಣಾ ನಂಜಪ್ಪ, ಬೆಳವನೂರು ನಾಗರಾಜಪ್ಪ, ಯು. ಸದಾಶಿವಪ್ಪ ಉಪಸ್ಥಿತರಿರುವರು.

# 50 ಗುಪ್ತಚರ ಉಪಗ್ರಹಗಳ ಉಡಾವಣೆ ಯೋಜನೆ

ಮುಂಬೈ, ಡಿ. 28 – ಗುಪ್ತಚರ ಮಾಹಿತಿ ಸಂಗ್ರಹಕ್ಕಾಗಿ ಮುಂದಿನ ಐದು ವರ್ಷಗಳಲ್ಲಿ 50 ಉಪಗ್ರಹಗಳನ್ನು ಉಡಾವಣೆ ಮಾಡಲು ಭಾರತ ಯೋಜಿಸಿದೆ. ಇದು ಸೈನಿಕ ಪಡೆಗಳ ಚಲನವಲನದ ಮೇಲೆ ನಿಗಾ ವಹಿಸಲು ನೆರವಾಗಲಿದೆ ಎಂದು ಇಸ್ರೋ ಅಧ್ಯಕ್ಷ ಎಸ್. ಸೋಮನಾಥ್ ತಿಳಿಸಿದ್ದಾರೆ.

ಐ.ಐ.ಟಿ. ಬಾಂಬೆನಲ್ಲಿ ಆಯೋಜಿಸಲಾಗಿದ್ದ ವಿಜ್ಞಾನ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಉಪಗ್ರಹಗಳು ದೇಶದ ಗಡಿಗಳ ಮೇಲೆ ಹಾಗೂ ನೆರೆಯ ಪ್ರದೇಶಗಳ ಮೇಲೆ ನಿಗಾ ವಹಿಸುವ ಸಾಮರ್ಥ್ಯ ಹೊಂದಿವೆ ಎಂದರು.

ಇದರಿಂದ ಸಾಕಷ್ಟು ಸಾಮರ್ಥ್ಯ ಲಭ್ಯವಾಗಲಿದೆ. ಮುಂದಿನ ಐದು ವರ್ಷಗಳಲ್ಲಿ 50 ಉಪಗ್ರಹಗಳ ಉಡಾವಣೆಗೆ ನಾವು ಯೋಜಿಸಿದ್ದೇವೆ ಎಂದವರು ತಿಳಿಸಿದ್ದಾರೆ.

# ಆಸ್ಪತ್ರೆ, ಬಾಲಕಿಯರ ವಸತಿ ನಿಲಯಗಳಿಗೆ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಭೇಟಿ




ಹರಪನಹಳ್ಳಿ, ಡಿ.28- ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಹಾಗೂ ವಿವಿಧ ಬಾಲಕಿಯರ ವಸತಿ ನಿಲಯಗಳಿಗೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ ನೇತೃತ್ವದ ತಂಡ ಗುರುವಾರ ಭೇಟಿ ನೀಡಿ, ಪರಿಶೀಲಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಕೋಸಂಬೆ ಅವರು ಸ್ಥಳೀಯ ಕ್ಷೇತ್ರ ಸಮನ್ವಯಾಧಿಕಾರಿ ಕಚೇರಿ ಎದುರು ಇರುವ ಆರ್‌ಎಂಎಸ್ಎ-4 ಬಾಲಕಿಯರ ವಸತಿ ಶಾಲೆಯಲ್ಲಿ ಮೆನು ಪ್ರಕಾರ ಊಟ, ಉಪಹಾರ ಕೊಡುತ್ತಿಲ್ಲ. ಹೆಚ್ಚಿನ ಮಟ್ಟದಲ್ಲಿ ಉಪ್ಪಿಟ್ಟನ್ನು ಕೊಡುತ್ತಾರೆ ಎಂದು ದೂರಿದ ಅವರು, ಒಟ್ಟಿನಲ್ಲಿ ಮಕ್ಕಳಿಗೆ ಹೊಟ್ಟೆ ತುಂಬಾ ಊಟ ಕೊಡುತ್ತಿಲ್ಲ ಎಂದು ಮೇಲ್ವಿಚಾರಕಿಯ ಮೇಲೆ ಗರಂ ಆದರು. ಅಲ್ಲದೇ ನಿಲಯದಲ್ಲಿ ಬಿಸಿ ನೀರು ಇಲ್ಲದಿದ್ದರೂ ಬಿಸಿ ನೀರು ಇದೆ ಎಂದು ಆಯೋಗಕ್ಕೆ ತಪ್ಪು ಮಾಹಿತಿ ನೀಡಿದ್ದಾರೆ ಎಂದು ತಿಳಿಸಿದರು.

ಕೆಕೆಜಿಬಿವಿ ಬಾಲಕಿಯರ ವಸತಿ ನಿಲಯದಲ್ಲಿ ವಿದ್ಯಾರ್ಥಿಗಳು ತಮ್ಮ ಸಮಸ್ಯೆಗಳನ್ನು ತೋಡಿಕೊಳ್ಳಲು ದೂರು ಪೆಟ್ಟಿಗೆ ಇಲ್ಲದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಬಳಿಕ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿದ ಆಯೋಗದ ಸದಸ್ಯರು, ವಿವಿಧ ವಾರ್ಡ್‌ಗಳಿಗೆ ಭೇಟಿ ನೀಡಿ ಶುಚಿತ್ವ, ಬೆಡ್, ದಾಸ್ತಾನು ಪರಿಶೀಲಿಸಿದರು. ತಾಲ್ಲೂಕಿನಲ್ಲಿ 696 ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದು, ಇಂತಹ ಮಕ್ಕಳನ್ನು ದಾಖಲಿಸಿಕೊಳ್ಳದಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ, ಆಸ್ಪತ್ರೆಯಲ್ಲಿನ ಅಪೌಷ್ಟಿಕತೆ ಪುನಶ್ಚೇತನ ಕೇಂದ್ರಕ್ಕೆ ದಾಖಲಿಸಿ ಚಿಕಿತ್ಸೆ ನೀಡಿ, ಅಪೌಷ್ಟಿಕತೆ ಮಕ್ಕಳ ಸಂಖ್ಯೆಯನ್ನು ಕಡಿಮೆ ಮಾಡಲು ವೈದ್ಯರಿಗೆ ಸೂಚಿಸಿದರು.

ನಂತರ ಅನಂತನಹಳ್ಳಿ ಬಳಿ ಇರುವ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಗೆ ಭೇಟಿ ನೀಡಿ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸುಭದ್ರದೇವಿ, ಹೊಸಪೇಟೆ ಸಿಡಿಪಿಒ ಸಿಂಧು, ಹರಪನಹಳ್ಳಿ ಸಿಡಿಪಿಒ ಹರೀಶ್, ಬಿಇಒ ಬಸವರಾಜಪ್ಪ, ವೈದ್ಯಾಧಿಕಾರಿ ಡಾ. ಶಂಕರನಾಯ್ಕ್, ಮಕ್ಕಳ ತಜ್ಞ ದತ್ತಾತ್ರೇಯ ಪಿಸೆ, ಶಿಕ್ಷಣ ಸಂಯೋಜಕ ಗಿರಜ್ಜಿ ಮಂಜುನಾಥ್, ಬಿಆರ್‌ಪಿ ಚನ್ನಪ್ಪ ಕಂಬಳಿ ಸೇರಿದಂತೆ ಇತರರು ಇದ್ದರು.

# ಇಂದು ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದ ಕಲಾಯಾನ ರಂಗಾಸಕ್ತಿಯ ಅನಾವರಣ

ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದ ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ 'ಕಲಾಯನ 2023-24' ರಂಗಾಸಕ್ತಿಯ ಅನಾವರಣ ಕಾರ್ಯಕ್ರಮ ಇಂದು ಸಂಜೆ 5 ಗಂಟೆಗೆ ಶಾಲಾ ಆವರಣದಲ್ಲಿ ನಡೆಯಲಿದೆ.

ಮುಖ್ಯ ಅತಿಥಿಗಳಾಗಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ಟಿ.ಎಂ. ಭಾಸ್ಕರ್, ರೇಡಿಯಾಲಜಿಸ್ಟ್ ಪ್ರೊ. ಡಾ. ಎಸ್. ಕಿರಣ್‌ಕುಮಾರ್ ಹೆಗ್ಡೆ ಆಗಮಿಸುವರು. ವಿನಾಯಕ ರಾನಡೆ ಪ್ರಾಸ್ತಾವಿಕ ನುಡಿಗಳನ್ನಾಡುವರು.

# ಕುಂದುವಾಡದಲ್ಲಿ ಇಂದು ಕಾರ್ತಿಕೋತ್ಸವ

ಶ್ರೀ ಬನ್ನಿಮಹಾಂಕಾಳಿ, ಶ್ರೀ ಗಡಿ ಚೌಡೇಶ್ವರಿ, ಶ್ರೀ ಆಂಜನೇಯ ಸ್ವಾಮಿಯ ಹಾಗೂ ಎಲ್ಲಾ ದೇವರುಗಳ ಕಾರ್ತಿಕ ಉತ್ಸವವನ್ನು ಇಂದು ಸಂಜೆ 6.30 ಕ್ಕೆ ನಡೆಯಲಿದೆ.

DEC 31 7:30PM
SOUTHERN STAR DAVANGERE
Happy New Year
AURA PRESENTS
UNLOCK 2024
BIGGEST NEW YEAR EVENT IN DAVANGERE
UNLOCK THE DOORS TO EXCITEMENT! TICKETS ON SALE AT
• SALAGAR AMRUT CHAI Mama's Joint Road MCC B Block, Davangere
• SOUTHERN STAR Beside SS Mall, Shamanur road, DAVANGERE
• RAGHAVENDRA PHOTO EMPORIUM (NIKON CAMERA SHOWROOM) Murugarajendra complex, hadadi road, Davangere
FOR RESERVATIONS & ENQUIRIES: 8746912345 / 9986250257
VENUE : SOUTHERN STAR, BESIDE SS MALL, SHAMANUR ROAD, DAVANGERE

# ಚಿತ್ತ ಬುದ್ಧಿ ಮನಸ್ಸುಗಳ ಏಕಾಗ್ರತೆಯಿಂದ ಭಗವದಾನಂದ ಪ್ರಾಪ್ತಿ

## ಶ್ರೀ ದತ್ತ ಜಯಂತಿ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಹೆಚ್.ಬಿ.ಮಂಜುನಾಥ





ದಾವಣಗೆರೆ, ಡಿ.28- ಚಂಚಲಶೀಲ ಮನಸ್ಸನ್ನು ಬುದ್ಧಿಯಿಂದ ನಿಗ್ರಹಿಸುತ್ತಾ ಚಿತ್ತೈಕಾಗ್ರತೆಯಿಂದ ಅದನ್ನು ಆತ್ಮಾನುಭವದ ಕಡೆಗೆ ಹರಿಸಿದಾಗ ಭಗವದಾನಂದ ಪ್ರಾಪ್ತಿಯಾಗುತ್ತದೆ ಎಂದು ಹಿರಿಯ ಪತ್ರಕರ್ತ ಹೆಚ್.ಬಿ. ಮಂಜುನಾಥ ಅಭಿಪ್ರಾಯಪಟ್ಟರು.

ನಗರದ ಜಯದೇವ ವೃತ್ತದ ಶ್ರೀ ದತ್ತಾತ್ರೇಯ ಶಿವಾನಂದ ತೀರ್ಥ ಗುರು ಆಧ್ಯಾತ್ಮ ಮಂದಿರದಲ್ಲಿ ದತ್ತ ಜಯಂತಿ ಅಂಗವಾಗಿ ಮೊನ್ನೆ ಏರ್ಪಾಡಾಗಿದ್ದ ಪೂಜಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬ್ರಹ್ಮ, ವಿಷ್ಣು, ಪರಮೇಶ್ವರರ ಸಂಯುಕ್ತ ರೂಪವಾದ ದತ್ತಾತ್ರೇಯರ ಸಂಕೇತವೆಂದರೆ ಜ್ಞಾನಾರ್ಜನೆಯೂ ಬ್ರಹ್ಮವಾಗಿಯೂ, ಪಡೆದ ಜ್ಞಾನದ ಉಳಿಸಿಕೊಳ್ಳುವಿಕೆಯು ವಿಷ್ಣುವಾಗಿಯೂ, ಅಜ್ಞಾನ ನಾಶವು ಶಿವ ಸಂಕೇತವಾಗಿ ಶುಭವಾಗುತ್ತದೆ, ಹೀಗಾಗಿಯೇ ದತ್ತಾತ್ರೇಯರು ಪರಮ ಗುರು ಎನಿಸಿಕೊಳ್ಳುತ್ತಾರೆ. ನಿರ್ಗುಣ ನಿರಾಕಾರ ಸತ್ ಚಿತ್ ಆನಂದದಾಯಕ ಪರಬ್ರಹ್ಮ ವಸ್ತುವಿನ ಅನುಭವ ಬರಬೇಕೆಂದರೆ ಋತ ಸತ್ಯಗಳ ಅರಿವಾಗಬೇಕು, ಇದಕ್ಕಾಗಿ ಜ್ಞಾನ ಸೃಷ್ಟಿಯಾಗಬೇಕು, ಸೃಷ್ಟಿಯಾದ ಜ್ಞಾನ ಶಾಶ್ವತವಾಗಿ ಉಳಿಯಬೇಕು, ಅಂತರದಲ್ಲಿ ಬರುವ ಅಜ್ಞಾನವು ನಾಶವಾಗಲೇ ಬೇಕು, ದತ್ತಾತ್ರೇಯ ರೂಪವು ತ್ರಿಮೂರ್ತಿ ಏಕತ್ರದ ಪರಮ ಸತ್ಯ ಸಂಕೇತವಾಗಿದೆ, ಇದನ್ನು ಅರಿತು ಪಾಲಿಸುವುದೇ ನಿಜವಾದ ದತ್ತಾತ್ರೇಯ ಪೂಜೆ ಮತ್ತು ಆರಾಧನೆ ಎನಿಸುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಇಂದಿನ ಪುಷ್ಪಾಲಂಕಾರ ಸೇವಾಕರ್ತರಾದ ಡಾ. ಜಾಧವ್ ಅವರನ್ನು ಗೌರವಿಸಿ ಆಶೀರ್ವದಿಸಲಾಯಿತು. ರಾಜನಹಳ್ಳಿ ಹರಿಹರಪ್ಪ ಟ್ರಸ್ಟಿನ ಶ್ರೀಧರ ಶ್ರೇಷ್ಠಿ, ಶ್ರೀಮತಿ ಗೀತಾ ಶ್ರೀಧರ್, ಅಧ್ಯಾತ್ಮ ಮಂದಿರದ ಶ್ರೀಯುತ ಆರ್.ಜಿ.ದತ್ತರಾಜ್ ಮುಂತಾದವರು ಭಾಗವಹಿಸಿದ್ದರು. ವೇದಮೂರ್ತಿ ಶಿವರಾಮ ಶಾಸ್ತ್ರೀ ಮುಂತಾದವರು ಪೂಜಾದಿಗಳನ್ನು ನೆರವೇರಿಸಿದರು.

ದತ್ತ ಜಯಂತಿಯ ಸಿಹಿಪ್ರಸಾದ ಸೇವಾಕರ್ತರಾದ ದಾವಣಗೆರೆ ಅರ್ಬನ್ ಬ್ಯಾಂಕಿನ ಉಪ ಮಹಾ ಪ್ರಬಂಧಕ ಪ್ರಸನ್ನ ಅವರನ್ನು ಆಶೀರ್ವದಿಸಿ, ಫಲ ಪ್ರಸಾದ ನೀಡಲಾಯಿತು. ಅಧ್ಯಾತ್ಮ ಮಂದಿರದ ಉಪಾಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್, ಕಾರ್ಯದರ್ಶಿ ಶ್ರೀಧರ್ ಶ್ರೇಷ್ಠಿ ಮುಂತಾದವರು ಅಲ್ಲಿದ್ದರು.

Adi Karnataka Vidyabhivruddi Sanga (R.) Davanagere, Karnataka

**MAHATMA GANDHI INSTITUTE OF PARA MEDICAL SCIENCES**

*(Recognised By Govt. Of Karnataka & Para Medical Board, Bengaluru)*
*AVK COLLEGE ROAD, P.J. EXTENSION, DAVANAGERE - 577002, KARNATAKA*

Ref. No. PMb228 **ಪ್ರಕಟಣೆ** Date : 20.12.2023

ಆದಿ ಕರ್ನಾಟಕ ವಿದ್ಯಾಭಿವೃದ್ಧಿ ಸಂಘದಡಿಯಲ್ಲಿ ನಡೆಯುತ್ತಿರುವ ಮಹಾತ್ಮಗಾಂಧಿ ಪ್ಯಾರಾಮೆಡಿಕಲ್ ಕಾಲೇಜಿನಲ್ಲಿ ಬೋಧಕ ವರ್ಗದ ಹುದ್ದೆಗಳಿಗೆ ಅರ್ಜಿಯನ್ನು ಆಹ್ವಾನಿಸಲು ಈ ಕೆಳಗೆ ಸೂಚಿಸಿದ ಕೋರ್ಸ್‌ಗಳಿಗೆ ಈ ಕೆಳಗೆ ಸೂಚಿಸಿದ ವಿದ್ಯಾರ್ಹತೆ ಹೊಂದಿರುವ ಆಸಕ್ತ ಅಭ್ಯರ್ಥಿಗಳಿಂದ ಆಫ್‌ಲೈನ್ ಮೂಲಕ ಈ ಕೆಳಗೆ ಸೂಚಿಸಿದ ವಿಳಾಸಕ್ಕೆ ದಿನಾಂಕ 7 ದಿನದೊಳಗಾಗಿ ಅಭ್ಯರ್ಥಿಯು ಬಯೋಡೇಟಾದೊಂದಿಗೆ ಅರ್ಜಿಗಳನ್ನು ತಲುಪಿಸಬೇಕಾಗಿ ವಿನಂತಿ.

**ವಿಳಾಸ : ಕಾರ್ಯದರ್ಶಿಗಳು, ಆದಿ ಕರ್ನಾಟಕ ವಿದ್ಯಾಭಿವೃದ್ಧಿ ಸಂಘ (ರಿ.) ಮಹಾತ್ಮ ಗಾಂಧಿ ಪ್ಯಾರಾಮೆಡಿಕಲ್ ಕಾಲೇಜು, ಪಿ.ಜೆ. ಬಡಾವಣೆ, ದಾವಣಗೆರೆ.**

| Sl.No | SUBJECT | QUALIFICATION |
|---|---|---|
| 1) | DMLT | 1) MD Pathology, 2) MD Microbiology, 3) MD Anatomy And Physiology. |
| 2) | DHI | 1) MD Community Medicine, 2) DPH, 3) MPH |
| 3) | X-RAY | 1) MD Radiology, 2) MBBS, 3) DMRD. |
| 4) | DOTT | 1) MD Anesthesia / Diploma Anasthesia. 2) MS Surgical Subjects |

**ಅಧ್ಯಕ್ಷರು,**
ಮಹಾತ್ಮಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾಮೆಡಿಕಲ್ ಸೈನ್ಸ್
ಪಿ.ಜೆ. ಬಡಾವಣೆ, ದಾವಣಗೆರೆ-577002

**ಕಾರ್ಯದರ್ಶಿಗಳು**
ಮಹಾತ್ಮಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾಮೆಡಿಕಲ್ ಸೈನ್ಸ್
ಪಿ.ಜೆ. ಬಡಾವಣೆ, ದಾವಣಗೆರೆ-577002



## ಭರಮಸಾಗರದಲ್ಲಿ ತರಳಬಾಳು ಶ್ರೀಗಳಿಗೆ ಸನ್ಮಾನ

ಭರಮಸಾಗರ, ಡಿ.28- ಇಲ್ಲಿನ ದೊಡ್ಡ ಕೆರೆಗೆ ಹರಿಸಲ್ಪಟ್ಟ ನೀರಿನ ಹಾಗೂ ಕೆರೆಯ ವೀಕ್ಷಣೆಗೆ ಆಗಮಿಸಿದ್ದ ಸಿರಿಗೆರೆ ಶ್ರೀ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಅವರನ್ನು ಭಕ್ತಿ ಪೂರ್ವಕವಾಗಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಮಾಜಿ ಸಚಿವ ಹೆಚ್.ಆಂಜನೇಯ, ಭರಮಸಾಗರದ ಶಾಸಕ ಚಂದ್ರಪ್ಪ, ಜಗಳೂರು ಶಾಸಕ ದೇವೇಂದ್ರಪ್ಪ, ಮಾಜಿ ಶಾಸಕರುಗಳಾದ ಹೆಚ್.ಪಿ. ರಾಜೇಶ್, ಎಸ್.ವಿ. ರಾಮಚಂದ್ರಪ್ಪ, ಮುಖಂಡರುಗಳಾದ ಡಿ.ವಿ. ಶರಣಪ್ಪ, ಜಿ.ಪಂ. ಮಾಜಿ ಸದಸ್ಯ ತಿಪ್ಪೇಸ್ವಾಮಿ ಸೇರಿದಂತೆ ಇತರರು ಈ ಸಂದರ್ಭದಲ್ಲಿದ್ದರು.

## ಆರೋಗ್ಯ ಕಾರಣದ ಮದ್ಯ ಅನುಮತಿ ಶೇ.58ರಷ್ಟು ಹೆಚ್ಚಳ

ಅಹಮದಾಬಾದ್, ಡಿ. 28 - ಗುಜರಾತ್‌ನಲ್ಲಿ ಆರೋಗ್ಯ ಕಾರಣದಿಂದ ಮದ್ಯ ಸೇವನೆಯ ಅನುಮತಿ ಹೊಂದಿರುವವರ ಸಂಖ್ಯೆ ಕಳೆದ ಮೂರು ವರ್ಷಗಳಲ್ಲಿ ಶೇ.58ರಷ್ಟು ಹೆಚ್ಚಾಗಿದೆ. ಗುಜರಾತ್‌ನಲ್ಲಿ ಪಾನ ನಿಷೇಧ ಇದೆ. ಇಲ್ಲಿ ಮದ್ಯದ ಉತ್ಪಾದನೆ, ಸಂಗ್ರಹ, ಮಾರಾಟ ಹಾಗೂ ಬಳಕೆ ನಿಷಿದ್ಧವಾಗಿದೆ. ಆರೋಗ್ಯ ಕಾರಣದಿಂದ ಮದ್ಯ ಸೇವನೆಗೆ ಅನುಮತಿ ನೀಡಲಾಗುತ್ತದೆ. ಇದಕ್ಕಾಗಿ ವೈದ್ಯಕೀಯ ಮಂಡಳಿಯ ಅನುಮತಿ ಪಡೆಯಬೇಕಾಗುತ್ತದೆ. ಮೂರು ವರ್ಷಗಳ ಹಿಂದೆ 27,452 ಅನುಮತಿ ಪಡೆದವರಿದ್ದರು. ಇವರ ಸಂಖ್ಯೆ ಈಗ 43,470ಕ್ಕೆ ತಲುಪಿದೆ.

# ವಸ್ತುಗಳನ್ನು ಖರೀದಿಸುವಾಗ ಜಾಗರೂಕರಾಗಿರಿ

**ಹರಿಹರ: 'ರಾಷ್ಟ್ರೀಯ ಗ್ರಾಹಕರ ದಿನಾಚರಣೆಯಲ್ಲಿ ಜಿಲ್ಲಾಧಿಕಾರಿ ಡಾ. ವೆಂಕಟೇಶ್**



ಹರಿಹರ, ಡಿ. 28-ನಾವೆಲ್ಲರೂ ಹುಟ್ಟಿನಿಂದ ಸಾಯುವವರೆಗೂ ಒಂದಲ್ಲಾ ಒಂದು ರೀತಿಯಲ್ಲಿ ಗ್ರಾಹಕರಾಗಿರುತ್ತೇವೆ. ಆದ್ದರಿಂದ ನಾವು ಖರೀದಿಸುವ ವಸ್ತುಗಳ ಗುಣಮಟ್ಟ ಮತ್ತು ಸೇವೆಗಳ ಕುರಿತು ಜಾಗರೂಕರಾಗಿರಬೇಕು ಎಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್.ಎಂ.ವಿ ತಿಳಿಸಿದರು.

ಗುರುವಾರ ಹರಿಹರದ ಎಸ್.ಜೆ.ವಿ.ಪಿ ಕಾಲೇಜು ಸಭಾಂಗಣದಲ್ಲಿ 'ಇ-ಕಾಮರ್ಸ್ ಮತ್ತು ಡಿಜಿಟಲ್ ವ್ಯಾಪಾರದ ಯುಗದಲ್ಲಿ ಗ್ರಾಹಕರ ರಕ್ಷಣೆ' ಎಂಬ ಘೋಷವಾಕ್ಯದೊಂದಿಗೆ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹಿಂದಿನ ಕಾಲದಲ್ಲಿ ಒಂದು ವಸ್ತುವನ್ನು ಕೊಟ್ಟು ಮತ್ತೊಂದು ವಸ್ತುವನ್ನು ವಿನಿಮಯ ಮಾಡಿಕೊಳ್ಳುವ ಮೂಲಕ ಜೀವನ ಸಾಗಿಸುವಂತಹ ವಿನಿಮಯ ಪದ್ಧತಿಯಿತ್ತು. ಆದರೆ ನಾಗರಿಕತೆ ಬದಲಾದಂತೆ ಪ್ರಚಲಿತ ಯುಗದಲ್ಲಿ ಪ್ರತಿಯೊಬ್ಬರೂ ಸಹ ಆನ್‌ಲೈನ್ ಮೂಲಕ ಡಿಜಿಟಲ್ ಪಾವತಿ ಮಾಡಿ ಅಗತ್ಯವಿರುವ ವಸ್ತು, ಪದಾರ್ಥ ಅಥವಾ ಸೇವೆಗಳನ್ನು ಪಡೆಯುತ್ತಿದ್ದಾರೆ.

ಗ್ರಾಹಕರಾದ ಪ್ರತಿಯೊಬ್ಬರೂ ಖರೀದಿಸುವ ವಸ್ತುಗಳ ಗುಣಮಟ್ಟದಲ್ಲಿ ವ್ಯತ್ಯಾಸವಾದಾಗ, ಗ್ರಾಹಕ ಮೋಸಕ್ಕೊಳಗಾಗುತ್ತಾನೆ. ಆದ್ದರಿಂದ ಗ್ರಾಹಕರು ಮೋಸದ ಬಗ್ಗೆ ಅಸಡ್ಡೆ ತೋರದೆ ಜಾಗರೂಕರಾಗಿ ಕಾನೂನಿನ ಅಡಿಯಲ್ಲಿ ವಂಚಿಸಿದವರಿಗೆ ಶಿಕ್ಷೆಗೆ ಒಳಪಡಿಸಲು ಮುಂದಾದಾಗ ಇಂತಹ ಮೋಸಗಳು ಮರುಕಳಿಸುವುದಿಲ್ಲ

ಅಲ್ಲದೇ, ಡಿಜಿಟಲ್ ಪಾವತಿಯ ಈ ಕಾಲದಲ್ಲಿ ಮೊಬೈಲ್‌ಗಳಿಗೆ ಬರುವ ಓಟಿಪಿ, ಆಧಾರ್ ನಂಬರ್, ಬ್ಯಾಂಕ್‌ಗೆ ಅಥವಾ ಇನ್ನಿತರೆ ಯಾವುದೇ ದಾಖಲೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಕಳುಹಿಸುವಂತೆ ಆನ್‌ಲೈನ್ ಮೂಲಕ ಸಂದೇಶಗಳು ಬಂದರೆ, ಸಾರ್ವಜನಿಕರು ಇವುಗಳಿಗೆ ಮಾರುಹೋದಲ್ಲಿ ವಂಚನೆಗಳಿಗೆ ಒಳಗಾಗಬೇಕಾಗುತ್ತದೆ. ಯಾವುದೇ ಬ್ಯಾಂಕ್‌ಗಳು ಗ್ರಾಹಕರಿಗೆ ಕರೆ ಮಾಡಿ ನಿಮ್ಮ ಓಟಿಪಿ, ಆಧಾರ್ ವಿವರ ಹೇಳಲು ತಿಳಿಸುವುದಿಲ್ಲ. ಆದ್ದರಿಂದ ವಂಚನೆ ಜಾಲದ ಬಗ್ಗೆ ಎಚ್ಚರ ವಹಿಸಬೇಕಾಗುತ್ತದೆ ಎಂದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ.ಕರೆಣ್ಣವರ ಮಾತನಾಡಿ, ರಾಷ್ಟ್ರೀಯ ಗ್ರಾಹಕರ ದಿನಾಚರಣೆಯ ಉದ್ದೇಶ ಬಹಳಷ್ಟು ಜನರಿಗೆ ಗ್ರಾಹಕರ ರಕ್ಷಣೆಗಾಗಿ ಇರುವ ಕಾನೂನುಗಳ ಮಾಹಿತಿ ಇರುವುದಿಲ್ಲ. ಈ ನಿಟ್ಟಿನಲ್ಲಿ ಗ್ರಾಹಕರ ರಕ್ಷಣೆಗಾಗಿ ಕಾನೂನಿನಲ್ಲಿ ಯಾವ ರೀತಿಯ ಅವಕಾಶಗಳಿವೆ ಎಂಬುದರ ಕುರಿತು ಜಾಗೃತಿ ಮೂಡಿಸುವುದಾಗಿದೆ.

ಡಿಜಿಟಲ್ ವ್ಯಾಪಾರದ ಯುಗದಲ್ಲಿ ಗ್ರಾಹಕರಿಗೆ ಮೋಸ, ವಂಚನೆ ಮತ್ತು ಅನುಕೂಲತೆಗಳನ್ನು ಮರೀಚಿಕೆ ಮಾಡುವಂತಹ ಪ್ರಯತ್ನಗಳು ಮಾರಾಟಗಾರರಿಂದ ಸಂಭವಿಸುತ್ತವೆ. ಆದ್ದರಿಂದ ಗ್ರಾಹಕರ ರಕ್ಷಣೆ ಅತ್ಯವಶ್ಯಕವಾಗಿದೆ. ಗ್ರಾಹಕರಿಗೆ ವಸ್ತುಗಳ ಖರೀದಿಸುವಿಕೆಗೆ ಯಾವುದೇ ರೀತಿಯ ಸಮಸ್ಯೆಯಾಗುತ್ತಿದ್ದರೆ ಸಂಬಂಧಪಟ್ಟ ಇಲಾಖೆಯವರು ಗ್ರಾಹಕರಿಗೆ ಬೆಂಬಲ ನೀಡಿ ಸೂಕ್ತ ನ್ಯಾಯ ಒದಗಿಸಲು ಮುಂದಾಗಬೇಕೆಂದರು.

ಕಾರ್ಯಕ್ರಮದ ಅಂಗವಾಗಿ ಕಾನೂನು ಮಾಪನ ಶಾಸ್ತ್ರ ಇಲಾಖೆ ವತಿಯಿಂದ ಗ್ರಾಹಕರ ಜಾಗೃತಿಗಾಗಿ ವಸ್ತು ಪ್ರದರ್ಶನ ಏರ್ಪಡಿಸಲಾಗಿತ್ತು.

ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ಮಹಾಂತೇಶ್ ಈರಪ್ಪ ಶಿಗ್ಲಿ, ಸದಸ್ಯರಾದ ಸಿ.ಎಸ್ ತ್ಯಾಗರಾಜನ್ ಮತ್ತು ಬಿ.ವಿ ಗೀತಾ, ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯಾಜ್ಯಗಳ ಇಲಾಖೆ ಉಪನಿರ್ದೇಶಕ ಶಿದ್ರಾಮ ಮಾರಿಹಾಳ್, ಎಸ್.ಜೆ.ವಿ.ಪಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಎನ್.ಹೆಚ್. ಶಿವಗಂಗಮ್ಮ, ಉಪಾಧ್ಯಕ್ಷರಾದ ಡಿ.ಎಂ. ಹಾಲಸ್ವಾಮಿ, ಡಿ.ಸಿ.ಐ.ಸಿ ಅಧ್ಯಕ್ಷರಾದ ಅನಿತಾ. ಹೆಚ್, ಪ್ರಾಧ್ಯಾಪಕ ವಿಶಾಲ್ ಬೆಂಚಿಹಳ್ಳಿ ಉಪಸ್ಥಿತರಿದ್ದರು.

# ಗಂಗಾಮತಸ್ಥರನ್ನು ಜಾಗೃತಿಗೊಳಿಸಲು ಚೌಡಯ್ಯ ಜಾತ್ರೆ



**ಜಾತ್ರೆಯ ಪೂರ್ವಭಾವಿ ಸಭೆಯಲ್ಲಿ ಶ್ರೀ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ**

ದಾವಣಗೆರೆ, ಡಿ.28- ರಾಜ್ಯದಲ್ಲಿ ಗಂಗಾಮತಸ್ಥರು 39 ಪಂಗಡಗಳಲ್ಲಿ ಹರಿದು ಹಂಚಿ ಹೋಗಿದ್ದಾರೆ. ಇವರೆಲ್ಲರನ್ನೂ ಒಂದೇ ವೇದಿಕೆಗೆ ತರುವ ಉದ್ದೇಶವನ್ನೂ ಅಂಬಿಗರ ಚೌಡಯ್ಯ ಜಾತ್ರೆ ಹೊಂದಿದೆ ಎಂದು ಶ್ರೀ ಶಾಂತ ಭೀಷ್ಮ ಚೌಡಯ್ಯ ಸ್ವಾಮೀಜಿ ಹೇಳಿದರು.

ನಗರದಲ್ಲಿರುವ ಜಿಲ್ಲಾ ಗಂಗಾಮತಸ್ಥರ ವಿದ್ಯಾರ್ಥಿ ನಿಲಯದಲ್ಲಿ ಜಿಲ್ಲಾ ಗಂಗಾಮತಸ್ಥರ ಸಂಘದಿಂದ ನಿನ್ನೆ ಹಮ್ಮಿಕೊಂಡಿದ್ದ ಜನವರಿ 14 ಮತ್ತು 15 ರಂದು ನಡೆಯಲಿರುವ ಅಂಬಿಗರ ಚೌಡಯ್ಯನವರ ಜಾತ್ರೆಯ ಪೂರ್ವಭಾವಿ ಸಭೆ ಮತ್ತು ಹಿರಿಯ ಚೇತನ ಕುಂಬಳೂರಿನ ಮಾಗಾನಹಳ್ಳಿ ಹಾಲಪ್ಪ ಅವರಿಗೆ ನುಡಿ ನಮನ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ವ್ಯಾಸ ಪರಂಪರೆ ಹಾಗೂ ಚೌಡಯ್ಯನವರ ಪರಂಪರೆಯನ್ನು ಬೆಳೆಸುವುದೂ ಕೂಡಾ ಜಾತ್ರೆ ಉದ್ದೇಶವಾಗಿದ್ದು, ಈ ಜಾತ್ರೆಗೆ ಸಮಾಜದವರು ಕುಟುಂಬ ಸಮೇತರಾಗಿ ಬರಬೇಕೆಂದರು.

ಗಂಗಾಮಾತೆಯನ್ನು ನಮ್ಮ ಕುಲ ದೇವತೆಯಾಗಿ ಮತ್ತು ಚೌಡಯ್ಯನವರನ್ನು ಕುಲ ದೇವರನ್ನಾಗಿ ನಮ್ಮ ಸಮಾಜದ ಪ್ರತಿಯೊಬ್ಬರೂ ಒಪ್ಪಿಕೊಂಡು ಆರಾಧಿಸಿದಾಗ ಮಾತ್ರ ನಮ್ಮ ಸಮಾಜದ ಸಂಘಟನೆ ಹಾಗೂ ಪ್ರಗತಿ ಸಾಧ್ಯ ಎಂದರು.

ಮೌಢ್ಯಗಳಿಂದ ಜನರನ್ನು ಹೊರ ತರಲು ಸಮಾಜಕ್ಕೆ ಶಿಕ್ಷಣ ಹಾಗೂ ಸಂಸ್ಕಾರ ನೀಡುವ ಈ ಜಾತ್ರೆ, ಸಮಾಜಕ್ಕೆ ದಿಕ್ಕು ತೋರಿಸಲಿದೆ ಎಂದು ವಿಶ್ವಾಸ ನಮಗಿದೆ ಎಂದ ಸ್ವಾಮೀಜಿ, ಮಠ ಹಾಗೂ ಗುರುಗಳು, ಹಿರಿಯರ ಬಗ್ಗೆ ಭಕ್ತಿ-ಭಾವ ಬೆಳೆಸಿಕೊಂಡಾಗ ಮಾತ್ರ ಸಮಾಜದಲ್ಲಿ ಬದಲಾವಣೆ ಸಾಧ್ಯ ಎಂದರು.

ನಾವು ಕಾವಿ ದೀಕ್ಷೆಯನ್ನು ಸ್ವೀಕರಿಸಿದ್ದು ಇದೇ ನಗರದಲ್ಲಿ. ಹಾಗಾಗಿ ನಮಗೆ ದಾವಣಗೆರೆ ಜಿಲ್ಲೆಯ ಬಗ್ಗೆ ವಿಶೇಷ ಪ್ರೀತಿ, ಕಾಳಜಿ ಇದೆ. ಪ್ರತಿ ವರ್ಷದಂತೆ ಈ ವರ್ಷವೂ ಜಾತ್ರೆಯ ಎರಡೂ ದಿನ ದಾವಣಗೆರೆ ಜಿಲ್ಲೆಯ ಭಕ್ತರು ದಾಸೋಹದ ಜವಾಬ್ದಾರಿ ವಹಿಸಿಕೊಳ್ಳಬೇಕೆಂದು ಸ್ವಾಮೀಜಿ ಹೇಳಿದರು.

ಕುಂಬಳೂರಿನ ಮಾಗಾನಹಳ್ಳಿ ಹಾಲಪ್ಪಜ್ಜನವರಿಗೆ 94 ವರ್ಷ ವಯಸ್ಸಾಗಿದ್ದರೂ ಮಗುವಿನಂತೆ ಸದಾ ಉತ್ಸಾಹದಿಂದ ಇರುತ್ತಿದ್ದರು. ಸಮಾಜ, ಮಠ, ಗುರುಗಳ ಬಗ್ಗೆ ಅತೀವ ಕಳಕಳಿ ಹೊಂದಿದ್ದರು. ಅವರು ಮುಗ್ಧ ಸ್ವಭಾವ ಹಾಗೂ ಸಂಸ್ಕಾರವಂತ ಹಿರಿಯ ಅಧ್ಯಾತ್ಮಿಕ ಚಿಂತಕರಾಗಿದ್ದರು. ಅವರ ಅಗಲಿಕೆ ಅವರ ಕುಟುಂಬಕ್ಕೆ ಅಷ್ಟೇ ಅಲ್ಲ, ಇಡೀ ಸಮಾಜಕ್ಕೆ ನಷ್ಟ ತಂದಿದೆ ಎಂದು ಸ್ವಾಮೀಜಿ ಹೇಳಿದರು.

ಜಿಲ್ಲಾ ಗಂಗಾಮತಸ್ಥರ ಸಂಘದ ಅಧ್ಯಕ್ಷ ಮಾಗಾನಹಳ್ಳಿ ಮಂಜುನಾಥ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಗಂಗಾಮತಸ್ಥರ ಸಂಘದ ಹಿರಿಯ ಉಪಾಧ್ಯಕ್ಷ ಪುಟಗನಾಳ್ ಮಂಜಣ್ಣ, ಮಾಜಿ ಜಿಲ್ಲಾ ಕಾರ್ಯದರ್ಶಿ ಬಿ.ಹೆಚ್.ರಂಗನಾಥ್, ಯೋಗರಾಜ್, ಉಪನ್ಯಾಸಕ ರಾಜೇಶ್ ರಬಕವಿ, ಜಿಲ್ಲಾ ಗಂಗಾಮತಸ್ಥರ ನೌಕರರ ಸಂಘದ ಅಧ್ಯಕ್ಷ ನಿಟ್ಟೂರು ಮಹಾಂತೇಶ್, ಮಲೇಬೆನ್ನೂರು ಪುರಸಭೆ ಸದಸ್ಯ ಗೌಡ್ರ ಮಂಜಣ್ಣ, ಕುಂಬಳೂರು ಗ್ರಾ.ಪಂ. ಮಾಜಿ ಅಧ್ಯಕ್ಷ ಆರ್.ಹೆಚ್.ಬಸವರಾಜ್, ಮುಖಂಡರಾದ ಕೆಂಚನಹಳ್ಳಿ ಮಹಾಂತೇಶಪ್ಪ, ಸುರೇಶ್, ಲಿಂಗರಾಜ್, ಪತ್ರಕರ್ತ ಜಿಗಳಿ ಪ್ರಕಾಶ್ ಅವರು ಮಾತನಾಡಿದರು.

ಈ ವೇಳೆ ಹೊನ್ನಾಳಿ ತಾ. ಗಂಗಾಮತಸ್ಥರ ಸಂಘದ ನೂತನ ಅಧ್ಯಕ್ಷ ವೆಂಕಟೇಶ್, ಉಪಾಧ್ಯಕ್ಷ ಚನ್ನೇಶ್ ಅವರನ್ನು ಅಭಿನಂದಿಸಲಾಯಿತು. ಕುಂಬಳೂರು ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಉಮಾದೇವಿ ಎಂ.ಹೆಚ್.ಶಿವರಾಮ ಚಂದ್ರಪ್ಪ, ಕೊಂಡಜ್ಜಿ ಬಸವರಾಜಪ್ಪ, ಸಾರಥಿ ಕೃಷ್ಣಪ್ಪ, ಮಲೇಬೆನ್ನೂರಿನ ಕಣ್ಣಾಳ್ ಪರಶುರಾಮಪ್ಪ, ಕಣ್ಣಾಳ್ ಹನುಮಂತಪ್ಪ, ನಿವೃತ್ತ ಎಇಇ ಕೃಷ್ಣಪ್ಪ ಜಾಡರ್, ನಿಟ್ಟೂರಿನ ಮಟ್ಟಿ ನಾಗರಾಜ್, ಕುಂಬಳೂರಿನ ಕರಡೇಪ್ಪರ ಬಸವರಾಜ್, ಎಂ.ಹೆಚ್.ಹನುಮಂತಪ್ಪ, ಎಂ.ಹೆಚ್.ಪರಮೇಶ್ವರಪ್ಪ, ಎಂ.ಹೆಚ್. ರಮೇಶ್, ಎಂ.ವಾಸುದೇವಮೂರ್ತಿ, ಎಂ. ಹೆಚ್.ಶರಣ್, ಗೋವಿನಹಾಳ್ ಚಂದ್ರಪ್ಪ, ನಿವೃತ್ತ ನೌಕರರಾದ ಶೇಖರಪ್ಪ, ತಿಪ್ಪಣ್ಣ, ಭೀಮೇಶ್ ಸೇರಿದಂತೆ ಇನ್ನೂ ಅನೇಕರು ಸಭೆಯಲ್ಲಿದ್ದರು.

ಲಿಂಗರಾಜ್ ಸ್ವಾಗತಿಸಿದರು. ಜಿಲ್ಲಾ ಗಂಗಾಮತಸ್ಥರ ಸಂಘದ ಕಾರ್ಯದರ್ಶಿ ಉಮೇಶ್ ಕಾರ್ಯಕ್ರಮ ನಿರೂಪಿಸಿದರು.

## ನಗರದಲ್ಲಿ ಇಂದು ಪಂಚವಟಿ ನಾಗ ಕಾಳಿಕಾದೇವಿ ಕಾರ್ತಿಕ



ಶಾಮನೂರು ಜೆ.ಹೆಚ್.ಪಟೇಲ್ ಬಡಾವಣೆಯ ಪಂಚವಟಿ ಶ್ರೀ ಮಾತಾ ನಾಗ ಕಾಳಿಕಾದೇವಿ ಕಾರ್ತಿಕೋತ್ಸವವು ಇಂದು ಸಂಜೆ 6.30ಕ್ಕೆ ನೆರವೇರಲಿದೆ.

# ತಮಿಳು ನಟ ವಿಜಯಕಾಂತ್ ನಿಧನ



ಚೆನ್ನೈ, ಡಿ. 28 - ಡಿ.ಎಂ.ಡಿ.ಕೆ. ಸ್ಥಾಪಕ ಹಾಗೂ ಹಿರಿಯ ತಮಿಳು ನಟ ವಿಜಯಕಾಂತ್ ಅವರು ನಿಧನರಾಗಿದ್ದಾರೆ. ಅವರಿಗೆ 71 ವರ್ಷ ವಯಸ್ಸಾಗಿತ್ತು.

ಅವರು ಪತ್ನಿ ಪ್ರೇಮಲತ ಹಾಗೂ ಇಬ್ಬರು ಮಕ್ಕಳನ್ನು ಅಗಲಿದ್ದಾರೆ. ಕಳೆದ ನಾಲ್ಕೈದು ವರ್ಷಗಳಿಂದ ಅವರು ಸಾರ್ವಜನಿಕ ಜೀವನದಲ್ಲಿ ಹೆಚ್ಚು ಕಾಣಿಸಿಕೊಂಡಿರಲಿಲ್ಲ. ಅವರ ಪತ್ನಿ ಪ್ರೇಮಲತ ಅವರು ಡಿಸೆಂಬರ್ 14ರಂದು ಡಿಎಂಡಿಕೆ ಪಕ್ಷದ ಜವಾಬ್ದಾರಿ ವಹಿಸಿಕೊಂಡಿದ್ದರು.

1991ರ 'ಕ್ಯಾಪ್ಟನ್ ಪ್ರಭಾಕರನ್' ಚಿತ್ರದ ಯಶಸ್ಸಿನ ನಂತರ ವಿಜಯಕಾಂತ್ ಅವರನ್ನು 'ಕ್ಯಾಪ್ಟನ್' ಎಂದೇ ಕರೆಯಲಾಗುತ್ತಿತ್ತು.

ಚಲನಚಿತ್ರಗಳಲ್ಲಿ ತಾವು ಗಳಿಸಿದ ಅಭಿಮಾನವನ್ನು ರಾಜಕೀಯ ಮುನ್ನಡೆಯ ಮೆಟ್ಟಿಲಾಗಿ ಬಳಸಿಕೊಳ್ಳಲು ವಿಜಯಕಾಂತ್ ಪ್ರಯತ್ನ ನಡೆಸಿದ್ದರು.

2005ರಲ್ಲಿ ಅವರು ರಾಜಕೀಯಕ್ಕೆ ಕಾಲಿಟ್ಟಿದ್ದರು. ತಮಿಳುನಾಡಿನ ಡಿ.ಎಂ.ಕೆ. ಹಾಗೂ ಎ.ಐ.ಎ.ಡಿ.ಎಂ. ಕೆ.ಗಳಿಗೆ ಪರ್ಯಾಯವಾಗಿ ಬೆಳೆಯಲು ಬಯಸಿದ್ದರು.

2006ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಅವರ ಪಕ್ಷ ಶೇ.8.40ರಷ್ಟು ಮತಗಳನ್ನು ಗಳಿಸಿತ್ತು. ಉತ್ತರ ತಮಿಳುನಾಡಿನ ವಿರುದಾಂಚಲಂ ಕ್ಷೇತ್ರದಲ್ಲಿ ಅವರು ಜಯ ಗಳಿಸಿದ್ದರು.

2009ರ ಲೋಕಸಭಾ ಚುನಾವಣೆಯಲ್ಲಿ ಅವರ ಪಕ್ಷ ಶೇ.10ಕ್ಕೂ ಹೆಚ್ಚು ಮತ ಗಳಿಸಿತ್ತು. 2011ರಲ್ಲಿ ಅವರು ಎ.ಐ.ಎ.ಡಿ.ಎಂ.ಕೆ. ಜೊತೆ ಕೈ ಜೋಡಿಸಿದ್ದರು. ಆಗ ಅವರ ಪಕ್ಷ 29 ಸ್ಥಾನಗಳಲ್ಲಿ ಗೆಲುವು ಸಾಧಿಸಿ ಎರಡನೇ ಅತಿ ದೊಡ್ಡ ಪಕ್ಷವಾಗಿತ್ತು.

ಎಐಎಡಿಎಂಕೆ ಜೊತೆಗಿನ ಮೈತ್ರಿ ಕಡಿದುಕೊಂಡ ಅವರು, 2014ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಜೊತೆ ಕೈ ಜೋಡಿಸಿದರು. ತಮಿಳುನಾಡಿನ 39 ಕ್ಷೇತ್ರಗಳ ಪೈಕಿ 14ರಲ್ಲಿ ಅವರ ಪಕ್ಷ ಸ್ಪರ್ಧಿಸಿತ್ತು. ಆದರೆ, ಶೇ.5.1ರಷ್ಟು ಮತ ಮಾತ್ರ ಗಳಿಸಲು ಸಾಧ್ಯವಾಗಿತ್ತು.

ನಂತರದಲ್ಲಿ ಅವರ ರಾಜಕೀಯ ಪ್ರಯಾಣ ನಿರಾಶಾದಾಯಕವಾಗಿತ್ತು. 2016ರ ವಿಧಾನಸಭಾ ಚುನಾವಣೆಯಲ್ಲಿ ಅವರ ಪಕ್ಷ ತೀವ್ರ ಮುಖಭಂಗಕ್ಕೀಡಾಗುವ ಜೊತೆಗೆ, ಉಳುಂದೂರುಪೇಟೆ ಕ್ಷೇತ್ರದಲ್ಲಿ ವಿಜಯಕಾಂತ್ ಠೇವಣಿ ಕಳೆದುಕೊಂಡಿದ್ದರು.

ವಿಜಯಕಾಂತ್ ಅಂತ್ಯಕ್ರಿಯೆಯನ್ನು ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿಸಲಾಗುವುದು ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ತಿಳಿಸಿದ್ದಾರೆ.

## ಎಂಟು ಭಾರತೀಯರು ಮರಣ ದಂಡನೆಯಿಂದ ಪಾರು

ನವದೆಹಲಿ, ಡಿ. 28 - ಗೂಢಚಾರಿಕೆ ಪ್ರಕರಣದಲ್ಲಿ ಬಂಧಿತರಾದ ಎಂಟು ಜನರಿಗೆ ವಿಧಿಸಲಾಗಿದ್ದ ಮರಣ ದಂಡನೆಯ ಶಿಕ್ಷೆಯನ್ನು ಕತಾರ್ ನ್ಯಾಯಾಲಯ ಕೈ ಬಿಟ್ಟಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ವಿದೇಶಾಂಗ ವ್ಯವಹಾರಗಳ ಸಚಿವಾಲಯ, ಬಂಧಿತರಾಗಿದ್ದ ನೌಕಾ ದಳದ ಎಂಟು ಮಾಜಿ ಉದ್ಯೋಗಿಗಳ ಶಿಕ್ಷೆಯನ್ನು ಕಡಿತಗೊಳಿಸಲಾಗಿದೆ ಎಂದು ಹೇಳಿದೆ.

ಬಂಧಿತ ಎಲ್ಲರೂ ದೋಹಾದ ದಹ್ರಾ ಗ್ಲೋಬಲ್ ಉದ್ಯೋಗಿಗಳಾಗಿದ್ದರು. ಅವರನ್ನು ಆಗಸ್ಟ್ 2022ರಲ್ಲಿ ಬಂಧಿಸಲಾಗಿತ್ತು.

## ಶ್ಯಾಬನೂರಿನಲ್ಲಿ ನಾಳೆ ಕಾರ್ತಿಕ



ದಾವಣಗೆರೆ, ಡಿ.28- ಶ್ಯಾಬನೂರಿನ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 30ರ ಶನಿವಾರ ಸಂಜೆ ಕಾರ್ತಿಕ ದೀಪೋತ್ಸವ ನಡೆಯಲಿದೆ.

## ತರಬೇತುದಾರ ಹೆಚ್. ದಾದಾಪೀರ್‌ಗೆ 'ಅತ್ಯುತ್ತಮ ಶಿಸ್ತು ತೀರ್ಪುಗಾರ' ಪ್ರಶಸ್ತಿ





ದಾವಣಗೆರೆ, ಡಿ. 28 - ಹಿರಿಯ ಕ್ರೀಡಾಪಟು ಅಂತರರಾಷ್ಟ್ರೀಯ ತೀರ್ಪುಗಾರರಾದ ಏಕಲವ್ಯ ಪ್ರಶಸ್ತಿ ವಿಜೇತ ಹೆಚ್.ದಾದಾಪೀರ್ ಅವರು ನವದೆಹಲಿಯಲ್ಲಿ ಇತ್ತೀಚೆಗೆ ನಡೆದ ಖೇಲೋ ಇಂಡಿಯಾ ಪ್ಯಾರಾ ಪವರ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ತೀರ್ಪುಗಾರರಾಗಿ ಭಾಗವಹಿಸಿ 'ಅತ್ಯುತ್ತಮ ಶಿಸ್ತು ತೀರ್ಪುಗಾರ' ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಹೆಚ್. ದಾದಾಪೀರ್ ಅವರಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಉಮಾ ಪ್ರಶಾಂತ್, ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಡಿವೈಎಸ್ಪಿ ಪಿ.ಬಿ.ಪ್ರಕಾಶ್, ಗ್ರೂಪ್ ಆಫ್ ಐರನ್ ಗೇಮ್ಸ್ ಅಭಿನಂದಿಸಿದ್ದಾರೆ.

## ಕರ್ನಾಟಕ ರಾಜ್ಯೋತ್ಸವ ಬಾಲ ಪ್ರಶಸ್ತಿಗೆ ಜಿ.ಬೇವಿನಹಳ್ಳಿಯ ಅನ್ವಿತಾ ಆಯ್ಕೆ



ಮಲೇಬೆನ್ನೂರು, ಡಿ.28- ಉಡುಪಿ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಂಗಳೂರಿನ ಇನ್ವೆಂಜರ್ ಫೌಂಡೇಷನ್ ಮತ್ತು ಕಾಟಪಾಡಿಯ ಸೃಷ್ಟಿ ಫೌಂಡೇಶನ್ ಮತ್ತು ಪ್ರಥಮ್ಸ್ ಮ್ಯಾಜಿಕ್ ವರ್ಲ್ಡ್ ಇವರುಗಳ ಸಂಯುಕ್ತಾಶ್ರಯದಲ್ಲಿ ಕರ್ನಾಟಕ ಸುವರ್ಣ ಮಹೋತ್ಸವದ ಅಂಗವಾಗಿ ಕೊಡಮಾಡುತ್ತಿರುವ ರಾಜ್ಯಮಟ್ಟದ ಮಕ್ಕಳ ಕರ್ನಾಟಕ ರಾಜ್ಯೋತ್ಸವ ಬಾಲಪ್ರಶಸ್ತಿಗೆ ಜಿ. ಬೇವಿನಹಳ್ಳಿಯ ಅಂಗನವಾಡಿ 'ಸಿ' ಕೇಂದ್ರದ ಪುಟಾಣಿ ಎನ್. ಅನ್ವಿತಾ ಆಯ್ಕೆಯಾಗಿದ್ದಾಳೆ.

ಇದೇ ದಿನಾಂಕ 31 ರ ಭಾನುವಾರ ಸಂಜೆ 4 ಗಂಟೆಗೆ ಕಾಟಪಾಡಿಯ ಎಸ್.ವಿ.ಎಸ್ ಬಯಲು ರಂಗಮಂದಿರದಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

## ನಗರದಲ್ಲಿ ಅಂಚೆ ಜನಸಂಪರ್ಕ ಅಭಿಯಾನ

ದಾವಣಗೆರೆ, ಡಿ. 28- ಭಾರತೀಯ ಅಂಚೆ ಇಲಾಖೆ, ದಾವಣಗೆರೆ ಅಂಚೆ ವಿಭಾಗದ ವತಿಯಿಂದ ದೇವರಾಜ ಅರಸು ಬಡಾವಣೆ, ವಿನೋಬನಗರ, ಮಿನಿ ವಿಧಾನಸೌಧ ಹಾಗೂ ಬಿಎಲ್ ರೋಡ್ ಅಂಚೆ ಕಛೇರಿಗಳ ಸಹ ಭಾಗಿತ್ವದಲ್ಲಿ ನಾಡಿದ್ದು ದಿನಾಂಕ 30ರ ಶನಿವಾರ ಅಂಚೆ ಜನಸಂಪರ್ಕ ಅಭಿಯಾನ 'ಅಂಚೆ ಕಛೇರಿ ಎಲ್ಲಾ ಸೇವೆಗಳು ಒಂದೇ ಸೂರಿನಡಿಯಲ್ಲಿ' ಕಾರ್ಯಕ್ರಮ ಏರ್ಪಡಿಸಲಾಗಿದೆ.

ಪಿಎಲ್‌ಐ, ಆರ್‌ಪಿಎಲ್‌ಐ ಮತ್ತು ಎಸ್‌ಬಿ, ಆರ್‌ಡಿ, ಎಂಎಸ್‌ಎಸ್‌ಸಿ ಖಾತೆ ಮತ್ತು ಐಪಿಪಿಬಿ ಖಾತೆಗಳ ತೆರೆಯುವಿಕೆ, ಆಧಾರ್ ಸೀಡಿಂಗ್, ಅಪಘಾತ ವಿಮೆ ಪಾಲಿಸಿಗಳು (GAG) ಮುಂತಾದ ಅಂಚೆ ಕಛೇರಿಯ ಸೇವೆಗಳು ಒಂದೇ ಸೂರಿನಡಿಯಲ್ಲಿ ಎಂಬ ಕಾರ್ಯಕ್ರಮ ನಡೆಯಲಿದ್ದು, ಸಾರ್ವಜನಿಕರು ಇದರ ಸದುಪಯೋಗಪಡಿಸಿಕೊಳ್ಳಲು ಅಂಚೆ ಅಧೀಕ್ಷಕರು ತಿಳಿಸಿದ್ದಾರೆ.

## 5ರಂದು ತುಳಜಾ ಭವಾನಿ ದೇವಸ್ಥಾನದಲ್ಲಿ ಕಾರ್ತಿಕ



ದಾವಣಗೆರೆ,ಡಿ.28- ಇಲ್ಲಿನ ಕೆಟಿಜೆ ನಗರದಲ್ಲಿರುವ ಶ್ರೀ ತುಳಜಾ ಭವಾನಿ ದೇವಸ್ಥಾನದಲ್ಲಿ ಬರುವ ಜನವರಿ 5 ರಂದು ಕಾರ್ತಿಕ ದೀಪೋತ್ಸವ ನಡೆಯಲಿದೆ. ಭಕ್ತಾದಿಗಳು ಕಾರ್ತಿಕೋತ್ಸವದಲ್ಲಿ ಭಾಗವಹಿಸುವಂತೆ ದೇವಸ್ಥಾನ ಸಮಿತಿ ವಿನಂತಿಸಿದೆ.

# ಕದಳಿ ಮಹಿಳಾ ವೇದಿಕೆಯ ಸರ್ವ ಸದಸ್ಯರ ಸಾಮಾನ್ಯ ಸಭೆ



ದಾವಣಗೆರೆ, ಡಿ. 28 - ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಂಗ ಸಂಸ್ಥೆಯಾದ ಕದಳಿ ಮಹಿಳಾ ವೇದಿಕೆಯು 149ನೇ ಕಮ್ಮಟದಲ್ಲಿ ಸರ್ವ ಸದಸ್ಯರ ಸಾಮಾನ್ಯ ಸಭೆ, ದತ್ತಿ ಉಪನ್ಯಾಸ, ಶರಣ ಒಕ್ಕಲಿಗ ಮುದ್ದಣ್ಣ ಮತ್ತು ಶರಣ ಮಾದರ ಚೆನ್ನಯ್ಯ ಸ್ಮರಣೆ, ಗೌರವಾರ್ಪಣೆ ಹಾಗೂ ಸದಸ್ಯರಿಗೆ ಆಟಗಳನ್ನು ಏರ್ಪಡಿಸಲಾಗಿತ್ತು.

ನಗರದ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದ ಆವರಣದಲ್ಲಿ ತರಳಬಾಳು ಸಭಾಭವನದಲ್ಲಿ ಈ ಕಾರ್ಯಕ್ರಮ ನಡೆಯಿತು. ಕದಳಿ ಮಹಿಳಾ ವೇದಿಕೆಯ ಸಲಹಾ ಸಮಿತಿಯ ಸದಸ್ಯರಾದ ಶ್ರೀಮತಿ ಉಮಾ ವೀರಭದ್ರಪ್ಪ ಅವರು ಅಧ್ಯಕ್ಷತೆ ವಹಿಸಿದ್ದರು.

ಸಹಜ ಕೃಷಿಕ ರಾಘವ ಇವರಿಂದ ನಿಜವಾದ ಆಹಾರ ಪದ್ಧತಿ ಎಂಬ ವಿಷಯದ ಬಗ್ಗೆ ಉಪನ್ಯಾಸ ನಡೆಸಲಾಯಿತು. ಅವರು ಇಂದಿನ ಆಹಾರ ಪದ್ಧತಿಯಲ್ಲಿ ಅಡಕವಾಗಿ ರುವ ರಾಸಾಯನಿಕವನ್ನು ಮುಕ್ತಗೊಳಿಸಿ, ನಿಜವಾದ ಆಹಾರವನ್ನು ಉಪಯೋಗಿಸುವ ಬಗ್ಗೆ ತಿಳಿಸಿದರು.

ಜಿಲ್ಲಾ ಘಟಕದ ಅಧ್ಯಕ್ಷರಾದ ಶ್ರೀಮತಿ ವಿನೋದ ಅಜಗಣ್ಣನವರು ಸ್ವಾಗತಿಸಿದರು. ಜಿಲ್ಲಾ ಖಜಾಂಚಿಯಾದ ಶ್ರೀಮತಿ ರತ್ನ ರೆಡ್ಡಿ ಅವರು ಆಯವ್ಯವನ್ನು ಮಂಡಿಸಿದರು. ತಾಲ್ಲೂಕು ಕಾರ್ಯದರ್ಶಿ ಶ್ರೀಮತಿ ವಸಂತ ಕೆ.ಆರ್. ಅವರು ದತ್ತಿ, ದಾನಿಗಳು ಮತ್ತು ಉಪನ್ಯಾಸಕರನ್ನು ಪರಿಚಯಿಸಿದರು

ದಿ. ಪಟೇಲ್ ಜಿ ಜಯಪ್ಪ ಮತ್ತು ಶ್ರೀಮತಿ ಸುಂದರಮ್ಮ ಜಯಪ್ಪ ಇವರ ದತ್ತಿ ಕಾರ್ಯಕ್ರಮದಲ್ಲಿ ಡಾ|| ಮಂಜುನಾಥ ಗೌಡ ಮತ್ತು ಶ್ರೀಮತಿ ಮಂಜುಳಾರವರು ದತ್ತಿ ದಾನಿಗಳಾಗಿದ್ದರು.

ಶ್ರೀಮತಿ ಸುಧಾ ದಿಬ್ಬಳ್ಳಿ, ಶ್ರೀಮತಿ ಸುವರ್ಣಮ್ಮ ದೊಗ್ಗಳ್ಳಿ, ಶ್ರೀಮತಿ ಶಾಂತವೀರಮ್ಮ ಇವರಿಗೆ ವೇದಿಕೆಯ ವತಿಯಿಂದ ಗೌರವಾರ್ಪಣೆ ಮಾಡಲಾಯಿತು. ಇವರುಗಳ ಪರಿಚಯವನ್ನು ಶ್ರೀಮತಿ ಮಮತಾ ನಾಗರಾಜ್ ಮಾಡಿದರು.

ಕದಳಿ ಮಹಿಳಾ ವೇದಿಕೆಯ ಗೌರವ ಸಲಹೆಗಾರರಾದ ಶ್ರೀಮತಿ ಯಶಾ ದಿನೇಶ್, ಕದಳಿ ಮಹಿಳಾ ವೇದಿಕೆಯ ರಾಜ್ಯ ಸಮಿತಿಯ ಉಪ ಸಂಚಾಲಕರಾದ ಶ್ರೀಮತಿ ಪ್ರಮೀಳಾ ನಟರಾಜ್, ತಾಲ್ಲೂಕು ಘಟಕದ ಅಧ್ಯಕ್ಷರಾದ ಶ್ರೀಮತಿ ಗಾಯತ್ರಿ ವಸ್ತ್ರದ್ ಹಾಗೂ ನಿಕಟ ಪೂರ್ವ ಅಧ್ಯಕ್ಷರಾದ ಶ್ರೀಮತಿ ಕುಸುಮಾ ಲೋಕೇಶ್ ಅವರು ಗೌರವ ಉಪಸ್ಥಿತರಿದ್ದರು.

ಶ್ರೀಮತಿ ಸೌಮ್ಯ ಸತೀಶ್ ಅವರು ವಂದನಾರ್ಪಣೆ ಮಾಡಿದರು. ಶ್ರೀಮತಿ ವಾಣಿ ರಾಜ್ ನಿರೂಪಿಸಿದರು.


## ಹತ್ತನೇ ವರ್ಷದ ಚಿರಸ್ಮರಣೆ



**ದಿ|| ವಾಣಿ ವಿಲಾಸ್ ಶ್ರೀ ಎಸ್.ಆರ್. ವೀರಪ್ಪ**

ಶ್ರೀ ವಾಣಿ ವಿಲಾಸ್ ರೈಸ್ ಮಿಲ್ ಮಾಲೀಕರು

ನಿಧನ : 29.12.2013

ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಪತ್ನಿ : ಶ್ರೀಮತಿ ಶಾರದಮ್ಮ ವೀರಪ್ಪ

ಎಸ್.ವಿ. ಉಮೇಶ್, ಎಸ್.ವಿ. ಪ್ರಭು, ಎಸ್.ವಿ. ಶೈಲೇಂದ್ರಬಾಬು

ಸೊಸೆಯಂದಿರು, ಮಗಳು, ಅಳಿಯ, ಮೊಮ್ಮಕ್ಕಳು

ವಾಣಿ ವಿಲಾಸ ಸಹೋದರರು ಮತ್ತು ಬಂಧು-ಮಿತ್ರರು.

- ಶ್ರೀ ವಾಣಿ ಟ್ರಾನ್ಸ್‌ಪೋರ್ಟ್, ಉಮೇಶ್
- ಶ್ರೀ ವಾಣಿ ಕಾರ್ಪೊರೇಷನ್, ಪ್ರಭು (ಗ್ಯಾಸ್ ಅಂಗಡಿ)
- ಶ್ರೀ ವಾಣಿ ಟ್ರೇಡಿಂಗ್ ಕಾರ್ಪೊರೇಷನ್, ಶೈಲೇಂದ್ರ ಬಾಬು